ಉಚಿತ ಪುಸ್ತಕ

ಕಂಪ್ಯೂಟರ್ ಮತ್ತು ಕನ್ನಡ

ಪದವಿ ವಿದ್ಯಾರ್ಥಿಗಳು ಮತ್ತು ಕಂಪ್ಯೂಟರಿನಲ್ಲಿ
ಕನ್ನಡ ಬಳಸುವ ಆಸಕ್ತಿ ಇರುವವರಿಗೆ
ಪರಿಚಯಾತ್ಮಕ ಪಠ್ಯಪುಸ್ತಿಕೆ

SURANA COLLEGE
ಸುರಾನಾ ಕಾಲೇಜು

FREE BOOK CULTURE

ಮಿತ್ರಮಾಧ್ಯಮ

ಕಂಪ್ಯೂಟರ್ ಮತ್ತು ಕನ್ನಡ

ಪದವಿ ವಿದ್ಯಾರ್ಥಿಗಳು ಮತ್ತು ಕಂಪ್ಯೂಟರಿನಲ್ಲಿ ಕನ್ನಡ ಬಳಸುವ
ಆಸಕ್ತಿ ಇರುವವರಿಗೆ ಪರಿಚಯಾತ್ಮಕ ಪಠ್ಯಪುಸ್ತಿಕೆ

ಲೇಖಕರು

ಡಾ॥ ಎ.ಸತ್ಯನಾರಾಯಣ
ಬೇಳೂರು ಸುದರ್ಶನ
ಟಿ.ಜಿ.ಶ್ರೀನಿಧಿ
ಓಂಶಿವಪ್ರಕಾಶ್
ಡಾ॥ ಯು.ಬಿ.ಪವನಜ

ಪ್ರಕಾಶಕರು

ಮಿತ್ರಮಾಧ್ಯಮ
೯೧೭ಎ (೧೦೪೪), ಕೃಷ್ಣ, ಮಹಡಿ
೧ನೇ ಎಫ್ ಮುಖ್ಯರಸ್ತೆ
ಗಿರಿನಗರ ೨ನೇ ಹಂತ
ಬೆಂಗಳೂರು ೫೬೦೦೮೫

ಮತ್ತು
ಕನ್ನಡ ವಿಭಾಗ
ಸುರಾನಾ ಕಾಲೇಜು
ನಂ. ೧೬, ನಿಟ್ಟೂರು ಶ್ರೀನಿವಾಸರಾವ್ ರಸ್ತೆ
ಬೆಂಗಳೂರು ೫೬೦೦೦೪

ಮೊದಲ ಮುದ್ರಣ: ಸೆಪ್ಟೆಂಬರ್ ೨೦೧೪
ಆಕಾರ: ೧/೮ ಡೆಮಿ
ಪ್ರತಿಗಳು: ೧೦೦೦
ಪುಟಗಳು: ೮೦+೪
ಖರೀದಿಸಬಹುದಾದ ಬೆಲೆ: ರೂ. ೨೦

ಮುದ್ರಣ
ರೀಗಲ್ ಪ್ರಿಂಟ್ ಸರ್ವಿಸ್
ಬೆಂಗಳೂರು – ೫೬೦೦೧೮
ಕರವಾಣಿ: ೯೯೬೪೩ ೫೧೬೫೫

COMPUTER & KANNADA

An introductory textbook for graduate students and those interested in using Kannada in Computers.

AUTHORS

Dr. A. Sathyanarayana
Beluru Sudarshana
T.G.Srinidhi
Om Shivaprakash
Dr. U.B.Pavanaja

PUBLISHED BY

MITRAMAADHYAMA
917/A, [1044], KRISHNA, Upstairs
1st F Main Road Girinagara II Stage
Bangalore 560085
beluru@beluru.com

AND
KANNADA DEPARTMENT
Surana College
No. 16, Nittur Srinivasa Rao Road
Bangalore 560004

First Edition: September 2014

Size: 1/8 Demy

Copies: 1000

Pages: 80+4

Purchasable Price: Rs. 20/-

Printed at
Regal Print Service
Bangalore - 560018
Mobile: 99643 51655

ಕನ್ನಡವೂ ಬೆಳೆಯಲಿ, ಪುಸ್ತಕ ಸಂಸ್ಕೃತಿ ವಿಸ್ತರಿಸಲಿ

ಪ್ರಿಯರೇ, ನಮಸ್ಕಾರಗಳು.

'ಕಂಪ್ಯೂಟರ್ ಮತ್ತು ಕನ್ನಡ' – ಈ ಪರ್ಯಾಯ ಪಠ್ಯಪುಸ್ತಿಕೆಯನ್ನು ನಿಮ್ಮ ಕೈಯಲ್ಲಿ ಇಡಲು 'ಮಿತ್ರಮಾಧ್ಯಮ'ವು ಸಂತೋಷಪಡುತ್ತದೆ. ಕರ್ನಾಟಕ ರಾಜ್ಯದ ಪದವಿ ತರಗತಿಯ ವಿದ್ಯಾರ್ಥಿಗಳಿಗೆ ನೆರವಾಗಲು ಈ ಪುಸ್ತಿಕೆಯನ್ನು ರೂಪಿಸಿದ್ದೇವೆ. ಕಂಪ್ಯೂಟರಿನಲ್ಲಿ ಕನ್ನಡವನ್ನು ಹೇಗೆ ಮತ್ತು ಎಷ್ಟರಮಟ್ಟಿಗೆ ಬಳಸಬಹುದು ಎಂಬ ಪಕ್ಷಿನೋಟವನ್ನು ಈ ಪುಸ್ತಿಕೆಯು ನೀಡುತ್ತದೆ. ಈ ಪುಸ್ತಕವು ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಕಂಪ್ಯೂಟರಿನಲ್ಲಿ ಕನ್ನಡವನ್ನು ಬಳಸಬೇಕೆಂಬ ಕಾಳಜಿ ಮತ್ತು ಆಸಕ್ತಿ ಇರುವ ಎಲ್ಲರಿಗೂ ಉಪಯುಕ್ತವಾಗುತ್ತದೆ ಎಂಬ ವಿಶ್ವಾಸ ನಮ್ಮದು.

ಆದರೆ ಈ ಪುಸ್ತಿಕೆಯು ಕನ್ನಡ – ಕಂಪ್ಯೂಟರಿನ ಎಲ್ಲಾ ಅಂಶಗಳನ್ನೂ ಪಠ್ಯಪುಸ್ತಕಗಳ ಮಾದರಿಯಲ್ಲಿ ವಿವರಿಸುವುದಿಲ್ಲ. ಬದಲಿಗೆ ನೀವು ಕನ್ನಡಪ್ರೀತಿಯನ್ನು ಬೆಳೆಸಿಕೊಳ್ಳುವುದಕ್ಕೆ ಬೇಕಾದ ಅಂಶಗಳತ್ತ ಬೆಳಕು ಚೆಲ್ಲುತ್ತದೆ; ದಿಕ್ಸೂಚಿ ಮಾಹಿತಿ ನೀಡುತ್ತದೆ.

ಇದು ಯುವ ಸಮುದಾಯದಲ್ಲಿ ಕಂಪ್ಯೂಟರ್‌ನಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನಮ್ಮ ಮೊದಲ ಯತ್ನ. ನೀವು ಈ ಪುಸ್ತಕವನ್ನು ಇಷ್ಟಪಟ್ಟರೆ ಇದನ್ನು ಇನ್ನೂ ಪರಿಷ್ಕರಿಸಿ ಪ್ರಕಟಿಸುವೆವು. ಉಚಿತವಾಗಿ ಹಂಚುವೆವು!

ಈ ಪುಸ್ತಕಕ್ಕೆ ಮೂಲಕಾರಣ, ನಾವು ಬೆಂಗಳೂರಿನ ಸುರಾನಾ ಪ್ರಥಮ ದರ್ಜೆ ಕಾಲೇಜಿನಲ್ಲಿ 2012ರಲ್ಲಿ ಮಾಡಿದ ಪಾಠಗಳು. ಈ ಪಾಠಗಳಿಗೆ ಕೋರಿಕೆ ಇಟ್ಟ ಕಾಲೇಜಿನ ಆಗಿನ ಪ್ರಾಂಶುಪಾಲ ಶ್ರೀ ಎ.ಎಸ್. ಚಂದ್ರಮೌಳಿ ಮತ್ತು ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ॥ವತ್ಸಲಾ ಮೋಹನ್. 2012–13 ಸಾಲಿನ ಎಲ್ಲ ವಿದ್ಯಾರ್ಥಿಗಳೂ ನಮ್ಮ ಪಾಠವನ್ನು ಕೇಳಿ ಖುಷಿಪಟ್ಟಿದ್ದಾರೆ. ಮರುವರ್ಷವೂ ಇದೇ ಪಾಠಗಳನ್ನು ನಡೆಸಿಕೊಟ್ಟ ಸಂತಸ ನಮ್ಮದು.

ಇಲ್ಲಿರುವ ಪಾಠಬರಹಗಳನ್ನು ನಮ್ಮ ಉಪನ್ಯಾಸಗಳಿಂದಲೇ ರೂಪಿಸಲಾಗಿದೆ. ಪುಟಮಿತಿಯ ಕಾರಣದಿಂದ ಪ್ರಯೋಗದ ಅಂಶಗಳನ್ನು ಇಲ್ಲಿ ಸೇರಿಸಿಲ್ಲ. ಆದ್ದರಿಂದ ನೀವು ಈ ಪಾಠಬರಹಗಳನ್ನು ಎದುರಿಗೆ ಕಂಪ್ಯೂಟರ್ ಇಟ್ಟುಕೊಂಡೇ ಓದಿ, ತಿಳಿದು ಕಲಿಯಲು ಯತ್ನಿಸಬೇಕು ಎಂಬುದು ನಮ್ಮ ಆತ್ಮೀಯ ಸಲಹೆ.

ಮೊದಲ ಆವೃತ್ತಿಯ ಎಲ್ಲ ಲೋಪಗಳನ್ನೂ ಈ ಪುಸ್ತಕ ಹೊಂದಿದೆ. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ನೀಡಿ, ಪುಸ್ತಕವನ್ನು ಪರಿಷ್ಕರಿಸಲು ನೆರವಾಗಿ ಎಂದು ಮುಕ್ತವಾಗಿ ಕೇಳಿಕೊಳ್ಳುವೆವು.

'ಉಚಿತ ಪುಸ್ತಕ ಸಂಸ್ಕೃತಿ' ಚಳವಳಿಯ ಭಾಗವಾಗಿ ಪ್ರಕಟವಾಗುತ್ತಿರುವ ಈ ಪುಸ್ತಿಕೆಯನ್ನು ಬೆಂಬಲಿಸಿದ ತಮಗೆಲ್ಲರಿಗೂ ಮತ್ತೊಮ್ಮೆ ವಂದನೆಗಳು.

ಭರ್ರನೆ ಬದಲಾಗುತ್ತಿರುವ ಕಾಲಮಾನದಲ್ಲಿ ಉಚಿತ ಪುಸ್ತಕ ಸಂಸ್ಕೃತಿಯೂ ಒಂದು ಪುಟ್ಟ ಹೆಜ್ಜೆ.

ಬೇಳೂರು ಸುದರ್ಶನ
ರಾಮನಾಥ ಜಿಪಿ ಮಯ್ಯ
(ಟ್ರಸ್ಟೀಗಳು, ಮಿತ್ರಮಾಧ್ಯಮ)

ಸುರಾನಾ ಕಾಲೇಜಿನ ಎರಡು ಮಾತು

ಸುರಾನಾ ಕಾಲೇಜಿನ ಕನ್ನಡ ವಿಭಾಗವು ಶಿಕ್ಷಣಕ್ಕೆ ಪೂರಕವಾಗುವ ಮೌಲ್ಯವರ್ಧನ ಚಟುವಟಿಕೆಗಳಲ್ಲಿ ಬಹಳ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾ ಬಂದಿದೆ. ಪಠ್ಯ ಮತ್ತು ಪಠ್ಯೇತರ ಸಂಬಂಧಿಯಾದ ಅನೇಕ ಕಾರ್ಯಕ್ರಮಗಳನ್ನು ನಡೆಸಿ, ಈ ಕಾರ್ಯಾಗಾರಗಳ ಫಲಶ್ರುತಿಯಾಗಿ ಅನೇಕ ಪುಸ್ತಕಗಳನ್ನೂ ಪ್ರಕಟಿಸಿದೆ. ಇಂದು ಬಿಡುಗಡೆಯಾಗುತ್ತಿರುವ 'ಕಂಪ್ಯೂಟರ್ ಮತ್ತು ಕನ್ನಡ' ಎಂಬ ಈ ಪುಸ್ತಕ ವಿಭಾಗದ ಕಿರೀಟಕ್ಕೆ ಮತ್ತೊಂದು ಹೆಮ್ಮೆಯ ಗರಿ ಎಂದು ಹೇಳಿದರೆ ತಪ್ಪಲ್ಲ.

ಕಳೆದ ವರ್ಷ ಅಂದರೆ 20013–14ರ ಸಾಲಿನ ಶೈಕ್ಷಣಿಕ ವರ್ಷದಲ್ಲಿ 'ಮಿತ್ರಮಾಧ್ಯಮ ಟ್ರಸ್ಟ್'ನ ಸಹಯೋಗದೊಂದಿಗೆ ಮೂರನೆಯ ಸೆಮಿಸ್ಟರ್ ಬಿ.ಕಾಂ ಹಾಗೂ ಬಿ.ಬಿ.ಎಂ ವಿದ್ಯಾರ್ಥಿಗಳಿಗಾಗಿ ಕನ್ನಡ ಕಂಪ್ಯೂಟರ್ ಲೋಕದ ವಿವಿಧ ವಿಚಾರಗಳನ್ನು ತರಗತಿ ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ಕಲಿಸಿಕೊಡಲಾಯಿತು. ಸರ್ವಶ್ರೀ ಟಿ.ಜಿ.ಶ್ರೀನಿಧಿ, ಡಾ॥ಎ ಸತ್ಯನಾರಾಯಣ, ಡಾ॥ಯು.ಬಿ.ಪವನಜ, ಓಂ ಶಿವಪ್ರಕಾಶ್, ಎನ್‌ಎಎಂ ಇಸ್ಮಾಯಿಲ್ ಮತ್ತು ಬೇಳೂರು ಸುದರ್ಶನ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಇವರೆಲ್ಲರಿಗೆ ಕಾಲೇಜು ಮತ್ತು ವಿಭಾಗದ ಪರವಾಗಿ ಹೃತ್ಪೂರ್ವಕ ವಂದನೆಗಳು.

ಈ ಕಾರ್ಯಾಗಾರದಲ್ಲಿ ಮಾಡಿದ ಉಪನ್ಯಾಸಗಳನ್ನು ನಮ್ಮ ವಿಭಾಗ ಮಿತ್ರಮಾಧ್ಯಮದ ಸಹಯೋಗದೊಂದಿಗೆ ಹೊರತರುತ್ತಿದೆ. ಕಾರ್ಯಾಗಾರವನ್ನು ನಡೆಸಲು ಎಲ್ಲ ಬಗೆಯ ಉತ್ತೇಜನ ಹಾಗೂ ಮಾರ್ಗದರ್ಶನವನ್ನು ಇತ್ತ ನಮ್ಮ ಮಾಜಿ ಪ್ರಾಂಶುಪಾಲರಾದ ಶ್ರೀ ಎ.ಎಸ್.ಚಂದ್ರಮೌಳಿ ಅವರಿಗೆ ನಮ್ಮ ಕೃತಜ್ಞತೆಗಳು. ನಮಗೆ ಸದಾ ಉತ್ತೇಜನ ನೀಡಿ ಪ್ರೋತ್ಸಾಹಿಸುತ್ತಿರುವ ನಮ್ಮ ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಅರ್ಚನಾ ಸುರಾನಾ ಮತ್ತು ನಮ್ಮ ಪ್ರಾಂಶುಪಾಲರಾದ ಡಾ॥ ಬಿ.ಎಸ್.ಶ್ರೀಕಂಠ ಅವರನ್ನು ಪ್ರೀತಿಯಿಂದ ನೆನೆಯುತ್ತೇವೆ. ನಮಗೆ ಕಂಪ್ಯೂಟರ್ ಲ್ಯಾಬಿನಲ್ಲಿ ಎಲ್ಲ ಬಗೆಯ ಸಹಾಯವನ್ನು ಒದಗಿಸಿ ಕೊಟ್ಟ ಕಂಪ್ಯೂಟರ್ ವಿಭಾಗದ ಮುಖ್ಯಸ್ಥ ಶ್ರೀ ಶ್ರೀನಿವಾಸ್, ಅಧ್ಯಾಪಕರು ಹಾಗೂ ಸಿಬ್ಬಂದಿಗಳನ್ನು ಮತ್ತು ವಿದ್ಯಾರ್ಥಿ ವೃಂದವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಡಾ॥ ಬಿ.ಎಸ್. ಶ್ರೀಕಂಠ
ಪ್ರಾಂಶುಪಾಲರು

ಡಾ॥ ವತ್ಸಲಾ ಮೋಹನ್
ಡಾ॥ ವಿಶಾಲಾ ವಾರಣಾಶಿ
ಕನ್ನಡ ವಿಭಾಗ, ಸುರಾನಾ ಕಾಲೇಜು

ಕಂಪ್ಯೂಟರ್ ಮತ್ತು ಕನ್ನಡ

ಪರಿವಿಡಿ

	ಪಾಠ	ಪುಟ
೧	ಕಂಪ್ಯೂಟರಿನಲ್ಲಿ ಕನ್ನಡದ ಬಳಕೆ ಡಾ॥ ಎ.ಸತ್ಯನಾರಾಯಣ	6
೨	ಕನ್ನಡ ಮತ್ತು ಡಿಟಿಪಿ ಬೇಳೂರು ಸುದರ್ಶನ	21
೩	ಅಂತರಜಾಲ ಮತ್ತು ಕನ್ನಡ ಟಿ.ಜಿ.ಶ್ರೀನಿಧಿ	33
೪	ಮುಕ್ತ/ಸ್ವತಂತ್ರ ತಂತ್ರಾಂಶ ಚಳುವಳಿ ಓಂಶಿವಪ್ರಕಾಶ್ ಎಚ್.ಎಲ್	46
೫	ಯುನಿಕೋಡ್ : ಏಕೆ? ಹೇಗೆ? ಡಾ॥ ಯು.ಬಿ.ಪವನಜ	65

ಶಿಕ್ಷಕರ ಗಮನಕ್ಕೆ

- ಈ ಪುಸ್ತಿಕೆಯ ಪಾಠಗಳು ವಿವಿಧ ಲೇಖಕರ ಭಾಷಾಶೈಲಿ ಮತ್ತು ಸಂವಹನದ ಅಗತ್ಯಕ್ಕೆ ತಕ್ಕಂತೆ ವಿಭಿನ್ನವಾಗಿವೆ; ಪಠ್ಯಪುಸ್ತಕದ ಶಾಸ್ತ್ರೀಯ ಚೌಕಟ್ಟನ್ನು ಮೀರಿವೆ.
- ಈ ಪಾಠಗಳನ್ನು ಪ್ರಾಯೋಗಿಕ ತರಗತಿಗಳೊಂದಿಗೇ ನಡೆಸುವುದು ಅಪೇಕ್ಷಣೀಯ.

ಕಂಪ್ಯೂಟರಿನಲ್ಲಿ ಕನ್ನಡದ ಬಳಕೆ

ಡಾ॥ ಎ.ಸತ್ಯನಾರಾಯಣ

ಕಂಪ್ಯೂಟರಿನ ಭಾಷೆ ಕೇವಲ ಇಂಗ್ಲಿಷ್ ಎಂಬುದು ಸಾಮಾನ್ಯವಾದ ನಂಬಿಕೆಯಾಗಿದೆ. ಕನ್ನಡ ಬಳಸಬಹುದು ಎಂದು ತಿಳಿದಿರುವವರಲ್ಲಿ ಬಹುತೇಕರು ಕನ್ನಡವನ್ನು ಕೇವಲ ಟೈಪಿಂಗ್ ಮಾಡಲಷ್ಟೇ ಸೀಮಿತ ಎಂದುಕೊಂಡಿದ್ದಾರೆ. ಆದರೆ, ಕಂಪ್ಯೂಟರಿಗೆ ಯಾವುದೇ ಭಾಷೆಯ ಹಂಗು ಇಲ್ಲ. ಕಂಪ್ಯೂಟರಿನ ಭಾಷೆ ಯಂತ್ರಭಾಷೆ. ಇದಕ್ಕೆ ಸಹಜಭಾಷೆಗಳು ಅರ್ಥವೂ ಆಗುವುದಿಲ್ಲ. ಪ್ರೋಗ್ರಾಮಿಂಗ್ ಮೂಲಕ ಯಾವುದೇ ಸಹಜಭಾಷೆಯನ್ನು ಅದರಲ್ಲಿ ಸುಲಭವಾಗಿ ಅಳವಡಿಸಿ ಬಳಸಬಹುದು. ಪ್ರಸ್ತುತ, ಕನ್ನಡ ಭಾಷೆಯನ್ನು ಬಳಸುವಲ್ಲಿ ಇರುವ ಸೌಲಭ್ಯಗಳು ಮತ್ತು ಸಾಧನ–ಸಲಕರಣೆಗಳು, ಆಧುನಿಕ ಕಂಪ್ಯೂಟರ್ ತಂತ್ರಜ್ಞಾನದ ಸಂದರ್ಭದಲ್ಲಿ ಕನ್ನಡ ಬಳಕೆಗಾಗಿ ಲಭ್ಯವಿರುವ ತಂತ್ರಾಂಶಗಳ ಪರಿಚಯ ಮತ್ತು ಅವುಗಳ ಕುರಿತಾದ ಪ್ರಾಥಮಿಕ ಮಾಹಿತಿ ನೀಡುವುದು ಈ ಪಾಠಭಾಗದ ಉದ್ದೇಶವಾಗಿದೆ.

ಈ ಪಾಠಭಾಗವನ್ನು ಓದಿಕೊಂಡು, ಅಭ್ಯಾಸಮಾಡುವ ಮೂಲಕ ಕನ್ನಡವನ್ನು ಇಂಗ್ಲಿಷ್‌ನಷ್ಟೇ ಸಮರ್ಥವಾಗಿ ಬಳಸಬಹುದು ಎಂಬುದನ್ನು ತಿಳಿದು, ಪ್ರತ್ಯಕ್ಷವಾಗಿ ಬಳಕೆಯನ್ನು ಕಲಿತುಕೊಳ್ಳಬಹುದು. ಕಂಪ್ಯೂಟರಿನಲ್ಲಿ ಕನ್ನಡ ಲಿಪಿತಂತ್ರಾಂಶಗಳನ್ನು ಅಳವಡಿಸಿ, ಇರುವ ಇಂಗ್ಲಿಷ್ ಕೀಬೋರ್ಡ್‌ನ್ನೇ ಬಳಸಿ ಕನ್ನಡದ ಅಕ್ಷರಗಳನ್ನು ಪರಿಚಯ ಮಾಡಿಕೊಂಡು ಕನ್ನಡದಲ್ಲಿ ವೇಗದ ಟೈಪಿಂಗ್‌ನ್ನು ಸುಲಭವಾಗಿ ಕಲಿಯಬಹುದು.

ಕಂಪ್ಯೂಟರ್ ಮತ್ತು ಭಾಷೆ

ಕಂಪ್ಯೂಟರ್ ಒಂದು ಪ್ರತಿಸ್ಪಂದನಾತ್ಮಕವಾದ ವಿದ್ಯುನ್ಮಾನ ಯಂತ್ರ. ಮಾನವನ ದಿನನಿತ್ಯದ ಬಹುತೇಕ ಕೆಲಸಕಾರ್ಯಗಳಿಗೆ ಬಳಸಲಾಗುತ್ತಿರುವ ಈ ಕಂಪ್ಯೂಟರುಗಳು ಭಾಷೆಯನ್ನು ಬಳಸಿ ಬಳಕೆದಾರನ ಜೊತೆ ಸಂವಾದವನ್ನು ನಡೆಸುತ್ತವೆ. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಕಂಪ್ಯೂಟರುಗಳ ಭಾಷೆ ಇಂಗ್ಲಿಷ್ ಮಾತ್ರ. ಆದರೆ, ಕಂಪ್ಯೂಟರು ಒಂದು ವಿದ್ಯುನ್ಮಾನ ಯಂತ್ರವಾದ್ದರಿಂದ ಇದಕ್ಕೆ ಇಂಗ್ಲಿಷ್, ಕನ್ನಡ, ಹಿಂದಿ ಇಂಥ ಯಾವುದೇ ಸಹಜ ಭಾಷೆಯು ಅರ್ಥವಾಗುವುದಿಲ್ಲ. ಕಂಪ್ಯೂಟರಿಗೆ ಅರ್ಥವಾಗುವ ಭಾಷೆ ಎಂದರೆ ಅದು ವಿದ್ಯುತ್ ಸಂಕೇತಗಳ ಭಾಷೆ ಮಾತ್ರ. ಇದೇ ಯಂತ್ರಭಾಷೆ. ಪ್ರಪಂಚದ ಇತರೆ ಸಹಜ ಭಾಷೆಗಳು ನೇರವಾಗಿ ಇದಕ್ಕೆ ಅರ್ಥವಾಗುವುದಿಲ್ಲ. ಸಹಜ ಭಾಷೆಗಳನ್ನು ಯಂತ್ರಭಾಷೆಯಾಗಿ ಪರಿವರ್ತಿಸಿದರೆ ಮಾತ್ರ ಯಂತ್ರಕ್ಕೆ ಅರ್ಥವಾಗುತ್ತದೆ. ಕಂಪ್ಯೂಟರ್ ಕಾರ್ಯನಿರ್ವಹಣಾ ಮೂಲತತ್ವಗಳನ್ನು ತಿಳಿದರೆ ಕಂಪ್ಯೂಟರಿಗೆ ಭಾಷೆಯ ಮಿತಿ ಇಲ್ಲ ಎಂಬುದು ಖಚಿತವಾಗುತ್ತದೆ.

ಕಂಪ್ಯೂಟರು ವಿದ್ಯುತ್ ಸಂಕೇತಗಳನ್ನು ಗ್ರಹಿಸಿ, ನೆನಪಿನ ಕೋಶದಲ್ಲಿರಿಸಿಕೊಂಡು ಸಂದರ್ಭನುಸಾರ ಸಂಸ್ಕರಿಸಿ ಮತ್ತೆ ವಿದ್ಯುತ್ ಸಂಕೇತಗಳ ರೂಪದಲ್ಲಿ ಉತ್ತರಿಸುತ್ತದೆ ಅಥವಾ ಸಂಸ್ಕರಿತ ಮಾಹಿತಿಯನ್ನು ಹೊರಹಾಕುತ್ತದೆ. ಈ ವಿದ್ಯುತ್ ಸಂಕೇತಗಳ ಒಂದು ಸೆಟ್‌ನ್ನು 'ಕಂಪ್ಯೂಟರ್ ಸಂಕೇತಗಳು' (ಕೋಡ್ಸ್) ಎಂದು ಕರೆಯಲಾಗಿದೆ.

ಸಹಜವಾದ ಅಂಕಿಗಳನ್ನು (ನಂಬರ್‌ಗಳನ್ನು) '1' (ಒಂದು) ಮತ್ತು '0' (ಸೊನ್ನೆ) ಗಳ ಸಂಯೋಜನೆಯನ್ನಾಗಿ ನಿರೂಪಿಸುವ ಗಣಿತದ ದ್ವಿಮಾನ ಅಂಕಿ ಪದ್ಧತಿಯು (ಬೈನರಿ ನಂಬರ್ ಸಿಸ್ಟಂ) ಇಂದಿನ ಡಿಜಿಟಲ್ ಕಂಪ್ಯೂಟರಿನ ಆವಿಷ್ಕಾರಕ್ಕೆ ನಾಂದಿ ಹಾಡಿದೆ. ಈ ಅಂಕಿಪದ್ಧತಿಯ ವಿದ್ಯುನ್ಮಾನ ನಿರೂಪಣೆಯೇ ಕಂಪ್ಯೂಟರಿನ ಕಾರ್ಯನಿರ್ವಹಣೆಗೆ ಮೂಲಾಧಾರ. ಕಂಪ್ಯೂಟರ್ ಸಂಕೇತಗಳಲ್ಲಿ 'ಒಂದು' ಎಂಬುದು ವಿದ್ಯುತ್ ಇರುವಿಕೆಯನ್ನು ಸೂಚಿಸಿದರೆ 'ಸೊನ್ನೆ' ಎಂಬುದು ವಿದ್ಯುತ್ ಇಲ್ಲದಿರುವಿಕೆಯನ್ನು ಸೂಚಿಸುತ್ತದೆ. ಇವುಗಳನ್ನು 'ಆಫ್' ಮತ್ತು 'ಆನ್' ಸಿಗ್ನಲ್‌ಗಳು ಎಂದೂ ಸಹ ಕರೆಯಲಾಗುತ್ತದೆ. ಇಂಥ ಸಂಕೇತಗಳು ವಿದ್ಯುತ್ತಿನ ಮಿಲಿವೋಲ್ಟುಗಳ ರೂಪದಲ್ಲಿ ಕಂಪ್ಯೂಟರಿನ ಒಳಗೆ ಹರಿದಾಡುತ್ತವೆ. ಈ ಸಂಕೇತ ಭಾಷೆಯನ್ನೇ ಯಂತ್ರಭಾಷೆ (ಮೆಶಿನ್ ಲಾಂಗ್ವೇಜ್ ಅಥವಾ ಲೋ ಲೆವೆಲ್ ಲಾಂಗ್ವೇಜ್) ಎಂದು ಕರೆದಿದ್ದಾರೆ.

ಸಂಕೇತ ರೂಪಗಳಾದ 0 ಮತ್ತು 1 ರ ಸಂಯೋಜನೆಗಳ ಈ 'ಯಂತ್ರಭಾಷೆ' ಕಂಪ್ಯೂಟರ್ ಬಳಕೆದಾರನಿಗೆ ಅರ್ಥವಾಗುವುದಿಲ್ಲ. ಕಂಪ್ಯೂಟರುಗಳ ಬಳಕೆಯಲ್ಲಿ ಯಂತ್ರಭಾಷೆ ಮತ್ತು ಸಹಜ ಭಾಷೆಗಳ ನಡುವೆ ಭಾಷಾಂತರ ಕೆಲಸ ನಡೆಯದಿದ್ದರೆ ಬಳಕೆದಾರನ ನಿರ್ದೇಶನ ಕಂಪ್ಯೂಟರಿಗೆ ತಿಳಿಯುವುದಿಲ್ಲ. ಕಂಪ್ಯೂಟರು ಸಂಸ್ಕರಿಸಿ ನೀಡಿದ ಮಾಹಿತಿ ಬಳಕೆದಾರರಾದ ನಮಗೆ ಅರ್ಥವಾಗುವುದಿಲ್ಲ. ಆದ್ದರಿಂದ, ಬಳಕೆದಾರ ಮತ್ತು ಯಂತ್ರದ ಮಧ್ಯೆ ಇಬ್ಬರಿಗೂ ಅರ್ಥವಾಗುವ ಒಂದು ಭಾಷೆ ಇದ್ದರೆ ಅದು ಉಪಯುಕ್ತವಾಗುತ್ತದೆ. ಇದೇ ಉದ್ದೇಶದಿಂದ 'ಹೈ ಲೆವೆಲ್ ಲಾಂಗ್ವೇಜ್'ನ್ನು ಅಭಿವೃದ್ಧಿಪಡಿಸಲಾಗಿದೆ.

ಸಿ, ಸಿ++ ಇತ್ಯಾದಿ ಹೆಸರುಗಳಿಂದ ಕರೆಯಲಾಗುವ ಹೈಲೆವೆಲ್ ಲಾಂಗ್ವೇಜ್‌ಗಳು ಇಂಗ್ಲಿಷ್ ಭಾಷೆಯ ಅಕ್ಷರಗಳನ್ನೊಳಗೊಂಡ ಕೆಲವು 'ಪದಗಳು' ಅಥವಾ 'ಪದಪುಂಜ'ಗಳಾಗಿರುತ್ತವೆ. ಹೀಗಾಗಿ, ಇಂದಿಗೂ ಕಂಪ್ಯೂಟರಿನ ಭಾಷೆ ಇಂಗ್ಲಿಷ್ ಮಾತ್ರ ಎಂಬುದು ಪ್ರಚಲಿತದಲ್ಲಿದೆ. ಕಂಪ್ಯೂಟರಿನ ಕಾರ್ಯಾಚರಣೆ ವ್ಯವಸ್ಥೆಯಲ್ಲಿರುವ (ಆಪರೇಟಿಂಗ್ ಸಿಸ್ಟಂ) 'ಟ್ರಾನ್ಸ್‌ಲೇಟರ್' ಅಥವಾ 'ಇಂಟರ್‌ಪ್ರಿಟರ್' ಎಂಬ ಉಪತಂತ್ರಾಂಶಗಳು ಈ ಇಂಗ್ಲಿಷ್‌ನ ಪದಗಳನ್ನು ಮತ್ತು ಪದಪುಂಜಗಳನ್ನು ಯಂತ್ರಭಾಷೆಗೆ ಪರಿವರ್ತಿಸಿ (ಅನುವಾದಿಸಿ) ಕಂಪ್ಯೂಟರಿಗೆ ಅರ್ಥವಾಗುವಂತೆ ಮಾಡುತ್ತದೆ. ಮಾಹಿತಿ ಸಂಸ್ಕರಣೆ ನಂತರ ಮತ್ತೆ ಯಂತ್ರಭಾಷೆಯಲ್ಲಿರುವ ಮಾಹಿತಿಯನ್ನು ಮರುಪರಿವರ್ತಿಸಿ ಇಂಗ್ಲಿಷ್ ಭಾಷೆಯಲ್ಲಿ ಮಾನಿಟರ್‌ನ ಮೇಲೆ ಪ್ರದರ್ಶಿಸುತ್ತವೆ.

ಕಂಪ್ಯೂಟರ್‌ನ ಸಂವಹನ ಭಾಷೆ

ಕಂಪ್ಯೂಟರ್‌ಗೆ ಆದೇಶಗಳನ್ನು ನೀಡುವುದು ಮತ್ತು ಕಂಪ್ಯೂಟರ್ ತನ್ನ ಬಳಕೆದಾರನಿಗೆ ಸಂದೇಶವನ್ನು ಪ್ರಕಟಿಸುವುದು ಎರಡೂ ಕೆಲಸಗಳಲ್ಲಿ ಒಂದು ಸಹಜ ಭಾಷೆಯು ತನ್ನ ಪಾತ್ರವನ್ನು ಸದಾ ನಿರ್ವಹಿಸುತ್ತದೆ. ಇದನ್ನೇ ಕಂಪ್ಯೂಟರ್‌ನ ಸಂವಹನ ಭಾಷೆ ಎಂದು ಹೇಳಲಾಗಿದೆ. ಇಂದು, ಇಂಗ್ಲಿಷ್ ಭಾಷೆಯೇ ಕಂಪ್ಯೂಟರ್‌ನ ಸಂವಹನ ಭಾಷೆಯಾಗಿರುವುದು ಸಾಮಾನ್ಯವಾಗಿದೆ. ಕಾರಣವೇನೆಂದರೆ, ತಂತ್ರಾಂಶಗಳನ್ನು ತಯಾರಿಸುವಾಗ ಸಂವಹನವು ಇಂಗ್ಲಿಷ್ ಭಾಷೆಯಲ್ಲಿರುವಂತೆ ಪ್ರೋಗ್ರಾಮಿಂಗ್‌ನ್ನು ಮಾಡಿರುವುದರಿಂದ ಕಂಪ್ಯೂಟರುಗಳ ಸಂವಹನ ಭಾಷೆಯು ಇಂಗ್ಲಿಷ್ ಆಗಿದೆ. ಹಾಗೆಂದು, ಇಂಗ್ಲಿಷ್ ಮಾತ್ರವೇ ಕಂಪ್ಯೂಟರಿನ ಭಾಷೆಯಾಗಿರುತ್ತದೆ ಎನ್ನುವಂತಿಲ್ಲ. ಪ್ರೋಗ್ರಾಮಿಂಗ್ ಮಾಡುವಾಗಲೇ ನಮಗೆ ಬೇಕಾದ ಭಾಷೆಯಲ್ಲಿ ಸಂವಹನ ನಡೆಸುವಂತೆ ಪ್ರೋಗ್ರಾಮಿಂಗ್ ಮಾಡಿದರೆ ಅದೇ ಭಾಷೆಯಲ್ಲಿ ಕಂಪ್ಯೂಟರು ಸಂವಹನ ನಡೆಸುತ್ತದೆ.

ಕೆಲಸಕಾರ್ಯಗಳನ್ನು ನಿರ್ವಹಿಸಲು ಕಂಪ್ಯೂಟರ್‌ಗೆ ತನ್ನದೇ ಸ್ವಂತ ಬುದ್ಧಿ ಇಲ್ಲ ಎಂಬುದೊಂದು ವಾಸ್ತವ ಸತ್ಯ. ಅದೊಂದು ಸೂತ್ರಬದ್ಧ ವಿದ್ಯುನ್ಮಾನ ಯಂತ್ರ. ತಂತ್ರಾಂಶವೇ (ಸಾಫ್ಟ್‌ವೇರ್) ಕಂಪ್ಯೂಟರಿನ ಸೂತ್ರ. ಎರಡು ವಿಧದ ಪ್ರಮುಖ ತಂತ್ರಾಂಶಗಳು ಕಂಪ್ಯೂಟರಿನ ಜೀವನಾಡಿ. ಒಂದು 'ಕಂಪ್ಯೂಟರಿನ ಕಾರ್ಯಾಚರಣೆ ವ್ಯವಸ್ಥೆ' (ಆಪರೇಟಿಂಗ್ ಸಿಸ್ಟಂ) ಮತ್ತೊಂದು 'ಅನ್ವಯಿಕ ತಂತ್ರಾಂಶ' (ಅಪ್ಲಿಕೇಷನ್ ಸಾಫ್ಟ್‌ವೇರ್). ಅನ್ವಯಿಕ ತಂತ್ರಾಂಶ ಮತ್ತು ಬಳಕೆದಾರರ ನಡುವೆ ಎರಡೂ ಕಡೆಯಲ್ಲಿ ಸಮನ್ವಯವನ್ನು ಕಾಯ್ದುಕೊಳ್ಳುವುದು 'ಕಾರ್ಯಾಚರಣೆ ವ್ಯವಸ್ಥೆ' ಎಂಬ ಮೂಲ ತಂತ್ರಾಂಶದ ಕೆಲಸ. ಬಳಕೆದಾರನ ನಿರ್ದೇಶನದಂತೆ 'ಅನ್ವಯಿಕ ತಂತ್ರಾಂಶ' ಕೆಲಸ ನಿರ್ವಹಿಸುತ್ತದೆ. ಅಂದರೆ, ಕೆಲಸಕಾರ್ಯಗಳನ್ನು ಅಗತ್ಯಕ್ಕೆ ತಕ್ಕಂತೆ ನಿರ್ವಹಿಸಲು ಕಂಪ್ಯೂಟರಿನಲ್ಲಿ ಕಾರ್ಯಾಚರಣೆ ವ್ಯವಸ್ಥೆ, ಅನ್ವಯಿಕ ತಂತ್ರಾಂಶ ಮತ್ತು ಬಳಕೆದಾರ ಈ ಮೂವರಲ್ಲಿ ಪರಸರ ನಡುವೆ, ಸಂವಾದ, ಸಂಪರ್ಕ, ಸ್ಪಂದನ ಮತ್ತು ವ್ಯವಹಾರಗಳು ನಡೆಯುತ್ತವೆ.

ಬಳಕೆದಾರನು ಬಯಸುವ ಕೆಲಸಕಾರ್ಯಗಳನ್ನು ನಿರ್ವಹಿಸಲು ಕಂಪ್ಯೂಟರು ತನ್ನ ಬಳಕೆದಾರನೊಂದಿಗೆ ಸಂವಾದಿಸುತ್ತದೆ, ಸಂಪರ್ಕಿಸುತ್ತದೆ, ಸ್ಪಂದಿಸುತ್ತದೆ ಮತ್ತು ವ್ಯವಹರಿಸುತ್ತದೆ. ಇದನ್ನೆಲ್ಲಾ ಬಳಕೆದಾರ ವ್ಯಕ್ತಿಗಳೊಂದಿಗೆ ನಿರ್ವಹಿಸಲು ಕಂಪ್ಯೂಟರು ಸಹ ಬಳಕೆದಾರರ ಭಾಷೆಯನ್ನು ಉಪಯೋಗಿಸುತ್ತದೆ. ಅಂದರೆ, ಕಂಪ್ಯೂಟರು ಮತ್ತು ಬಳಕೆದಾರ ವ್ಯಕ್ತಿಗಳ ನಡುವೆ ಸಹಜ ಭಾಷೆಯೊಂದು ತನ್ನ ಪ್ರಾಮುಖ್ಯವನ್ನು ಸದಾಕಾಲ ಮೆರೆಯುತ್ತದೆ ಎಂಬುದು ಇಲ್ಲಿ ಗಮನಾರ್ಹ ವಿಷಯ.

'ಡಾಸ್' ಎಂಬ 'ಕ್ಯಾರಕ್ಟರ್ ಯೂಸರ್ ಇಂಟರ್‌ಫೇಸ್' : ಡಾಸ್, ಯೂನಿಕ್ಸ್, ಲಿನಕ್ಸ್, ಇತ್ಯಾದಿ ಕಂಪ್ಯೂಟರ್ ಕಾರ್ಯಾಚರಣೆ ವ್ಯವಸ್ಥೆಗಳಲ್ಲಿ (ಓ.ಎಸ್. ಗಳಲ್ಲಿ) ಬಳಕೆದಾರನು ಆದೇಶಗಳನ್ನು (ಕಮಾಂಡ್ಸ್) ಇಂಗ್ಲಿಷ್‌ನಲ್ಲಿ ಟೈಪ್‌ಮಾಡಿ

ಕೆಲಸಗಳನ್ನು ನಿರ್ವಹಿಸಬೇಕು. ಅಂಥ ಕಮಾಂಡ್‌ಗಳಿಗೆ ಕನ್ನಡದಲ್ಲಿ 'ಕ್ರಿಯಾ ಆದೇಶಗಳು' ಎಂದು ಕರೆಯಬಹುದು. ಉದಾಹರಣೆಗೆ; ದಿನಾಂಕ ಮತ್ತು ಸಮಯ ನಿಗದಿಪಡಿಸಲು ಬಳಸಲಾಗುವ date ಮತ್ತು time ಕಮಾಂಡ್‌ಗಳು. ಹಾಗೆಯೇ, del (delete), md (Make Directory), cd (Change Directory), rd (remove directory) ಇತ್ಯಾದಿ DOS ಕಮಾಂಡ್‌ಗಳು. ಕಮಾಂಡ್‌ಗಳನ್ನು ಟೈಪ್‌ಮಾಡಿ ಬಳಸುವ ಇಂಥ ಕಾರ್ಯಾಚರಣೆ ವ್ಯವಸ್ಥೆಯನ್ನು 'ಕ್ಯಾರಕ್ಟರ್ ಯೂಸರ್ ಇಂಟರ್‌ಫೇಸ್' (ಸಿಯುಐ) ಎನ್ನಲಾಗಿದೆ.

ಕಾರ್ಯಾಚರಣೆ ವ್ಯವಸ್ಥೆಯ ಕ್ರಿಯಾ ಆದೇಶಗಳು ಇಂಗ್ಲಿಷ್ ಭಾಷೆಯ ಲಿಪಿಯಲ್ಲಿರುವ ನಿರ್ದಿಷ್ಟವಾದ ಪದಗಳಾಗಿವೆ. ಹೀಗಾಗಿ, ಕಂಪ್ಯೂಟರಿನ ಬಳಕೆಯ ಭಾಷೆ ಸಹಜವಾಗಿ ಇಂಗ್ಲಿಷ್ ಆಗಿದೆ. ಕಂಪ್ಯೂಟರ್ ತನ್ನ ಬಳಕೆದಾರರೊಡನೆ ಸಂವಾದಿಸಲು ಇಂಗ್ಲಿಷ್ ಭಾಷೆಯನ್ನೇ ಬಳಸುವಂತೆ ತಂತ್ರಾಂಶಗಳನ್ನು ಸಿದ್ಧಪಡಿಸಿರುವ ಕಾರಣ, ಪರದೆಯಲ್ಲಿ ಎಲ್ಲವೂ ಸಹ ಇಂಗ್ಲಿಷ್‌ನಲ್ಲಿಯೇ ಪ್ರಕಟಗೊಳ್ಳುತ್ತವೆ. ಹೀಗಾಗಿ, ಇಂದಿಗೂ ಕಂಪ್ಯೂಟರುಗಳಲ್ಲಿ ಮೂಲತಃ ಇಂಗ್ಲಿಷ್ ಭಾಷೆಯನ್ನು ಬಳಸಲಾಗುತ್ತಿದೆ. ಹಾಗಿದ್ದೂ, ಕಂಪ್ಯೂಟರುಗಳ ಬಳಕೆಯ ಭಾಷೆ ಅಥವಾ ಸಂವಹನ ಭಾಷೆ ಇಂಗ್ಲಿಷ್ ಮಾತ್ರ ಎಂದೇನಿಲ್ಲ. ಈ ಇಂಗ್ಲಿಷ್‌ನ ಕ್ರಿಯಾ ಆದೇಶಗಳು ಯಂತ್ರಭಾಷೆ ಪರಿವರ್ತನೆಗೊಂಡಾಗ ಮಾತ್ರ ಕಂಪ್ಯೂಟರು ಈ ಆದೇಶಗಳನ್ನು ಅರ್ಥಮಾಡಿಕೊಳ್ಳಬಲ್ಲದು. ಆದ್ದರಿಂದ, ಕಂಪ್ಯೂಟರಿಗೆ ಯಾವುದೇ ಸಹಜ ಭಾಷೆಯ ಮಿತಿಯಿಲ್ಲ. ಇಂಗ್ಲಿಷ್ ಅಲ್ಲದೆ ಸ್ಪಾನಿಶ್, ಫ್ರೆಂಚ್, ಚೀನಿ, ಜಪಾನಿ, ಕೊರಿಯನ್ ಇತ್ಯಾದಿ ಭಾಷೆಗಳಲ್ಲಿ ಕಂಪ್ಯೂಟರ್–ಕಾರ್ಯಾಚರಣೆ ವ್ಯವಸ್ಥೆಯನ್ನು (ಓ.ಎಸ್.) ಮತ್ತು ಆನ್ವಯಿಕ ತಂತ್ರಾಂಶಗಳನ್ನು (ಅಪ್ಲಿಕೇಷನ್ ಸಾಫ್ಟ್‌ವೇರ್) ಸಿದ್ಧಪಡಿಸಿಕೊಂಡು ಬಳಸಲಾಗುತ್ತಿದೆ.

'ವಿಂಡೋಸ್' ಎಂಬ 'ಗ್ರಾಫಿಕಲ್ ಯೂಸರ್ ಇಂಟರ್‌ಫೇಸ್'

ಡಾಸ್ ಮತ್ತು ಅಂಥವೇ ಇತರ ಕಾರ್ಯಾಚರಣೆ ವ್ಯವಸ್ಥೆಗಳ ಸ್ಥಾನದಲ್ಲಿ ವಿಂಡೋಸ್‌ನಂಥ 'ಗ್ರಾಫಿಕಲ್ ಯೂಸರ್ ಇಂಟರ್‌ಫೇಸ್' ಇರುವ ಕಾರ್ಯಾಚರಣೆ ವ್ಯವಸ್ಥೆಗಳು ಬಳಕೆಗೆ ಬಂದ ನಂತರ, ಆದೇಶಗಳನ್ನು ಟೈಪ್ ಮಾಡುವ ಅಗತ್ಯವೇ ಇಲ್ಲ. ಕೇವಲ ಮೌಸ್‌ನ್ನು ಕ್ಲಿಕ್ ಮಾಡಿ ಕೆಲಸಗಳನ್ನು ಮಾಡುವಂತಾಯಿತು. ಹೀಗಾಗಿ, ಭಾಷೆಯ ಪ್ರಮೇಯವೇ ಇಲ್ಲದೆ, ಕೇವಲ ಚಿತ್ರರೂಪದ ಐಕಾನುಗಳ ಮೇಲೆ ಕ್ಲಿಕ್‌ಮಾಡುವುದರಿಂದ ಕೆಲಸಕಾರ್ಯಗಳು ನಿರ್ವಹಣೆಗೊಳ್ಳುತ್ತಿವೆ. ಇದರಿಂದಾಗಿ, ಕಂಪ್ಯೂಟರ್‌ಗಳ ಬಳಕೆಯೂ ಸರಳಗೊಂಡು 'ಪರ್ಸನಲ್ ಕಂಪ್ಯೂಟರ್ (ಪೀಸಿ) ಎಂಬ ಹೆಸರಿನಲ್ಲಿ ಕಂಪ್ಯೂಟರುಗಳ ಬಳಕೆಯು ವಿಶ್ವದ ಎಲ್ಲೆಡೆ ವ್ಯಾಪಿಸಿತು.

'ವಿಂಡೋಸ್' ಎಂಬುದು ಒಂದು ಗ್ರಾಫಿಕಲ್ ಯೂಸರ್ ಇಂಟರ್‌ಫೇಸ್ ಆಗಿದ್ದರೂ, ಅದರ ಹಿನ್ನೆಲೆಯಲ್ಲಿರುವ 'ಡಾಸ್' ಸದ್ದಿಲ್ಲದೇ ತನ್ನ ಕೆಲಸವನ್ನು ಮಾಡುತ್ತದೆ. ಏಕೆಂದರೆ, ವಿಂಡೋಸ್ ಎಂಬುದು ಡಾಸ್‌ನ ಮೇಲೆ ಹೊದಿಸಿರುವ ಒಂದು

ಚಿತ್ರರೂಪಿ 'ಗ್ರಾಫಿಕಲ್ ಹೊದಿಕೆ'ಯಾಗಿದೆ. ನಿಗದಿತ ಸ್ಥಳದಲ್ಲಿರುವ ಚಿತ್ರವನ್ನು ಕ್ಲಿಕ್ ಮಾಡಿದರೆ ಅದಕ್ಕೆ ಮ್ಯಾಪ್ ಮಾಡಲಾದ ಆದೇಶವು ಜಾರಿಯಾಗಿ ಕೆಲಸಗಳು ನಿರ್ವಹಿಸಲ್ಪಡುತ್ತವೆ.

ವಿಂಡೋಸ್‌ಗೆ ಕನ್ನಡದ ಇಂಟರ್‌ಫೇಸ್ : ಕನ್ನಡ ಭಾಷೆಯಲ್ಲಿಯೂ ವಿಂಡೋಸ್–ಎಕ್ಸ್‌ಪಿಗೆ ಲಾಂಗ್ವೇಜ್ ಇಂಟರ್ಫೇಸ್ ಪ್ಯಾಕ್‌ನ್ನು (ಎಲ್‌ಐಪಿ) ಮೈಕ್ರೋಸಾಫ್ಟ್ ಕಾರ್ಪೊರೇಷನ್ ಸಂಸ್ಥೆಯು ಒದಗಿಸಿದೆ. ವಿಂಡೋಸ್–ಎಕ್ಸ್‌ಪಿ ಮತ್ತು ನಂತರದ ಆವೃತ್ತಿಗಳು ಕನ್ನಡದಲ್ಲಿಯೇ ಬಳಕೆದಾರರೊಂದಿಗೆ ಸಂವಹನ ನಡೆಸುವಂತೆ, ಅವುಗಳಿಗೆ ಭಾಷಾ ಹೊದಿಕೆಯನ್ನು ಅಳವಡಿಸಿಕೊಳ್ಳುವ ವ್ಯವಸ್ಥೆಯಿದೆ. ಬಳಕೆದಾರ ಸಂವಹನಕ್ಕೆ ಅನುಕೂಲ ಕಲ್ಪಿಸುವ ಈ ಕನ್ನಡದ ಹೊದಿಕೆಯ ಅಳವಡಿಕೆಯಿಂದಾಗಿ ಕಾರ್ಯಾಚರಣೆ ವ್ಯವಸ್ಥೆ ಕನ್ನಡೀಕರಣಗೊಂಡಿದೆ. 'ಲಿನಕ್ಸ್' ಮತ್ತು 'ಓಪನ್ ಆಫೀಸ್' ಇತ್ಯಾದಿ ಮುಕ್ತ ಮತ್ತು ಉಚಿತ ತಂತ್ರಾಂಶಗಳೂ ಸಹ ಇಂಥ ಕನ್ನಡದ ಭಾಷಾ ಹೊದಿಕೆಯೊಂದಿಗೆ ಬಳಕೆಗೆ ಲಭ್ಯವಿವೆ. ಇಂಥ ಎಲ್‌ಐಪಿಗಳನ್ನು ಅನುಸ್ಥಾಪಿಸಿಕೊಂಡಾಗ, ಹೆಲ್ಪ್‌ನ್ನು ಹೊರತುಪಡಿಸಿ, ಮೆನು ಐಟಂಗಳು, ಡ್ರಾಪ್‌ಡೌನ್ ಮೆನುಗಳು, ಟೆಕ್ಸ್ಟ್ ಡಯಲಾಗ್‌ಗಳು ಎಲ್ಲವೂ ಸಹ ಕನ್ನಡದಲ್ಲಿ ಇರುತ್ತವೆ.

ಅಪ್ಲಿಕೇಷನ್ ಸಾಫ್ಟ್‌ವೇರ್‌ಗಳು

'ವಿಂಡೋಸ್' ಎಂಬ ಆಪರೇಟಿಂಗ್ ಸಿಸ್ಟಂ ಸಾಫ್ಟ್‌ವೇರ್ (ಓ.ಎಸ್) ಕಂಪ್ಯೂಟರಿನ ಮೂಲಾಧಾರ ತಂತ್ರಾಂಶವಾದರೆ, ಅದರ ಮೇಲೆ ನಾವು ಅಳವಡಿಸಿಕೊಂಡು ಬಳಸುವ ಎಂ.ಎಸ್.ಆಫೀಸ್‌ಸೂಟ್‌ನ ಬಿಡಿತಂತ್ರಾಂಶಗಳಾದ ಎಂ.ಎಸ್.ವರ್ಡ್, ಎಕ್ಸೆಲ್, ಪವರ್‌ಪಾಯಿಂಟ್ ಇತ್ಯಾದಿಗಳನ್ನು 'ಆನ್ವಯಿಕ ತಂತ್ರಾಂಶಗಳು' ಎಂದು ಕರೆಯಬಹುದು. ಒಂದೊಂದು ನಿಗದಿತ ಉದ್ದೇಶಕ್ಕೆ ಒಂದೊಂದು ತಂತ್ರಾಂಶಗಳನ್ನು ಅನುಸ್ಥಾಪಿಸಿಕೊಂಡು ಬಳಸಬೇಕಾಗುತ್ತದೆ ಅಂಥ ತಂತ್ರಾಂಶಗಳನ್ನು 'ಆನ್ವಯಿಕ ತಂತ್ರಾಂಶಗಳು' ಅಂದರೆ 'ಅಪ್ಲಿಕೇಷನ್ ಸಾಫ್ಟ್‌ವೇರ್' ಎಂದು ಕರೆಯಲಾಗಿದೆ. 'ಟ್ಯಾಲಿ' ಲೆಕ್ಕಪತ್ರಗಳ ನಿರ್ವಹಣೆಗಾಗಿದ್ದರೆ, ಪೇಜ್‌ಮೇಕರ್, ಕೋರಲ್ ಡ್ರಾ, ಇನ್‌ಡಿಸೈನ್ ಇತ್ಯಾದಿಗಳು ಡಿ.ಟಿ.ಪಿ. ಉದ್ದೇಶಕ್ಕಾಗಿರುವ ಆನ್ವಯಿಕ ತಂತ್ರಾಂಶಗಳಾಗಿವೆ.

ಕಂಪ್ಯೂಟರಿನಲ್ಲಿ ಪಠ್ಯವನ್ನು (ಟೆಕ್ಸ್ಟ್) ಟೈಪ್‌ಮಾಡಿ, ಪಠ್ಯವನ್ನು ಸುವ್ಯವಸ್ಥಿತಗೊಳಿಸಿ, ಪುಟವಿನ್ಯಾಸಗೊಳಿಸಿ ಮುದ್ರಣವನ್ನು ಪಡೆಯುವ ಕೆಲಸಗಳಿಗೆ ಪದಸಂಸ್ಕರಣೆ (ವರ್ಡ್ ಪ್ರೋಸೆಸಿಂಗ್) ಎಂದು ಕರೆಯಲಾಗಿದೆ. ಮೈಕ್ರೋಸಾಫ್ಟ್ ವರ್ಡ್ ಎಂಬ ಪ್ರೋಗ್ರಾಂ ವರ್ಡ್ ಪ್ರೋಸೆಸಿಂಗ್ ಕೆಲಸಕ್ಕೆ ವ್ಯಾಪಕವಾಗಿ ಬಳಸಲಾಗುತ್ತಿರುವ ಎಂ.ಎಸ್.ಆಫೀಸ್ ಸೂಟ್‌ನ ಒಂದು ಪ್ರಮುಖ ಸಾಫ್ಟ್‌ವೇರ್ ಪ್ರೋಗ್ರಾಂ ಆಗಿದೆ. ಈ ಮೈಕ್ರೋಸಾಫ್ಟ್ ವರ್ಡ್ ಎಂಬುದು ಪ್ಯಾಕೇಜ್ಡ್ ಅಪ್ಲಿಕೇಷನ್‌ಗೆ ಒಂದು ಉದಾಹರಣೆಯಾಗಿದೆ. ಮಾರುಕಟ್ಟೆಯಲ್ಲಿ ಸಿದ್ಧರೂಪದಲ್ಲಿ ದೊರೆಯುವ ಯಾವುದೇ ರೂಪದ ಅಪ್ಲಿಕೇಷನ್ ಸಾಫ್ಟ್‌ವೇರ್‌ನ್ನು ಪ್ಯಾಕೇಜ್ಡ್ ಅಪ್ಲಿಕೇಷನ್ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ಎಂ.ಎಸ್.ಆಫೀಸ್‌ಸೂಟ್.

ಕಂಪ್ಯೂಟರ್‌ನ ಬಳಕೆಯ ಭಾಷೆ

ಕಂಪ್ಯೂಟರ್ ತನ್ನ ಬಳಕೆದಾರರೊಂದಿಗೆ ಇಂಗ್ಲಿಷ್‌ನಲ್ಲೇ ಸಂವಹನ ನಡೆಸಿದರೂ ಸಹ ಬಳಕೆದಾರನು ತನ್ನ ಭಾಷೆಯ ಪಠ್ಯವನ್ನು ಬೆರಳಚ್ಚಿಸುವ ಮೂಲಕ ಲೇಖನಗಳು, ಮುದ್ರಣ ಕಾರ್ಯಕ್ಕಾಗಿ ಡಿ.ಟಿ.ಪಿ ಮಾಡಬಹುದು. ಇಂಥ ಕೆಲಸಗಳನ್ನು ತನ್ನದೇ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿಯೂ ನಿರ್ವಹಿಸುವಂತೆ ಸೂಕ್ತ ತಂತ್ರಾಂಶಗಳನ್ನು ಅನುಸ್ಥಾಪಿಸಿಕೊಂಡು ಬಳಸಬಹುದು. ಇಂಥ ಬಳಕೆಯನ್ನೇ ಕಂಪ್ಯೂಟರಿನ ಬಳಕೆಯ ಭಾಷೆ ಎಂದು ಕರೆಯಲಾಗಿದೆ. ಅಪ್ಲಿಕೇಷನ್ ತಂತ್ರಾಂಶಗಳ ಸಂವಹನ ಭಾಷೆಯು ಇಂಗ್ಲಿಷ್ ಆಗಿದ್ದರೂ, ಕನ್ನಡವನ್ನು ಬಳಕೆಯ ಭಾಷೆಯನ್ನಾಗಿಸಿ ಕೆಲಸಕಾರ್ಯಗಳನ್ನು ನಿರ್ವಹಿಸಬಹುದು. ಇದಕ್ಕಾಗಿ ಭಾಷಾ ಲಿಪಿತಂತ್ರಾಂಶಗಳು ಅಗತ್ಯವಿದೆ.

ಅಂತಾರಾಷ್ಟ್ರೀಯ ಮಟ್ಟದ ತಂತ್ರಾಂಶ ತಯಾರಕರು ಆರಂಭದಿಂದಲೇ ಅವರ ತಂತ್ರಾಂಶಗಳಲ್ಲಿ ಕನ್ನಡ ಭಾಷಾ ಲಿಪಿಯನ್ನು ಅಳವಡಿಸಿ ನೀಡಿರಲಿಲ್ಲ. ಆ ಕಾರಣದಿಂದಾಗಿ, ಭಾರತೀಯ ಭಾಷೆಗಳಿಗಾಗಿ ನಮ್ಮ ದೇಶದ ತಂತ್ರಾಂಶ ತಯಾರಕರು ಲಿಪಿತಂತ್ರಾಂಶಗಳನ್ನು ಸಿದ್ಧಪಡಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಡಿ.ಟಿ.ಪಿ. ಉದ್ದೇಶಕ್ಕಾಗಿ ಬಳಕೆಗೆ ಬಂದ ಈ 'ಭಾಷಾ ಲಿಪಿತಂತ್ರಾಂಶ'ಗಳನ್ನು ವಿಂಡೋಸ್‌ನಂಥ ಓ.ಎಸ್.ಗಳ ಮೇಲೆ ಅಳವಡಿಸಿಕೊಂಡು ಬಳಸುವುದು ಆರಂಭವಾಯಿತು.

ಕಂಪ್ಯೂಟರಿನ ಬಳಕೆಯ ಭಾಷೆಯಾಗಿ ಕನ್ನಡ

ಎಂಭತ್ತರ ದಶಕದ ಕೊನೆಯಲ್ಲಿ 'ಡಾಸ್ ಎಡಿಟರ್‌ಗಳು' ಬಳಕೆಗೆ ಬಂದವು. 'ಸೇಡಿಯಾಪು' ತಂತ್ರಾಂಶವು ಉಚಿತವಾಗಿ ವಿತರಿಸಲಾದ ಕನ್ನಡದ ಮೊಟ್ಟಮೊದಲ 'ಡಾಸ್ ಎಡಿಟರ್'. ಇದನ್ನು ನಾಡೋಜ ಡಾ.ಕೆ.ಪಿ.ರಾವ್‌ರವರು ಸಿದ್ಧಪಡಿಸಿದ್ದರು. ಎಸ್.ಆರ್.ಜಿ.ಯವರ 'ಶಬ್ದರತ್ನ' ಎಂಬುದು ಬಹುತೇಕ ಸರಕಾರಿ ಕಚೇರಿಗಳಲ್ಲಿ ಬಳಕೆಯಲ್ಲಿದ್ದ ಜನಪ್ರಿಯ 'ಕನ್ನಡದ ಡಾಸ್ ಎಡಿಟರ್' ಆಗಿತ್ತು.

ನಂತರ, ವಿಂಡೋಸ್ ಕಾರ್ಯಾಚರಣೆ ವ್ಯವಸ್ಥೆಯ ಮೇಲೆ ಕಾರ್ಯನಿರ್ವಹಿಸುವ, ಫಾಂಟುಗಳು ಎಂದು ಕರೆಯಲಾಗುವ ಕನ್ನಡದ ಪ್ರತ್ಯೇಕ 'ಲಿಪಿತಂತ್ರಾಂಶಗಳು' ಬಳಕೆಗೆ ಬಂದವು. ಮಾರುಕಟ್ಟೆಯಲ್ಲಿ ಲಭ್ಯವಿದ್ದ ಲಿಪಿತಂತ್ರಾಂಶಗಳೆಂದರೆ; ಪ್ರಕಾಶಕ್ (ಸೊನಾಟ ಕಂಪನಿ, ಬೆಂಗಳೂರು), ಶ್ರೀಲಿಪಿ (ಮಾಡ್ಯುಲರ್ ಸಿಸ್ಟಂಸ್, ಪುಣೆ), ಆಕೃತಿ (ಸೈಬರ್‌ಸ್ಕೇಪ್ ಮಲ್ಟಿಮೀಡಿಯಾ ಲಿ., ಬೆಂಗಳೂರು), ವಿನ್‌ಕೀ (ಎಸ್.ಆರ್.ಜಿ.), ಸುರಭಿ (ಆ್ಯಪಲ್ ಸಾಫ್ಟ್, ಬೆಂಗಳೂರು), ಕೈರಳಿ (ಬಿಯಾನ್ ಕಂಪ್ಯೂಟರ್ಸ್), ಪುಣೆಯ ಸಿಡ್ಯಾಕ್‌ನ ಐಲೀಪ್ ಇತ್ಯಾದಿಗಳು.

ಪ್ರಸ್ತುತ, ಲಭ್ಯವಿರುವ ಉಚಿತ ಕನ್ನಡ ಲಿಪಿತಂತ್ರಾಂಶಗಳೆಂದರೆ: ಕನ್ನಡ ಗಣಕ ಪರಿಷತ್ತು ತಯಾರಿಸಿರುವ 'ನುಡಿ' ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ 'ಕುವೆಂಪು ತಂತ್ರಾಂಶ' ಮತ್ತು ಲೋಹಿತ್ ಡಿ.ಶಿವಮೂರ್ತಿ ಅಭಿವೃದ್ಧಿಪಡಿಸಿರುವ ಯುನಿಕೋಡ್ ಫಾಂಟ್ ಬೆಂಬಲಿತ 'ಪದ' ಲಿಪಿತಂತ್ರಾಂಶ.

ಕನ್ನಡದ ಉಚಿತ ಲಿಪಿತಂತ್ರಾಂಶಗಳು

'ಬರಹ'– ವಿಂಡೋಸ್ ವೇದಿಕೆಯ ಮೇಲೆ ಕಾರ್ಯನಿರ್ವಹಿಸುವ ಕನ್ನಡದ ಪ್ರಥಮ ಉಚಿತ ಲಿಪಿತಂತ್ರಾಂಶವಾಗಿದೆ. ಆದರೆ, ಇತ್ತೀಚಿನ ಆವೃತ್ತಿಯಾದ ಬರಹ–10 ಉಚಿತವಾಗಿ ದೊರೆಯುವುದಿಲ್ಲ. ಬರಹ ತಂತ್ರಾಂಶವು ಈಗ ಪಾವತಿಸಿ ಬಳಸುವ ತಂತ್ರಾಂಶವಾಗಿದೆ. 'ನುಡಿ' ಬರಹದ ನಂತರದಲ್ಲಿ ಬಂದ ಅದೇ ರೀತಿಯ ಉಚಿತ ತಂತ್ರಾಂಶ. ಕುವೆಂಪು ಕನ್ನಡ ಲಿಪಿತಂತ್ರಾಂಶವು ನುಡಿಯ ನಂತರದಲ್ಲಿ ಸಿದ್ಧವಾದ ತಂತ್ರಾಂಶವಾಗಿದೆ. 'ಬರಹ' ಅಮೆರಿಕಾ ವಾಸಿಯಾಗಿರುವ ಶ್ರೀ ಶೇಷಾದ್ರಿ ವಾಸುರವರ ಪರಿಶ್ರಮದ ಫಲವಾಗಿದೆ. 'ನುಡಿ' ಕರ್ನಾಟಕ ಸರಕಾರದ ಅನುದಾನದಿಂದ ಕನ್ನಡ ಗಣಕ ಪರಿಷತ್ತು ಸಿದ್ಧಪಡಿಸಿದ ಕನ್ನಡ ಲಿಪಿತಂತ್ರಾಂಶವಾಗಿದೆ. 'ಕುವೆಂಪು ಕನ್ನಡ ಲಿಪಿತಂತ್ರಾಂಶ'ವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಸಿದ್ಧಪಡಿಸಿದೆ. 'ನುಡಿ' ಮತ್ತು 'ಕುವೆಂಪು' ತಂತ್ರಾಂಶಗಳನ್ನು ಆಯಾಯ ಅಂತರಜಾಲ ತಾಣದಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಬಳಸಬಹುದು. ಯಾವುದೇ ದರ ಪಾವತಿಸುವ ಅಗತ್ಯ ಇರುವುದಿಲ್ಲ. ಆದಾಗ್ಯೂ, ಈ ತಂತ್ರಾಂಶಗಳನ್ನು ಬದಲಿಸುವಂತಿಲ್ಲ ಅಥವಾ ಮಾರಾಟ ಮಾಡುವಂತಿಲ್ಲ. 'ಬರಹ–9.0' ಆವೃತ್ತಿಯವರೆಗೆ ಉಚಿತ ತಂತ್ರಾಂಶವಾಗಿತ್ತು. ಪ್ರಸ್ತುತ, ಹೊಸ 'ಬರಹ–10' ಆವೃತ್ತಿಯನ್ನು ಹಣಪಾವತಿಸಿ ಬಳಸಬೇಕಾಗಿದೆ. 'ನುಡಿ' ತಂತ್ರಾಂಶ ಉಚಿತ ತಂತ್ರಾಂಶ ಮಾತ್ರವೇ ಹೊರತು ಮುಕ್ತ ತಂತ್ರಾಂಶ ಅಲ್ಲ. ಅದರ ಆಕರ ಕ್ರಮವಿಧಿ ಅಂದರೆ, ಸೋರ್ಸ್‌ಕೋಡ್ ಮುಕ್ತವಾಗಿ ದೊರೆಯುವುದಿಲ್ಲ. ಆದರೆ, 'ಕುವೆಂಪು ಕನ್ನಡ ತಂತ್ರಾಂಶ'ವು ಉಚಿತ ಮಾತ್ರವಲ್ಲ ಮುಕ್ತ ತಂತ್ರಾಂಶವೂ ಹೌದು. ಇದರ ಆಕರ ಕ್ರಮವಿಧಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವ ಮೂಲಕ ಪಡೆದುಕೊಳ್ಳಬಹುದು. ಪ್ರಸ್ತುತ, 'ಬರಹ ತಂತ್ರಾಂಶ'ವು ಈಗ ಮುಕ್ತವೂ ಅಲ್ಲ, ಉಚಿತವೂ ಅಲ್ಲ. 'ಪದ' ಎಂಬ ಹೆಸರಿನ ಯುನಿಕೋಡ್ ಬೆಂಬಲಿತ ಕನ್ನಡದ ಉಚಿತ ಲಿಪಿತಂತ್ರಾಂಶ ಲಭ್ಯವಿದೆ. ಲೋಹಿತ್ ಡಿ.ಶಿವಮೂರ್ತಿ ಇದನ್ನು ಅಭಿವೃದ್ಧಿಪಡಿಸಿ ಪ್ರಸ್ತುತ ಉಚಿತವಾಗಿ ಬಳಕೆಗೆ ನೀಡಿದ್ದಾರೆ.

'ಬರಹ–10' ಇತ್ತೀಚಿನ ಆವೃತ್ತಿಯಾಗಿದ್ದು ಈ ತಂತ್ರಾಂಶದ ಪರೀಕ್ಷಾರ್ಥ ಆವೃತ್ತಿಯನ್ನು (ಟ್ರಯಲ್ ವರ್ಷನ್) www.baraha.comನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 'ನುಡಿ–5.0' ಇತ್ತೀಚಿನ ಆವೃತ್ತಿಯಾಗಿದ್ದು ಈ ತಂತ್ರಾಂಶವು ಕನ್ನಡ ಗಣಕ ಪರಿಷತ್ತಿನ ಅಂತರಜಾಲ ತಾಣವಾದ www.kagapa.in ನಲ್ಲಿ ಲಭ್ಯ. 'ಕುವೆಂಪು ಕನ್ನಡ ತಂತ್ರಾಂಶ'ವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಂತರಜಾಲ ತಾಣವಾದ www.kannadauniversity.org ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 'ಪದ' ಎಂಬ ಹೆಸರಿನ ಯುನಿಕೋಡ್ ಬೆಂಬಲಿತ ಉಚಿತ ಕನ್ನಡ ಲಿಪಿತಂತ್ರಾಂಶವನ್ನು www.pada.proನಿಂದ ಡೌನ್‌ಲೋಡ್ ಮಾಡಿಕೊಂಡು ಅದನ್ನು ಅನುಸ್ಥಾಪಿಸಿಕೊಳ್ಳಬಹುದು.

ಕೇಂದ್ರ ಸರಕಾರವು ಭಾರತೀಯ ಭಾಷೆಗಳಿಗಾಗಿ ಹಲವು ತಂತ್ರಾಂಶ ಸಲಕರಣೆಗಳನ್ನು

ಉಚಿತವಾಗಿ ಒದಗಿಸಿದೆ. ಅಲ್ಲಿ ಕನ್ನಡ ಭಾಷೆಗೂ ಸಲಕರಣೆಗಳು ಲಭ್ಯ. ಅವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು http://www.ildc.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಹಲವಾರು ಫಾಂಟ್ ಕನ್ವರ್ಟರ್‌ಗಳು, ಯುನಿಕೋಡ್ ಫಾಂಟ್‌ಗಳು ಇಲ್ಲಿ ಲಭ್ಯ. ಅಲ್ಲದೆ, ಯಾವುದೇ ಕೀಲಿಮಣೆ ವಿನ್ಯಾಸ ಮತ್ತು ಯಾವುದೇ ಆಸ್ಕಿ–ಫಾಂಟ್‌ನ್ನು ಆಯ್ಕೆ ಮಾಡಿಕೊಂಡು ಪಠ್ಯವನ್ನು ಟೈಪಿಸಲು ಈ ಪರಿಕರಗಳನ್ನು ಉಚಿತವಾಗಿ ಒದಗಿಸಲಾಗಿದೆ.


ಕನ್ನಡ ಪಠ್ಯದ ಟೈಪಿಂಗ್ ಕಲಿಕೆ

ಕನ್ನಡ ಪಠ್ಯ ಟೈಪಿಂಗ್ ಕಲಿಯಲು 'ನುಡಿ' ತಂತ್ರಾಂಶವನ್ನು ಆಧರಿಸಿ ಈ ಮುಂದಿನ ವಿವರಣೆಗಳನ್ನು ನೀಡಲಾಗಿದೆ. ಕನ್ನಡ ಪಠ್ಯವನ್ನು ಕಂಪ್ಯೂಟರಿನಲ್ಲಿ ಮೂಡಿಸಲು ಮೊದಲಿಗೆ ಕೀಲಿಮಣೆ ವಿನ್ಯಾಸದ ಪರಿಚಯ ಮಾಡಿಕೊಳ್ಳುವುದು ಅಗತ್ಯ. ಯಾವ ಕೀಲಿಯನ್ನು ಒತ್ತಿದರೆ ಯಾವ ಅಕ್ಷರಗಳು ಮೂಡುತ್ತವೆ ಎಂಬ ಪ್ರಾಥಮಿಕ ಜ್ಞಾನವನ್ನು ಪಡೆದ ನಂತರ, ಗುಣಿತಾಕ್ಷರಗಳನ್ನು ಮತ್ತು ಒತ್ತಕ್ಷರಗಳನ್ನು ಮೂಡಿಸುವ ಕ್ರಮಗಳನ್ನು ಅರಿತುಕೊಳ್ಳಬೇಕು. ತದನಂತರ, ವೇಗದ ಕನ್ನಡ ಟೈಪಿಂಗ್‌ನ್ನು ಅಭ್ಯಾಸ ಮಾಡಬಹುದು.

ಭಾರತೀಯ ಭಾಷೆಗಳಿಗೆ ಒಂದು 'ಏಕರೂಪ ಕೀಲಿಮಣೆ' ವಿನ್ಯಾಸ: ಇಂಗ್ಲಿಷ್‌ನ 26 ಕೀಲಿಗಳನ್ನೇ ಬಾರಿ ಬಳಸಿ, ಬಳಕೆದಾರನ ನೆನಪಿನ ಶಕ್ತಿಗೆ ಹೆಚ್ಚಿನ ಒತ್ತಡವಿಲ್ಲದೆ, ತರ್ಕಬದ್ಧವಾಗಿ ಭಾರತೀಯ ಭಾಷೆಯ ಪಠ್ಯವನ್ನು ಬೆರಳಚ್ಚಿಸಬಹುದಾದ ವಿನ್ಯಾಸ ಎಂದರೆ ಧ್ವನ್ಯಾತ್ಮಕ ಕೀಲಿಮಣೆ ವಿನ್ಯಾಸ (ಫೋನೆಟಿಕ್ ಕೀಬೋರ್ಡ್). ಉಚ್ಚಾರಣಾ ಧ್ವನಿಯನ್ನು ಆಧರಿಸಿ ಕೀಲಿಮಣೆಯಲ್ಲಿನ ಇಂಗ್ಲಿಷ್‌ಕೀಲಿಗಳ ಸ್ಥಾನದಲ್ಲೇ ಭಾರತೀಯ ಭಾಷೆಗಳ ಅಕ್ಷರ ಸ್ಥಾನಗಳನ್ನು ನಿಗದಿಪಡಿಸಿರುವ ಕಾರಣ, ಈಗಾಗಲೇ ವೇಗದ ಇಂಗ್ಲಿಷ್ ಟೈಪಿಂಗ್ ಕಲಿತವರಿಗೆ ಈ ವಿನ್ಯಾಸವನ್ನು ಬಳಸಿ ವೇಗದ ಕನ್ನಡ ಟೈಪಿಂಗ್ ಕಲಿಯುವುದು ಬಹಳ ಸುಲಭ. ಭಾರತೀಯ ಭಾಷೆಗಳ ಪಠ್ಯವನ್ನು ಸುಲಭವಾಗಿ ತರ್ಕಬದ್ಧವಾಗಿ ಬೆರಳಚ್ಚಿಸಲು ಸಾಧ್ಯವಾಗುವ ಇಂತಹ ಉತ್ತಮ ಕೀಲಿಮಣೆ ವಿನ್ಯಾಸದ ರೂವಾರಿ ಕನ್ನಡಿಗರಾದ ನಾಡೋಜ ಡಾ.ಕೆ.ಪಿ.ರಾವ್‌ರವರು. ಇದೇ ಧ್ವನ್ಯಾತ್ಮಕ ವಿನ್ಯಾಸವನ್ನು ಕನ್ನಡ ಗಣಕ ಪರಿಷತ್ತು ಅಲ್ಪಸ್ವಲ್ಪ ಬದಲಿಸಿ ಸುಧಾರಿಸಿ ಪರಿಷ್ಕರಿಸಿದೆ ಮತ್ತು ಕರ್ನಾಟಕ ರಾಜ್ಯ ಸರಕಾರವು ಇದನ್ನು 'ಕನ್ನಡದ ಅಧಿಕೃತ ಕೀಲಿಮಣೆ' ಎಂದು ಅಂಗೀಕರಿಸಿದೆ.

ಕನ್ನಡದ 'ಶಿಷ್ಟ ಕೀಲಿಮಣೆ ವಿನ್ಯಾಸ'ದ ಕೀಲಿಯೊತ್ತುಗಳ ಪರಿಚಯ

'ಕನ್ನಡ ನುಡಿ' ಚಾಲನೆಯಲ್ಲಿದ್ದಾಗ ನಿಮ್ಮ ಕಂಪ್ಯೂಟರಿನ ಸಿಸ್ಟಂ ಟ್ರೇಯಲ್ಲಿ (ಪರದೆಯ ಕೆಳಬಲತುದಿಯಲ್ಲಿ) ಕರ್ನಾಟಕದ ಭೂಪಟದ ಚಿಹ್ನೆ ಕಂಡುಬರುತ್ತದೆ. ಅದನ್ನು ಬಲ ಕ್ಲಿಕ್ ಮಾಡಿದಾಗ ಬರುವ ಮೆನುವಿನಿಂದ 'ಕೀಲಿಮಣೆ ವಿನ್ಯಾಸ' ಎಂಬುದನ್ನು ಕ್ಲಿಕ್ ಮಾಡಿದರೆ ಈ ಕೆಳಕಂಡಂತೆ 'ಕೀಬೋರ್ಡ್ ಲೇಔಟ್' ಮೂಡಿಬರುತ್ತದೆ.



ಕನ್ನಡದ ಮೂಲ ಅಕ್ಷರಗಳನ್ನು ಮೂಡಿಸುವುದು : ಈ ಮೇಲಿನ ವಿನ್ಯಾಸದಲ್ಲಿ, ಇಂಗ್ಲಿಷ್‌ನ 26 ಅಕ್ಷರಗಳ ಕೀಲಿಗಳಿಗೇ ಕನ್ನಡದ ಎಲ್ಲಾ ಮೂಲ ಅಕ್ಷರಗಳನ್ನು ನಿಗದಿಪಡಿಸಿರುವುದನ್ನು ಗಮನಿಸಿ. ಒಂದು ಇಂಗ್ಲಿಷ್ ಕೀಲಿಸ್ಥಾನದಲ್ಲಿ 'ಮೇಲೆ' ಮತ್ತು 'ಕೆಳಗೆ' ಎರಡು ಕನ್ನಡದ ಅಕ್ಷರಗಳಿವೆ. ಅವೆರಡೂ ಅಕ್ಷರಗಳಿಗೆ ಇರುವ ಸಂಬಂಧವನ್ನು ಗಮನಿಸಿ. ಅಕ್ಷರಗಳು ವ್ಯಂಜನಗಳಾದರೆ ಅವು ಅಲ್ಪಪ್ರಾಣ ಮತ್ತು ಮಹಾಪ್ರಾಣಗಳಾಗಿರುತ್ತವೆ ಹಾಗೂ ಸ್ವರಗಳಾದರೆ ಅವು ಹ್ರಸ್ವಸ್ವರಗಳು ಮತ್ತು ದೀರ್ಘಸ್ವರಗಳಾಗಿವೆ ಎಂಬುದನ್ನೂ ಸಹ ಗಮನಿಸಿ. ಸಂಬಂಧಿಸಿದ ಇಂಗ್ಲಿಷ್ ಕೀಲಿಯನ್ನು ಒಮ್ಮೆ ಒತ್ತಿದರೆ ಕೆಳಗಿನ ಅಕ್ಷರವೂ, ಅದೇ ಕೀಲಿಯನ್ನು ಶಿಫ್ಟ್ ಹಿಡಿದುಕೊಂಡು ಒತ್ತಿದರೆ ಮೇಲಿನ ಕನ್ನಡ ಅಕ್ಷರವು ಮೂಡುತ್ತದೆ ಎಂಬುದನ್ನು ಎಲ್ಲಾ ಕೀಲಿಗಳು ಸೂಚಿಸುತ್ತಿವೆ ಎಂಬುದನ್ನೂ ಗಮನಿಸಿರಿ.

ಹಾಗಾದರೆ, ಒತ್ತಕ್ಷರಗಳು, ಇಳಿ, ಕೊಂಬು, ಏತ್ವ ಇತ್ಯಾದಿಗಳು ಎಲ್ಲಿ ಎಂದು ಹುಡುಕುತ್ತಿದ್ದೀರಾ? ಅವುಗಳನ್ನು ಪ್ರತ್ಯೇಕವಾಗಿ ನೀವು ಮೂಡಿಸಬೇಕಿಲ್ಲ. ಇರುವ 26 ಕೀಲಿಗಳನ್ನೇ ಬಳಸಿ ಕನ್ನಡವನ್ನು ಉಚ್ಚರಿಸುವ ಕ್ರಮವಲ್ಲಿ ನೀವು ಟೈಪಿಂಗ್ ಮಾಡಿದರೆ ಕನ್ನಡದ ಎಲ್ಲಾ ಸಂಯುಕ್ತಾಕ್ಷರಗಳು, ಒತ್ತಕ್ಷರಗಳು ಎಲ್ಲವನ್ನೂ ಮೂಡಿಸಬಹುದು. ಇದು ಹೇಗೆಂದರೆ, k ಒತ್ತಿದರೆ ಕ ಬರುವಂತೆ, m ಒತ್ತಿದರೆ ಮ ಬರುವಂತೆ ಅಕ್ಷರಸ್ಥಾನ ನಿಗದಿಪಡಿಸಲಾಗಿದೆ. ಹಾಗೆಯೇ, ಸ್ವರಗಳೂ ಸಹ, a ಒತ್ತಿದರೆ ಅ ಬರುವಂತೆ, i ಒತ್ತಿದರೆ ಇ ಬರುವಂತೆ ಹೀಗೆ ಇದೇ ರೀತಿಯಲ್ಲಿ ಇಂಗ್ಲಿಷ್ ಕೀಲಿಗಳ ಸ್ಥಾನದಲ್ಲಿ ಕನ್ನಡದ ಅಕ್ಷರಗಳನ್ನು ನಿಗದಿಸಲಾಗಿದೆ. ಅವೇ ಇಂಗ್ಲಿಷ್ ಕೀಲಿಗಳನ್ನು ಶಿಫ್ಟ್ ಹಿಡಿದುಕೊಂಡು ಒತ್ತಿದರೆ ಅದಕ್ಕೆ ಅನುಗುಣವಾಗಿ ವ್ಯಂಜನ ಕೀಲಿಗಳಾದರೆ ಮಹಾಪ್ರಾಣಗಳು, ಸ್ವರಗಳ ಕೀಲಿಗಳಾದರೆ ದೀರ್ಘ ಸ್ವರಗಳು ಮೂಡುತ್ತದೆ. ಆದುದರಿಂದ, ಈ ವಿನ್ಯಾಸದಲ್ಲಿ ಕನ್ನಡದ ಅಕ್ಷರಗಳ ಸ್ಥಾನಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು

ಕಾಗುಣಿತ ಮೂಡಿಸುವುದು : ಮೇಲೆ ಹೇಳಿದ್ದೆಲ್ಲವೂ ಮೂಲ ಅಕ್ಷರಗಳನ್ನು

ಮೂಡಿಸುವ ವಿಚಾರವಾಯಿತು, ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳನ್ನು ಮೂಡಿಸುವ ಬಗೆ ಹೇಗೆ? ಇಂಗ್ಲಿಷ್ ಕೀಲಿಮಣೆಯ k ಅನ್ನು ಒತ್ತಿದರೆ ಕನ್ನಡದ 'ಕ' ಮೂಡುತ್ತದೆ, k ಮತ್ತು a ಅನ್ನು ಕ್ರಮವಾಗಿ ಬೆರಳಚ್ಚಿಸಿದರೆ 'ಕಾ' ಮೂಡುತ್ತದೆ, ಇ ಮತ್ತು i ಒತ್ತಿದರೆ 'ಕಿ' ಮೂಡುತ್ತದೆ. ಇದೇ ಕ್ರಮವನ್ನು ಎಲ್ಲಾ ವ್ಯಂಜನಗಳಿಗೆ ಅನ್ವಯಿಸಿದರೆ 'ಕಾಗುಣಿತ' ಅಂದರೆ, ಗುಣಿತಾಕ್ಷರಗಳು ಮೂಡುತ್ತವೆ. ಗುಣಿತಾಕ್ಷರ (ಕಾಗುಣಿತ) ಪಡೆಯಲು ಯಾವುದಾದರೂ ವ್ಯಂಜನವನ್ನು ಒತ್ತಿ ಮತ್ತೆ ಸ್ವರವನ್ನು ಒತ್ತಿದರೆ ಅವೆರಡರ ಗುಣಿತಾಕ್ಷರವು ಮೂಡುತ್ತದೆ. ಉದಾಹರಣೆಗೆ; 'ಕ' ಮತ್ತು 'ಇ' ಸೇರಿ 'ಕಿ' ಆಗುತ್ತದೆ. ಹಾಗೆಯೇ 'ಯ' ಮತ್ತು 'ಓ' ಸೇರಿ 'ಯೋ' ಆಗುತ್ತದೆ. ಎಲ್ಲಾ ವ್ಯಂಜನಗಳ ಗುಣಿತಾಕ್ಷರಗಳನ್ನು ಪಡೆಯಲು ಇದೇ ಕ್ರಮ ಅನುಸರಿಸಬೇಕು.

ಒತ್ತಕ್ಷರಗಳ ಮೂಡಿಸುವುದು : ಹಾಗಾದರೆ, ಒತ್ತಕ್ಷರಗಳನ್ನು ಮೂಡಿಸುವುದು ಹೇಗೆ? ಕಾಗುಣಿತ ಮೂಡಿಸುವ ತರ್ಕವೇ ಇಲ್ಲಿಯೂ ಅನ್ವಯಿಸುತ್ತದೆ. ಅಲ್ಲಿ ಸ್ವರ ಮತ್ತು ಸ್ವರ ಸೇರಿ ಗುಣಿತಾಕ್ಷರವಾದರೆ. ಇಲ್ಲಿ ಒಂದು ವ್ಯಂಜನ ಮತ್ತೊಂದರೆ ಜೊತೆ ಸೇರಿ ಒತ್ತಕ್ಷರವಾಗುತ್ತದೆ. ಆದರೆ, ಒಂದೇ ವ್ಯತ್ಯಾಸ ಎಂದರೆ ಎರಡು ವ್ಯಂಜನ ಸೇರಿಸಲು ನೀವು ಲಿಂಕ್ ಕೀಲಿ ಎಂದು ಕರೆಯಲಾಗುವ 'ಎಫ್' ಕೀಲಿಯನ್ನು ಬಳಸಬೇಕು. ಸಂಯುಕ್ತಾಕ್ಷರ ಪಡೆಯಲು ಒಂದು ವ್ಯಂಜನವನ್ನು ಒತ್ತಿದ ನಂತರ ಅರ್ಧಾಕ್ಷರ (ಎಫ್–ಕೀಲಿ) ಚಿನ್ಹೆಯನ್ನು ಒತ್ತಬೇಕು. ಆನಂತರ ಮತ್ತೊಂದು ವ್ಯಂಜನವನ್ನು ಒತ್ತಿದರೆ ಎಲ್ಲವೂ ಕೂಡಿ ಸಂಯುಕ್ತಾಕ್ಷರವಾಗುತ್ತದೆ. ಉದಾಹರಣೆಗೆ; 'ಕ' ಒತ್ತಿ ಅರ್ಧಾಕ್ಷರ (ಎಫ್–ಕೀಲಿ) ಒತ್ತಿದರೆ 'ಕ್' ಮೂಡುತ್ತದೆ. ತಕ್ಷಣ ಮತ್ತೆ 'ಕ' ಒತ್ತಿದರೆ 'ಕ್ಕ' ಮೂಡುತ್ತದೆ. ಅರ್ಧಾಕ್ಷರದ ನಂತರ, ಕ ಬದಲಿಗೆ ಲ ಒತ್ತಿದರೆ 'ಕ್ಲ' ಆಗುತ್ತದೆ. ಎಲ್ಲಾ ಸಂಯುಕ್ತಾಕ್ಷರಗಳಿಗೂ ಇದೇ ಕ್ರಮವನ್ನು ಅನುಸರಿಸಬೇಕು.

ಗುಣಿತಾಕ್ಷರಗಳನ್ನು ಬೆರಳಚ್ಚಿಸಲು ಸಮಾನಾಂತರ ಇಂಗ್ಲಿಷ್ ಕೀಲಿಗಳ ಸೂಚಿ

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

k KA ki kI ku kU kR ke kE kY ko kO kV kM kH

ಸಂಯುಕ್ತಾಕ್ಷರಗಳೊಂದಿಗೆ ಪದಗಳನ್ನು ಬೆರಳಚ್ಚಿಸಲು ಸಮಾನಾಂತರ ಇಂಗ್ಲಿಷ್ ಕೀಲಿಗಳ ಸೂಚಿ

ಉತ್ಪನ್ನ = Utfpnfn, ಸತ್ಯ = stfy, ಸ್ತ್ರೀ = sftfrfI, ಸ್ಕೃ = sfkR, ಷ್ಟ್ರೀ = xfqfrI

ವಿಶೇಷವಾಗಿ ಗಮನಿಸಿ : ಕನ್ನಡದ ಉಚ್ಚಾರಣಾ ಕ್ರಮದಲ್ಲಿಯೇ ನಿಮ್ಮ ಟೈಪಿಂಗ್ ಕ್ರಮವೂ ಸಹ ಇರುವುದನ್ನು ಗಮನಿಸಿ. ಎಲ್ಲ ರೀತಿಯ ಒತ್ತಕ್ಷರಗಳನ್ನು ಬೆರಳಚ್ಚಿಸಿದ ನಂತರವೇ ಕೊನೆಯಲ್ಲಿ ಸ್ವರ ಕೀಲಿಯನ್ನು ಬೆರಳಚ್ಚಿಸಬೇಕು ಎಂಬ ಕ್ರಮ ಗಮನದಲ್ಲಿರಲಿ. ಒಂದಕ್ಕಿಂತ ಹೆಚ್ಚಿನ ಒತ್ತಕ್ಷರವನ್ನು ಮೂಡಿಸಬೇಕಾದರೆ ಲಿಂಕ್ ಕೀಲಿಯನ್ನು ಒತ್ತುವ ಅದೇ ತರ್ಕವನ್ನು ಪುನರಾವರ್ತಿಸಬೇಕು ಎಂಬುದು ಗಮನಿಸಿ.

ಕನ್ನಡದ ಅಧಿಕೃತ ಕೀಲಿಮಣೆ ವಿನ್ಯಾಸ ಬಳಸಿ ವೇಗದ ಟೈಪಿಂಗ್ ಕ್ರಮಗಳು ಮತ್ತು ಅಭ್ಯಾಸ

ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಕನ್ನಡದ ಏಕರೂಪ ಕೀಲಿಮಣೆ ವಿನ್ಯಾಸ ಬಳಸಿ ಟೈಪಿಂಗ್ ಕಲಿಕೆಗೆ ಈ ಕೆಳಕಂಡ ಪ್ರಮುಖ ಕ್ರಮಗಳನ್ನು ಅನುಸರಿಸಿದರೆ ಅತ್ಯಂತ ಕಡಿಮೆ ಅವಧಿಯಲ್ಲಿ ಟೈಪಿಂಗ್ ಕಲಿಕೆ ಸಾಧ್ಯ ಮತ್ತು ಹೆಚ್ಚಿನ ವೇಗವನ್ನು ಸಾಧಿಸಬಹುದು. ಇದನ್ನು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳ ಲಿಪಿಯನ್ನು ಬೆರಳಚ್ಚಿಸಲು ಬಾರದವರಿಗಾಗಿ ಮತ್ತು ಹೊಸದಾಗಿ ವೇಗವಾಗಿ ಬೆರಳಚ್ಚನ್ನು ಕಲಿಯಬಯಸುವವರಿಗಾಗಿ ಸೂಚಿಸಲಾಗಿದೆ.

1) ಟೈಪಿಂಗ್ ಕಲಿಕೆಯ ಮೊದಲ ಕ್ರಮವಾಗಿ ಎರಡೂ ಕೈಗಳನ್ನು ಕೀಲಿಮಣೆಯ ಕೀಲಿಗಳ ಮೇಲಿರಿಸಿ. ಪ್ರತಿ ಕೈಗಳ ನಾಲ್ಕು ಬೆರಳುಗಳು ಕ್ರಮವಾಗಿ ಅ ಯಿಂದ ; ಅರ್ಧವಿರಾಮ ಚಿಹ್ನೆವರೆಗೆ ಇರಿಸಿ ಮಧ್ಯದಲ್ಲಿ ಗ ಮತ್ತು ಹ ಮೇಲೆ ಬೆರಳುಗಳನ್ನು ಇರಿಸುವ ಅವಶ್ಯಕತೆಯಿಲ್ಲ. (ಇಂಗ್ಲಿಷ್‌ನ 'ಎ' ಯಿಂದ 'ಎಫ್' ವರೆಗೆ ಎಡಗೈ ಬೆರಳುಗಳು ಮತ್ತು 'ಜೆ' ಯಿಂದ ; (ಅರ್ಧವಿರಾಮ ಚಿಹ್ನೆ) ವರೆಗೆ ಬಲಗೈ ಬೆರಳುಗಳು)

2) ಎರಡೂ ಕೈಗಳ ಬೆರಳುಗಳಿಂದ ಕ್ರಮವಾಗಿ ಕೀಲಿಗಳನ್ನು ಒತ್ತಿ, ಮೂಡುವ ಅಕ್ಷರಗಳನ್ನು ಗಮನಿಸಿ. ಇದೇ ರೀತಿ ಅಭ್ಯಾಸ ಮಾಡಿ. ಎರಡೂ ಕೈಗಳ ಬೆರಳುಗಳ ಸ್ಥಾನವನ್ನು ಮೇಲೆ 1 ರಲ್ಲಿ ಹೇಳಿರುವಂತೆಯೇ ಇರಲಿ. ಯಾವ ಕಾರಣಕ್ಕೂ ಬದಲಿಸಬೇಡಿ. ಗ ಮತ್ತು ಹ ಮೂಡಿಸಲು ಕ್ರಮವಾಗಿ ಎಡಗೈನ ತೋರುಬೆರಳನ್ನು ಮತ್ತು ಬಲಗೈನ ತೋರುಬೆರಳನ್ನು ಉಪಯೋಗಿಸಿ. ಎಡಗೈನ ನಾಲ್ಕು ಬೆರಳುಗಳನ್ನು ಬಳಸಿ ಕೀಲಿಗಳನ್ನು ಕ್ರಮವಾಗಿ ಅಚ್ಚಿಸಿದ ನಂತರ ಬಲಗೈನ ಹೆಬ್ಬೆರಳನ್ನು ಬಳಸಿ ತೆರಪುಪಟ್ಟಿಯನ್ನು (ಸ್ಪೇಸ್ ಬಾರ್) ಒತ್ತಿ ಪ್ರತಿ ಪದಗಳ ಮಧ್ಯೆ ತೆರಪನ್ನು ನೀಡಿ.

3) ಮೇಲಿನ ಅಂಶ ಎರಡರನ್ನು ಅನುಸರಿಸಿ ಚೆನ್ನಾಗಿ ಅಭ್ಯಾಸ ಮಾಡಿದ ನಂತರ, ಕೈಗಳ ಸ್ಥಾನವನ್ನು ಬದಲಿಸದೆ ಕೇವಲ ಬೆರಳುಗಳನ್ನು ಕೆಳಸಾಲಿನ ಕೀಲಿಗಳನ್ನು ಮತ್ತು ಮೇಲುಸಾಲಿನ ಕೀಲಿಗಳನ್ನು ಪ್ರಾಯೋಗಿಕವಾಗಿ ಒತ್ತುವುದರ ಮೂಲಕ ಮೂಡುವ ಅಕ್ಷರಗಳನ್ನು ಗಮನಿಸಿ – ಅಭ್ಯಾಸ ಮುಂದುವರೆಸಿ.

4) ಅಂಶ ಮೂರನ್ನು ಚೆನ್ನಾಗಿ ಅಭ್ಯಾಸ ಮಾಡಿದ ನಂತರ, ಒತ್ತಕ್ಷರ ಮತ್ತು ಗುಣಿತಾಕ್ಷರಗಳಿಲ್ಲದ ಸರಳವಾದ ಪದಗಳನ್ನು ಒಂದು ಹಾಳೆಯಲ್ಲಿ ಪ್ರತ್ಯೇಕವಾಗಿ ಬರೆದುಕೊಂಡು ಅವುಗಳನ್ನು ಟೈಪಿಂಗ್ ಮಾಡಿ ತೆರೆಯ ಮೇಲೆ ಮೂಡಿಸಲು ಪ್ರಯತ್ನಿಸಿ – ಕೈಗಳ ಸ್ಥಾನ ಬದಲಾಗದೆ ಇರಲಿ; ಕೇವಲ ಬೆರಳುಗಳು ಮಾತ್ರ ಮೇಲಿನ ಸಾಲು ಮತ್ತು ಕೆಳಗಿನ ಸಾಲುಗಳಿಗೆ ಹೋಗಿ ಕೀಲಿ ಒತ್ತಿ ಮತ್ತೆ ಮರಳಿ ಸ್ವಸ್ಥಾನಕ್ಕೆ ಹಿಂದಿರುಗಲಿ. ಸರಳ ಪದಗಳಿಗೆ ಉದಾಹರಣೆ : ಶಿಫ್ಟ್ ಕೀಲಿ ಬಳಸದೆ ಬೆರಳಚ್ಚಿಸಬಹುದಾದ ಪದಗಳು – ಅಗಸ, ಗಹನ, ಕಮಲ, ನಯನ, ಚಮಚ, ಇತರ, ಬಸವ, ಸದನ, ಸರಸ, ಮದನ, ಉದಯ, ಕಲರವ ಇತ್ಯಾದಿಗಳು. ಶಿಫ್ಟ್ ಕೀಲಿಯನ್ನೂ ಸಹ ಹಿಡಿದು ಬೆರಳಚ್ಚಿಸಬೇಕಾದ ಪದಗಳು – ಆಟ, ಓಟ, ಈತ, ಆತ, ದಶರಥ, ಶರವಣ, ಮಂಗಳ, ಇಂಧನ, ಋಣಫಲ, ಸರಳವದನ, ಗಹನಪಥ ಇತ್ಯಾದಿ.

5) ಸರಳ ಪದಗಳ ನಂತರ – ಗುಣಿತಾಕ್ಷರಗಳನ್ನು ಅಭ್ಯಾಸ ಮಾಡಿ. ಮೊದಲಿಗೆ ಶಿಫ್ಟ್ ಕೀಲಿ ಬಳಸದೆ ಮೂಡಿಸಬಹುದಾದ ಪದಗಳು – ಎಸೆ (ಎ, ಸ ಮತ್ತು ಎ ಕೀಲಿಗಳನ್ನು ಕ್ರಮವಾಗಿ ಅಚ್ಚಿಸಿ), ತಡಿ (ತ, ಡ ಮತ್ತು ಇ ಕೀಲಿಗಳನ್ನು ಕ್ರಮವಾಗಿ ಅಚ್ಚಿಸಿ) ಹೀಗೆಯೇ – ಕಲಿನಲಿ, ಚಲಿಸು, ತರಿಸು, ನೆಡು, ತಿರುಗಿಸು, ಚೆಲುವನುಡಿ ಇತ್ಯಾದಿ. ಶಿಫ್ಟ್‌ಕೀಲಿಯನ್ನು ಹಿಡಿದು ಬೆರಳಚ್ಚಿಸಬೇಕಾದ ಪದಗಳು – ಆಡಿಸಿ ನೋಡು, ಕಾಡಿನ ಸೇಡು, ಔಷಧಿ ನೀಡು, ಯೋಜನೆ, ಲೋಕೋಪಯೋಗಿ, ನಾಡಾದ ಕಾಡು, ಅಗಾಧ, ಗುಣಿತ ಇತ್ಯಾದಿ.

6) ಗುಣಿತಾಕ್ಷರಗಳನ್ನು ಅಭ್ಯಾಸ ಮಾಡಿದ ನಂತರ ಒತ್ತಕ್ಷರಗಳನ್ನು ಅಭ್ಯಾಸ ಮಾಡಿ. ಮೊದಲಿಗೆ ಸರಳವಾದ ಒತ್ತಕ್ಷರವನ್ನು ಹೊಂದಿದ ಪದಗಳು –

   ಅಕ್ಕ (ಅ, ಕ ನಂತರ ್ ಅರ್ಧಾಕ್ಷರ ಆನಂತರ ಮತ್ತೆ ಕ – ಈ ಕೀಲಿಗಳನ್ನು ಕ್ರಮವಾಗಿ ಅಚ್ಚಿಸಿ).

   ಕನ್ನಡ (ಕ, ನ ನಂತರ ್ ಆನಂತರ ಮತ್ತೆ ನ, ಡ – ಈ ಕೀಲಿಗಳನ್ನು ಕ್ರಮವಾಗಿ ಅಚ್ಚಿಸಿ).

   ಅಕ್ಷರ (ಅ, ಕ, ್, ಷ, ರ) – ಪುಸ್ತಕ (ಪ, ಉ, ಸ, ್, ತ, ಕ)

7) ಸರಳವಾದ ಒತ್ತಕ್ಷರಗಳ ನಂತರ ಕ್ಲಿಷ್ಟವಾದ ಒತ್ತಕ್ಷರಗಳನ್ನು ಹೊಂದಿರುವ ಪದಗಳನ್ನು ಬೆರಳಚ್ಚಿಸುವುದನ್ನು ಕಲಿಯಿರಿ. ಉದಾಹರಣೆಗೆ ; ಸ್ತ್ರೀ (ಸ, ್, ತ, ್, ರ, ಈ) – ಷ್ಟ್ರೀ (ಷ, ್,ಟ, ್, ರ, ಈ) – ಸ್ಕ್ರೃ (ಸ, ್, ಕ, ್, ರ, ಈ). ಈ ಕ್ಲಿಷ್ಟವಾದ ಒತ್ತಕ್ಷರಗಳನ್ನು ಹೊಂದಿರುವ ಮುಂದಿನ ಪದಗಳನ್ನು ಹಲವಾರು ಬಾರಿ ಬೆರಳಚ್ಚಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಉದಾಹರಣೆಗೆ : ಸ್ತ್ರೀವಾದ, ರಾಷ್ಟ್ರೀಯ, ಸಂಸ್ಕೃತಿ ಇತ್ಯಾದಿ ಪದಗಳು.

ಮೇಲಿನ ಕ್ರಮಗಳನ್ನು ಅನುಸರಿಸಿ ಪದಗಳನ್ನು ಬೆರಳಚ್ಚಿಸುವಾಗ ಬೆರಳಚ್ಚಿಸುವ ಕ್ರಮಗಳು ವ್ಯತ್ಯಾಸವಾಗಿ ಪದಗಳು ತಪ್ಪಾದರೆ ಕೀಲಿಮಣೆಯಲ್ಲಿನ ಹಿಂತೆರಪು (ಬ್ಯಾಕ್‌ಸ್ಪೇಸ್) ಕೀಲಿಯನ್ನು ಬಳಸಿ ಇಡೀ ಪದವನ್ನು ಅಳಿಸಿ ಹೊಸದಾಗಿ ಬೆರಳಚ್ಚಿಸಬೇಕು. ಪ್ರತಿ ಕೀಲಿಯನ್ನು ಬೆರಳಚ್ಚಿಸಿದಾಗ ಕನ್ನಡದ ಅಕ್ಷರಭಾಗಗಳು ಅವಶ್ಯಕತೆಗೆ ತಕ್ಕಂತೆ ಜೋಡಣೆಗೊಂಡು ದರ್ಶಕದಲ್ಲಿ ಮೂಡುತ್ತವೆ. ಆದುದರಿಂದ ಹಿಂತೆರಪನ್ನು ಬಳಸಿದಾಗ ಇಡೀ ಅಕ್ಷರವು ಅಳಿಸದೆ ಕೇವಲ ಅಕ್ಷರ ಭಾಗಗಳು ಮಾತ್ರ ಅಳಿಸಲ್ಪಡುತ್ತವೆ. ಕೆಲವು ತಂತ್ರಾಂಶಗಳಲ್ಲಿ ಅಕ್ಷರ ಮೂಡಿಕೆಯು ಅಚ್ಚಿಸಲಾದ ಹಿಂದಿನ ಅಕ್ಷರವನ್ನೂ ಪರಿಗಣಿಸಿ ಅಕ್ಷರಭಾಗಗಳನ್ನು ಜೋಡಿಸುವುದರಿಂದ ಪದಗಳು ತಪ್ಪಾಗಿ ಅಚ್ಚಾದಾಗ ಇಡೀ ಪದವನ್ನು ಅಳಿಸಿ ಹೊಸದಾಗಿ ಅಚ್ಚಿಸುವುದು ಸೂಕ್ತವಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಲಭ್ಯವಿರುವ ಕನ್ನಡ ಲಿಪಿವ್ಯವಸ್ಥೆಗಳಲ್ಲಿ ಇದೇ ವ್ಯವಸ್ಥೆಯಿದೆ. ಕೆಲವು ಕನ್ನಡದ ಲಿಪಿತಂತ್ರಾಂಶಗಳಲ್ಲಿ ಇಡೀ ಪದವನ್ನು ಅಳಿಸುವ ಅವಶ್ಯಕತೆಯಿರುವುದಿಲ್ಲ, ತಪ್ಪಾದ ಅಕ್ಷರವನ್ನು ಮಾತ್ರ ಅಳಿಸಿದರೆ ಸಾಕು. ಇದೇ ರೀತಿ ಯುನಿಕೋಡ್ ಆಧಾರಿತ ಎಂ.ಎಸ್.ಆಫೀಸ್‌ನಲ್ಲಿಯೂ ಇದೇ ಕ್ರಮವಿದೆ. ಈ ಎಲ್ಲಾ ಅಂಶಗಳು ವಾಸ್ತವವಾಗಿ ಕನ್ನಡಲಿಪಿಯನ್ನು ಟೈಪಿಂಗ್ ಮಾಡುವಾಗ ಹೆಚ್ಚಾಗಿ ಅನುಭವಕ್ಕೆ ಬರುತ್ತವೆ.

ಫಾಂಟು ಮತ್ತು ಭಾಷಾ ಸ್ಥಿತ್ಯಂತರ ಕೀಲಿ

ಭಾಷಾ ಸ್ಥಿತ್ಯಂತರ ಕೀಲಿ : ಕನ್ನಡ ಟೈಪಿಂಗ್ ಮಾಡಬೇಕಾದಾಗಲೆಲ್ಲಾ, ಪ್ರತಿಬಾರಿ ಕನ್ನಡದ ಫಾಂಟನ್ನು ಸೆಟ್ ಮಾಡಿಕೊಂಡು, ಭಾಷಾ ಸ್ಥಿತ್ಯಂತರ ಕೀಲಿಯನ್ನು (ಲಾಂಗ್ವೇಜ್ ಟಾಗಲ್ ಕೀ) 'ಆನ್' ಮಾಡಿಕೊಂಡು, ಟೈಪಿಂಗ್ ಆರಂಭಿಸಬೇಕು. ಮಧ್ಯೆ ಮಧ್ಯೆ ಇಂಗ್ಲಿಷ್ ಟೈಪ್ ಮಾಡಬೇಕಾದಾಗ, ಮತ್ತೆ ಇಂಗ್ಲಿಷ್‌ನ ಫಾಂಟನ್ನು ಸೆಟ್ ಮಾಡಿಕೊಂಡು, ಸ್ಥಿತ್ಯಂತರ ಕೀಲಿಯನ್ನು 'ಆಫ್' ಮಾಡಿಕೊಳ್ಳಬೇಕು. ಸಾಮಾನ್ಯವಾಗಿ ಕೀಲಿಮಣೆಯಲ್ಲಿರುವ 'ಸ್ಕ್ರೋಲ್ ಲಾಕ್' ಅಥವಾ 'ಎಫ್12' ಕೀಲಿಗಳಲ್ಲಿ ಒಂದನ್ನು ಸ್ಥಿತ್ಯಂತರ ಕೀಲಿಯನ್ನಾಗಿ ನಿಗದಿಪಡಿಸಿಕೊಳ್ಳುವ ಸೌಲಭ್ಯವು ಲಿಪಿತಂತ್ರಾಂಶಗಳಲ್ಲಿದೆ. ನುಡಿ 4.0 ಆವೃತ್ತಿಯಲ್ಲಿ 'ನೇರ ನುಡಿ' ಸೌಲಭ್ಯದೊಂದಿಗೆ, ಎಂ.ಎಸ್.ವರ್ಡ್‌ನಲ್ಲಿ ಕನ್ನಡವನ್ನು ಬಳಸಲು ಸುಲಭವಾಗುವಂತೆ kannada.dot ಎಂಬ ಹೆಸರಿನ ಕನ್ನಡದ ಒಂದು ಟೆಂಪ್ಲೇಟ್‌ನ್ನು ಸಿದ್ಧಪಡಿಸಿ ಈ ಆವೃತ್ತಿಯೊಂದಿಗೆ ನೀಡಲಾಗಿದೆ.

ಕನ್ನಡದ ಟೆಂಪ್ಲೇಟು : ಕನ್ನಡದಲ್ಲಿ ಪಠ್ಯ ಸಂಪಾದನಾ ಕಾರ್ಯಕ್ಕಾಗಿ ಎಂ.ಎಸ್. ವರ್ಡ್‌ನಲ್ಲಿ ಈ ಟೆಂಪ್ಲೇಟ್‌ನ್ನು ಆಯ್ಕೆಮಾಡಿಕೊಂಡರೆ – ಕನ್ನಡದ ಫಾಂಟ್ ಆಯ್ಕೆ ಮತ್ತು ಕನ್ನಡ ಬೆರಳಚ್ಚಿಸಲು ಸ್ಥಿತ್ಯಂತರ ಕೀಲಿಯ (ಉದಾ: ಸ್ಕ್ರೋಲ್ ಲಾಕ್) ಸ್ವಿಚ್‌ಆನ್ ಆಗುತ್ತದೆ – ಇವುಗಳು ತಾನಾಗಿಯೇ ಸ್ವಯಂಚಾಲಿತವಾಗಿ ಆಗುತ್ತವೆ. KAN/ENG ಎಂಬ ಒತ್ತುಗುಂಡಿಯನ್ನು ಕ್ಲಿಕ್ ಮಾಡುವ ಮೂಲಕ ಇಂಗ್ಲಿಷ್ ಮೋಡ್‌ಗೆ ಸ್ಥಿತ್ಯಂತರಗೊಂಡರೆ, ಇಂಗ್ಲಿಷ್‌ನ ಫಾಂಟ್ ತಾನಾಗಿಯೇ ಆಯ್ಕೆಯಾಗಿ, ಸ್ಥಿತ್ಯಂತರ ಕೀಲಿಯು ಆಫ್ ಆಗುತ್ತದೆ. ಕನ್ನಡ–ಇಂಗ್ಲಿಷ್ ನಡುವೆ

ಅಕ್ಷರಶೈಲಿಯ ಬದಲಿಸಲು; ಕನ್ನಡ ಪಠ್ಯವನ್ನು ಹುಡುಕಲು; ಹುಡುಕಿದ ಪಠ್ಯವನ್ನು ಬದಲಿಸಲು; ಅಕಾರಾದಿ ವಿಂಗಡಣೆ – ಎಲ್ಲವಕ್ಕೂ ಒಂದೊಂದು ಒತ್ತುಗುಂಡಿಯನ್ನು ನೀಡಲಾಗಿದೆ.

ಕನ್ನಡದ ಆಸ್ಕಿ–ಫಾಂಟುಗಳು : ನುಡಿ 4.0 ಆವೃತ್ತಿಯಲ್ಲಿ ಕನ್ನಡ ಪದಪರೀಕ್ಷೆ ಸೌಲಭ್ಯ ನೀಡಿ, ಕನ್ನಡ ಆಡಳಿತ ಪದಕೋಶ ಅಳವಡಿಸಲಾಯಿತು. ಎಂ.ಎಸ್.ವರ್ಡ್‌ನಲ್ಲಿ ಕನ್ನಡದ ಟೆಂಪ್ಲೇಟ್‌ನ್ನು ಆಯ್ಕೆ ಮಾಡಿಕೊಂಡಾಗ, ಹಿಂದಿನ ಆವೃತ್ತಿಯಲ್ಲಿ ದೊರೆಯುತ್ತಿದ್ದ, ಒತ್ತುಗುಂಡಿಗಳಿಗಿಂತ ಇನ್ನೂ ಹೆಚ್ಚುವರಿ ಒತ್ತುಗುಂಡಿಗಳು ಕಾಣಿಸಿಕೊಳ್ಳುತ್ತವೆ. ಒಂದು ಪದಪರೀಕ್ಷೆಗಾಗಿ ಮತ್ತೊಂದು ಪದಕೋಶವನ್ನು ಬಳಸುವುದಕ್ಕಾಗಿ. ನುಡಿ ಎಡಿಟರ್‌ನಲ್ಲಿ ಸಿದ್ಧಪಡಿಸಿದ ಕನ್ನಡ ಪಠ್ಯವನ್ನು ಯುನಿಕೋಡ್ ಎನ್‌ಕೋಡಿಂಗ್ ರೀತಿಯಲ್ಲಿ ಸೇವ್ ಮಾಡುವ ಸೌಲಭ್ಯವನ್ನು ಈ ಆವೃತ್ತಿಯಲ್ಲಿ ಕಲ್ಪಿಸಲಾಗಿದೆ. ಮಾಹಿತಿಯನ್ನು ಅಕಾರಾದಿಯಾಗಿ ವಿಂಗಡಣೆ ಮಾಡುವ ಸೌಲಭ್ಯವನ್ನು ಈ ಆವೃತ್ತಿಯಲ್ಲಿ ನೀಡಲಾಗಿದೆ. 'ನುಡಿ 4.0' ಆವೃತ್ತಿಯಲ್ಲಿ 18 ಫಾಂಟ್‌ಗಳಿವೆ. Nudi 01 k ಎಂಬುದು ಕನ್ನಡ ಅಂಕಿಯನ್ನು ಹೊಂದಿದ ಫಾಂಟ್ ಆಗಿದ್ದರೆ, ಇಂಗ್ಲಿಷ್ ಅಂಕಿಯನ್ನು ಹೊಂದಿರುವ ಫಾಂಟ್‌ನ ಹೆಸರು Nudi 01 e ಎಂಬುದಾಗಿದೆ.

'ನುಡಿ 5.0' ಆವೃತ್ತಿಯಲ್ಲಿ ಕನ್ನಡದ ಹತ್ತು 'ಯುನಿಕೋಡ್ ಫಾಂಟ್'ಗಳನ್ನು ಸೇರಿಸಿ ನೀಡಲಾಗಿದೆ. ಅಲ್ಲದೆ, ಯುನಿಕೋಡ್ ಪಠ್ಯವನ್ನು ಆಸ್ಕಿ ಪಠ್ಯಕ್ಕೆ ಪರಿವರ್ತಿಸಲು ಕನ್‌ವರ್ಷನ್ ಯುಟಿಲಿಟಿಯನ್ನು ನೀಡಲಾಗಿದೆ. ನುಡಿ 4.0 ಆವೃತ್ತಿಯಲ್ಲಿನ ಸೌಲಭ್ಯಗಳಾದ – ಪಠ್ಯವನ್ನು ಹುಡುಕಿ ಬದಲಿಸುವುದು, ಟೈಪ್‌ಮಾಡುವಾಗಲೇ ಪಠ್ಯವನ್ನು ಸರಿಪಡಿಸುವುದು ಮತ್ತು ಪದಪರೀಕ್ಷೆ, ಪದಕೋಶಗಳ ಸೌಲಭ್ಯಗಳು ನುಡಿ 5.0ರಲ್ಲಿಯೂ ಮುಂದುವರೆದಿವೆ.

ಯುನಿಕೋಡ್ ಫಾಂಟುಗಳು

ಈಗ ಭಾಷೆಯೊಂದರ ಅಕ್ಷರಗಳನ್ನು ಕಂಪ್ಯೂಟರಿನಲ್ಲಿ ಪ್ರತಿನಿಧಿಸುವ 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ'ಯು ವಿಶ್ವಮಟ್ಟದಲ್ಲಿ ಜಾರಿಯಾಗಿದೆ. ಇದರಿಂದಾಗಿ, ಭಾರತೀಯ ಭಾಷೆಗಳು ಮಾತ್ರವಲ್ಲ ಜಗತ್ತಿನ ಎಲ್ಲ ಭಾಷೆಗಳ ಜೊತೆ ಕನ್ನಡವೂ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಜಗತ್ತಿನ ಎಲ್ಲ ಭಾಷೆಗಳ ಎನ್‌ಕೋಡಿಂಗ್‌ಗೆ ಅವಕಾಶವಿರುವ ಶಿಷ್ಟತೆ ಅಥವಾ ಮಾನಕ ಈ 'ಯುನಿಕೋಡ್ ಸಂಕೇತೀಕರಣ'. ಕಂಪ್ಯೂಟರ್‌ನಲ್ಲಿ ಜಗತ್ತಿನ ಎಲ್ಲ ಭಾಷೆಗಳ ಪ್ರತಿ ಅಕ್ಷರಕ್ಕೂ ಸಂಕೇತ ನೀಡುವ ವ್ಯವಸ್ಥೆಯನ್ನು 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ' ಎನ್ನಲಾಗಿದೆ. ಇದರ ವೈಶಿಷ್ಟ್ಯವೆಂದರೆ ಜಗತ್ತಿನ ಎಲ್ಲ ಭಾಷೆಗಳಿಗೂ ಇದರಲ್ಲಿ ಪ್ರತ್ಯೇಕ ಸ್ಥಾನವನ್ನು ನೀಡಲಾಗಿದೆ. ಅಂದರೆ, ಆಸ್ಕಿ–ಮಾನಕದಲ್ಲಿ ಇದ್ದಂತೆ, ಇಂಗ್ಲಿಷ್‌ನ ಜಾಗದಲ್ಲಿ ಕನ್ನಡ ಭಾಷೆಯನ್ನು ಕೂರಿಸಬೇಕಾಗಿಲ್ಲ. ಈಗ ಯುನಿಕೋಡ್‌ನಿಂದಾಗಿ ಕನ್ನಡಕ್ಕೆ ಕಂಪ್ಯೂಟರ್‌ನಲ್ಲಿ ತನ್ನದೇ ಸ್ವತಂತ್ರವಾದ ಸ್ಥಾನಮಾನಗಳು ದೊರೆತಿವೆ.

ಯುನಿಕೋಡ್ ಫಾಂಟ್‌ಗಳು ಬಳಕೆಗೆ ಬಂದ ನಂತರ ಕನ್ನಡವನ್ನು ಸಮಗ್ರವಾಗಿ ಕಂಪ್ಯೂಟರ್‌ನಲ್ಲಿ ಬಳಸಲು ಹಿಂದೆ ಇದ್ದ ಬಹುತೇಕ ತಂತ್ರಜ್ಞಾನದ ಸಮಸ್ಯೆಗಳು ಪರಿಹಾರ ಕಂಡವು. ಹೀಗಾಗಿ, ಇಂದು ಡೇಟಾಬೇಸ್ ಅಪ್ಲಿಕೇಷನ್‌ಗಳಲ್ಲಿಯೂ ಸಹ ಕನ್ನಡದ ಪಠ್ಯವನ್ನು ಸುಲಭವಾಗಿ ಬಳಸಲು ಸಾಧ್ಯವಾಗಿದೆ. ಕನ್ನಡದಲ್ಲಿಯೇ ವೆಬ್‌ಸೈಟ್‌ಗಳನ್ನು ನಿರ್ಮಿಸುವ ಸೌಲಭ್ಯ ದೊರೆತಿದೆ. ಹಾಗೆಯೇ, ಬ್ಲಾಗ್, ಇ–ಮೇಲ್ ಮತ್ತು ಚಾಟಿಂಗ್‌ಗಳಲ್ಲಿ ಕನ್ನಡ ಭಾಷೆಯನ್ನು ಹಾಸುಹೊಕ್ಕಾಗಿ ಬಳಸಲಾಗುತ್ತಿದೆ.

ಕನ್ನಡ ಯುನಿಕೋಡ್ ಲಿಪಿ ಬಳಕೆಗಾಗಿ ವಿಂಡೋಸ್ ಎಕ್ಸ್‌ಪಿಯಲ್ಲಿ ಮೂಲ ಓ.ಎಸ್.ಸೀಡಿಯನ್ನು ಬಳಸಿ ಕೆಲವು ಸೆಟ್ಟಿಂಗ್‌ಗಳನ್ನು ಮಾಡಿಕೊಳ್ಳಬೇಕು. ವಿಂಡೋಸ್–7 ಅಥವಾ ವಿಂಡೋಸ್–8 ಆವೃತ್ತಿಗಳಲ್ಲಿ ಇಂತಹ ಸೆಟ್ಟಿಂಗ್‌ಗಳನ್ನು ಮಾಡಿಕೊಳ್ಳುವ ಅಗತ್ಯವಿಲ್ಲ. ಕೇವಲ ಭಾಷೆಯನ್ನು ಆಯ್ಕೆ ಮಾಡಿಕೊಂಡರೆ ಸಾಕು.

ಯುನಿಕೋಡ್ ಫಾಂಟ್ ಬಳಕೆಯಿಂದಾಗಿ ಕನ್ನಡದ ಲಿಪಿಗಳು ವಿಚಿತ್ರಲಿಪಿಗಳಾಗಿ ಅಂದರೆ, ಜಂಕ್ ಕ್ಯಾರೆಕ್ಟರ್‌ಗಳಾಗಿ ಕಾಣಿಸುವ ಸಮಸ್ಯೆಗಳು ಇಲ್ಲವಾಗಿದೆ. ವಿಂಡೋಸ್ ಓ.ಎಸ್.ನೊಂದಿಗೇ ಕನ್ನಡದ ಲಿಪಿವ್ಯವಸ್ಥೆಯು ಲಭ್ಯ. ಹೀಗಾಗಿ, ಈಗ ಪ್ರತ್ಯೇಕ ಕನ್ನಡದ ಲಿಪಿತಂತ್ರಾಂಶಗಳನ್ನು ಅಳವಡಿಸುವ ಅವಶ್ಯಕತೆಯೇ ಇಲ್ಲ ಮತ್ತು ಈ ಹಿಂದೆ ಇದ್ದ ಎಲ್ಲ ಸಮಸ್ಯೆಗಳೂ ಒಮ್ಮೆಗೇ ಪರಿಹಾರಗೊಂಡಿವೆ.

ಯುನಿಕೋಡ್ ಫಾಂಟ್‌ಗಳ ಅನುಕೂಲಗಳು : ಬರಹ, ನುಡಿ, ಕುವೆಂಪು ತಂತ್ರಾಂಶಗಳಲ್ಲಿನ ಆಸ್ಕಿ–ಫಾಂಟ್‌ಗಳ ಪಠ್ಯವನ್ನು ಅಂತರಜಾಲದಲ್ಲಿ ಅಳವಡಿಸಿದ್ದರೆ, ಅಂತಹ ಪಠ್ಯವನ್ನು ಇಂದಿನ ಗೂಗಲ್ ಸರ್ಚ್‌ನಲ್ಲಿ ಸುಲಭವಾಗಿ ಹುಡುಕಲಾಗುವುದಿಲ್ಲ. ಅದೇ ಪಠ್ಯವು ಯುನಿಕೋಡ್ ಫಾಂಟ್‌ನಲ್ಲಿದ್ದರೆ, ಹುಡುಕುವುದು ಸುಲಭ. ಕಾರಣವೇನೆಂದರೆ, ಯುನಿಕೋಡ್ ಸೌಲಭ್ಯದಿಂದಾಗಿ ಗೂಗಲ್ ಬಳಸಿ ಕನ್ನಡದ ಪಠ್ಯವನ್ನು ಸುಲಭವಾಗಿ ಹುಡುಕಬಹುದು. ಯುನಿಕೋಡ್‌ನಿಂದಾಗಿ ಕನ್ನಡದ ವಿಚಿತ್ರಲಿಪಿಗಳ ಸಮಸ್ಯೆ ಪರಿಹಾರವಾಗಿದೆ. ಕಾರ್ಯಾಚರಣೆ ವ್ಯವಸ್ಥೆಯ ಹಂತದಲ್ಲಿಯೇ ಕಂಪ್ಯೂಟರ್ ಕನ್ನಡವನ್ನು ಗುರುತಿಸುತ್ತದೆ. ಹೀಗಾಗಿ, ಯಾವುದೇ ಅಪ್ಲಿಕೇಷನ್ ತಂತ್ರಾಂಶಗಳಲ್ಲಿ ಇಂಗ್ಲಿಷ್‌ನಷ್ಟೇ ಸುಲಭವಾಗಿ ಕನ್ನಡವನ್ನು ಸಹ ಬಳಸಬಹುದು.

'ಪದ' ಎಂಬ ಇತ್ತೀಚಿನ ತಂತ್ರಾಂಶ ಪ್ರಸ್ತುತ ಉಚಿತವಾಗಿ ದೊರೆಯುತ್ತಿರುವ ಯುನಿಕೋಡ್ ಬೆಂಬಲಿತ ಅತ್ಯುತ್ತಮವಾದ ಎಡಿಟರ್ ಮತ್ತು ಐಎಂಇ (ಇನ್‌ಪುಟ್ ಮೆಥೆಡ್ ಎಡಿಟರ್) ಆಗಿದೆ. ಇದನ್ನು ಬಳಸಿ ಕನ್ನಡ ಮಾತ್ರವೇ ಅಲ್ಲದೆ, ಇತರೆ ಭಾರತೀಯ ಭಾಷೆಗಳಲ್ಲಿ ವಿಂಡೋಸ್ ಓ.ಎಸ್.ನ ಯಾವುದೇ ಅಪ್ಲಿಕೇಷನ್‌ಗಳಲ್ಲಿ ಯುನಿಕೋಡ್ ಫಾಂಟ್‌ಗಳನ್ನು ಬಳಸಬಹುದು.

ಕನ್ನಡ ಮತ್ತು ಡಿಟಿಪಿ

ಬೇಳೂರು ಸುದರ್ಶನ

ಡಿಟಿಪಿ ಎಂದರೆ ಡೆಸ್ಕ್ (D) ಟಾಪ್(T) ಪಬ್ಲಿಶಿಂಗ್(P). ಸಾಮಾನ್ಯವಾಗಿ ಮೇಜಿನ ಮೇಲೆ ಇರುವ ಕಂಪ್ಯೂಟರಿನಲ್ಲಿ ಕೆಲಸ ಮಾಡಿ ಮುದ್ರಣಕ್ಕೆ ಬೇಕಾದ ಕಡತಗಳನ್ನು ತಯಾರಿಸುವುದೇ ಡಿಟಿಪಿ ಎಂದು ಸರಳವಾಗಿ ಹೇಳಬಹುದು.

ಕಂಪ್ಯೂಟರಿನಲ್ಲಿ ಹೀಗೆ ವಿನ್ಯಾಸ ಮಾಡುವ ಕೇಂದ್ರಗಳನ್ನು ಡಿಟಿಪಿ ಸೆಂಟರ್ ಎಂದು ಕರೆಯಲಾಗಿದೆ. ಬೆಂಗಳೂರಿನಲ್ಲಿ ಮತ್ತು ಹಲವು ಜಿಲ್ಲಾ / ತಾಲೂಕು ಕೇಂದ್ರಗಳಲ್ಲಿ ಎಸ್‌ಟಿಡಿ–ಐಎಸ್‌ಡಿ ಫಲಕಗಳ ಹಾಗೆಯೇ 'ಇಲ್ಲಿ ಡಿಟಿಪಿ ಮಾಡಲಾಗುವುದು' ಎಂದು ಪ್ರಕಟಿಸಿದ್ದನ್ನು ನೀವು ನೋಡಿರುತ್ತೀರಿ. ಒಂದು ನಿರ್ದಿಷ್ಟ ಶುಲ್ಕವನ್ನು ಪಾವತಿ ಮಾಡಿ ನಿಮಗೆ ಬೇಕಾದ ಮಾಹಿತಿಯನ್ನು, ನಿಮ್ಮ ಇಷ್ಟವಾದ ವಿನ್ಯಾಸದಲ್ಲಿ ರೂಪಿಸಿಕೊಂಡು ಸಾಫ್ಟ್‌ವೇರ್ ಕಡತಗಳನ್ನಾಗಿ ಮುದ್ರಣಾಲಯಕ್ಕೆ ಒಯ್ಯಬಹುದು. ಇತ್ತೀಚೆಗೆ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕಗಳು ಹೆಚ್ಚಾಗಿ ಇರುವುದರಿಂದ ಡಿಟಿಪಿ ಆದ ಕಡತಗಳನ್ನು ನೇರವಾಗಿ ಮುದ್ರಣಾಲಯಕ್ಕೇ ಕಳಿಸಬಹುದು.

ವಿಸಿಟಿಂಗ್ ಕಾರ್ಡ್, ಲೆಟರ್‌ಹೆಡ್, ಕರಪತ್ರಗಳು, ಪುಸ್ತಿಕೆಗಳು, ದೊಡ್ಡ ದೊಡ್ಡ ಪುಸ್ತಕಗಳು, ನಿಘಂಟುಗಳು, ಪ್ರಕಟಣಾ ಸಂಸ್ಥೆಗಳ ಹಲವು ಬಗೆಯ ಪುಸ್ತಕಗಳು, ಈಗ ನಗರಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ಫ್ಲೆಕ್ಸ್ ಫಲಕಗಳಿಗೆ, ಹೋರ್ಡಿಂಗ್‌ಗಳಿಗೆ ಬೇಕಾದ ವಿನ್ಯಾಸಗಳು – ಹೀಗೆ ಅಂಗೈ ಅಗಲದ ವಿಸಿಟಿಂಗ್ ಕಾರ್ಡಿನಿಂದ ಹಿಡಿದು ನೂರು ಅಡಿ ಅಗಲದ ಹೋರ್ಡಿಂಗ್‌ವರೆಗೆ ಎಲ್ಲಾ ಬಗೆಯ ವಿನ್ಯಾಸವನ್ನೂ ಡಿಟಿಪಿ ಕೇಂದ್ರದಲ್ಲಿ ಮಾಡಿಸಬಹುದು.

ಯಾರಿಗೆ ಡಿಟಿಪಿ ಬೇಕು?

ಡಿಟಿಪಿ ಎಲ್ಲರಿಗೂ ಬೇಕು! ಲೇಖಕರು ತಮ್ಮ ಪುಸ್ತಕಗಳನ್ನು ಡಿಟಿಪಿ ಮಾಡಿಸಿಯೇ ಪ್ರಕಾಶಕರಿಗೆ ಕೊಡುತ್ತಾರೆ. ವೆಬ್‌ಸೈಟ್‌ಗಳಲ್ಲಿ ಬೇಕಾದ ವಿನ್ಯಾಸಗಳನ್ನು ಮಾಡಿಸಲೂ ಡಿಟಿಪಿ ನೆರವಿಗೆ ಬರುತ್ತದೆ. ಟೆಲಿವಿಜನ್ ಚಾನೆಲ್‌ಗಳಲ್ಲಿ ಬರುವ ವಿನ್ಯಾಸಗಳನ್ನೂ ಡಿಟಿಪಿಯಿಂದಲೇ ರೂಪಿಸುತ್ತಾರೆ. ರೇಡಿಯೋದಂಥ ಶ್ರವ್ಯ ಮಾಧ್ಯಮವೊಂದನ್ನು ಬಿಟ್ಟರೆ ಮುದ್ರಣ, ದೃಶ್ಯ ಮತ್ತು ಆನ್‌ಲೈನ್ ಮಾಧ್ಯಮಗಳಿಗೆ ಡಿಟಿಪಿ ಬೇಕು.


ವರ್ಡ್‌ನಲ್ಲಿ ಡಿಟಿಪಿ ಬರುವುದಿಲ್ಲವೆ?

ಎಂಎಸ್ ವರ್ಡ್ ಅಥವಾ ಮೈಕ್ರೋಸಾಫ್ಟ್ ವರ್ಡ್ ಎನ್ನುವುದು ಮೈಕ್ರೋಸಾಫ್ಟ್ ಸಂಸ್ಥೆಯು ರೂಪಿಸಿರುವ, ಒಂದು ವರ್ಡ್ ಪ್ರಾಸೆಸರ್ / ಪದಸಂಸ್ಕರಣ ತಂತ್ರಾಂಶ. ಇದು ಪಾವತಿಸಿ ಬಳಸಬೇಕಾದ ತಂತ್ರಾಂಶ. ಮುಕ್ತವಾಗಿ ಲಭ್ಯವಿರುವ ಓಪನ್ ಆಫೀಸ್, ಲಿಬ್ರೆಆಫೀಸ್‌ನಂಥ ತಂತ್ರಾಂಶಗಳೂ ವರ್ಡ್ ಪ್ರಾಸೆಸರ್‌ಗಳೇ ಆಗಿವೆ.

ಇವುಗಳಲ್ಲಿ ನೀವು ಅಕ್ಷರ ಜೋಡಣೆ ಮಾಡಬಹುದು; ಕೆಲವೆಡೆ ಚಿತ್ರಗಳನ್ನೂ ಸೇರಿಸಬಹುದು. ಆದರೆ ವರ್ಡ್ ಪ್ರಾಸೆಸರ್‌ಗಳಲ್ಲಿ ಕೆಲವು ಅನಾನುಕೂಲಗಳಿವೆ:

- ವರ್ಡ್ ಪ್ರಾಸೆಸರ್‌ಗಳಲ್ಲಿ ಚಿತ್ರಗಳನ್ನು ಬದಲಿಸುವ, ತಿದ್ದುವ, ಬೇಕಾದ ಸ್ಥಳದಲ್ಲಿ ಬೇಕಾದ ರೀತಿಯಲ್ಲಿ ಸ್ಥಾಪಿಸುವುದಕ್ಕೆ ಆಗುವುದಿಲ್ಲ; ಇರುವ ಸೀಮಿತ ಅವಕಾಶಗಳಲ್ಲಿ ಈ ಚಿತ್ರಗಳನ್ನು ಪಠ್ಯದ ಪಕ್ಕದಲ್ಲೋ, ಪಠ್ಯದ ಕೆಳಭಾಗದಲ್ಲೋ ಸುಮ್ಮನೆ ಇಡಬಹುದೇ ಹೊರತು ಹೆಚ್ಚಿನ ಸಾಧ್ಯತೆಗಳಿಲ್ಲ.
- ವರ್ಡ್ ಪ್ರಾಸೆಸರ್‌ಗಳಲ್ಲಿ ಪಠ್ಯವನ್ನು ವಿವಿಧ ವಿನ್ಯಾಸಗಳಿಗೆ ತಕ್ಕಂತೆ ರೂಪಿಸುವ ಅವಕಾಶಗಳೂ ತುಂಬಾ ಸೀಮಿತ. ಅಲ್ಲದೆ ಅಲ್ಲಲ್ಲಿ ಪಠ್ಯಗಳನ್ನು ಎತ್ತಿ ತೆಗೆಯುವ, ಪುಟದ ಹೊರಗಡೆ ಇಟ್ಟುಕೊಳ್ಳುವ, ಅಥವಾ ಪಠ್ಯಭಾಗವನ್ನು ಬೇಕೆಂದ ಸ್ಥಳದಲ್ಲಿ ಕೂರಿಸುವ ಅವಕಾಶವಿಲ್ಲ.
- ವರ್ಡ್ ಪ್ರಾಸೆಸರ್‌ಗಳಲ್ಲಿ ಚಿತ್ರ ಮತ್ತು ಪಠ್ಯಗಳನ್ನು ಹಲವು ವಿಭಿನ್ನ ವಿನ್ಯಾಸಗಳಿಗೆ ರೂಪಾಂತರಿಸುವ ವಿಪುಲ ಅವಕಾಶವಿಲ್ಲ.

ಆದ್ದರಿಂದ, ಅಸಂಖ್ಯ ವಿನ್ಯಾಸದ ಸಾಧ್ಯತೆಗಳನ್ನು ಹೊಂದಿರುವ ಡಿಟಿಪಿ ತಂತ್ರಾಂಶಗಳನ್ನೇ ನಾವು ಡಿಟಿಪಿ ಮಾಡಲು ಬಳಸಬೇಕಿದೆ. ಆರಂಭದ ಅಕ್ಷರಜೋಡಣೆಗೆ ಮಾತ್ರವೇ ವರ್ಡ್ ಪ್ರಾಸೆಸರ್‌ನ್ನು ಬಳಸಬಹುದಾಗಿದೆ.



ಪಠ್ಯ,ಚಿತ್ರ ವಿನ್ಯಾಸದ ಒಂದು ಮಾದರಿ

ವಿನ್ಯಾಸ ಎಂದರೇನು? ಯಾಕೆ ಬೇಕು? ಎಷ್ಟಿರಬೇಕು?

ಮೇಲೆ ತಿಳಿಸಿದ ಮಾಹಿತಿಯಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ: ಯಾವುದೇ ಚಿತ್ರ – ಪಠ್ಯವನ್ನು ವಿನ್ಯಾಸಗೊಳಿಸುವುದು ಪ್ರಕಟಣೆಯ ಅತಿಮುಖ್ಯ ಅಂಶವಾಗಿದೆ. ಹಾಗಾದರೆ ವಿನ್ಯಾಸ ಎಂದರೆ ಏನು ಎಂದು ತಿಳಿಯಬೇಕಿದೆ, ಅಲ್ಲವೆ?

ವಿನ್ಯಾಸ ಎಂದರೆ ಓದುಗರು / ನೋಡುಗರು ಕಣ್ಣಿಗೆ ಶ್ರಮವಿಲ್ಲದೆ ಓದಲು ಅನುಕೂಲವಾಗುವಂತೆ, ಓದುಗರಿಗೆ ಆಸಕ್ತಿ ಹುಟ್ಟಿಸುವಂತೆ ಮತ್ತು ನೀಡಬೇಕಾದ ಮಾಹಿತಿಗಳನ್ನು ಅಚ್ಚುಕಟ್ಟಾಗಿ ರೂಪಿಸಲು ಒಂದು ಶಿಸ್ತಿನಲ್ಲಿ ಜೋಡಿಸುವ ಪ್ರಕ್ರಿಯೆ. ಉದಾಹರಣೆಗೆ ಎರಡು ಚಿತ್ರಗಳನ್ನು

ಹೋಲಿಕೆಗಾಗಿ ನೀಡಬೇಕಿದೆ ಎಂದುಕೊಳ್ಳೋಣ. ಎರಡೂ ಚಿತ್ರಗಳ ಅಗಲ, ಉದ್ದ ಒಂದೇ ಇದ್ದರೆ ಹೋಲಿಸಲು ಸಾಧ್ಯ. ಮೂಲದಲ್ಲಿ ದೊರೆತ ಚಿತ್ರಗಳು ದೊಡ್ಡದಿದ್ದರೂ, ಪುಟದಲ್ಲಿ ಅವನ್ನು ಒಂದೇ ಗಾತ್ರಕ್ಕೆ ತರಬೇಕು; ಅಲ್ಲದೆ ಅವುಗಳು ಒಂದೇ ಮಟ್ಟದಲ್ಲಿ ಕಾಣಿಸಬೇಕು. ಅವುಗಳಿಗೆ ಒಂದೇ ತಲದಲ್ಲಿ ಶೀರ್ಷಿಕೆ ಇರಬೇಕು. ಎರಡೂ ಚಿತ್ರಗಳ ಬಣ್ಣಗಳ ಸಂಯೋಜನೆ ಸಮಾನವಾಗಿರಬೇಕು. ಹೀಗೆ ಎರಡೂ ಚಿತ್ರಗಳನ್ನು ಒಂದೇ ಪ್ರಮಾಣಕ್ಕೆ ತಂದು ಪುಟದಲ್ಲಿ ಅಚ್ಚುಕಟ್ಟಾಗಿ ಕೂರಿಸಿದರೆ ಅದು ವಿನ್ಯಾಸ ಎನ್ನಿಸಿಕೊಳ್ಳುತ್ತದೆ.

ಪ್ರತಿಯೊಂದು ಅಧ್ಯಾಯಕ್ಕೆ ಸೂಕ್ತ ಗಾತ್ರದ ಶೀರ್ಷಿಕೆ ಕೊಡುವುದು, ಲೇಖಕರ ಹೆಸರನ್ನು ಸೂಕ್ತವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು, ಪ್ಯಾರಾಗಳ ಶೀರ್ಷಿಕೆಗಳನ್ನು ಸ್ಪಷ್ಟವಾಗಿ ಕಾಣಿಸುವುದು, ಚಿತ್ರಶೀರ್ಷಿಕೆಗಳನ್ನು ಕೊಡುವುದು – ಹೀಗೆ ಎಲ್ಲವನ್ನೂ ವಿನ್ಯಾಸದ ಕೆಲಸಗಳು ಎಂದೇ ಹೆಸರಿಸಬಹುದು.

ಮದುವೆಯ ಆಹ್ವಾನಪತ್ರಗಳನ್ನೂ ಡಿಟಿಪಿ ಮೂಲಕವೇ ರೂಪಿಸುತ್ತಾರೆ. ಇಲ್ಲಿ ಸಾಂಪ್ರದಾಯಿಕ ಅಲಂಕಾರವೇ ಮುಖ್ಯ. ಆದರೆ ಪ್ರಬಂಧ ಸಂಕಲನದಲ್ಲಿ ಪಠ್ಯಕ್ಕೇ ಆದ್ಯತೆ. ಹೀಗೆ ಯಾವ ಕೆಲಸಕ್ಕೆ ಎಷ್ಟು ಪ್ರಮಾಣದ ಬಣ್ಣ, ಚಿತ್ರ, ವಿನ್ಯಾಸ, ಅಲಂಕಾರ ಬೇಕು ಎಂಬುದನ್ನು ಅರಿತುಕೊಂಡೇ ಡಿಟಿಪಿ ಮಾಡಬೇಕು. ಇದು ಅನುಭವದಿಂದಲೇ ಮೂಡಿಬರುತ್ತದೆ.

ಡಿಟಿಪಿ ಮಾಡಲು ಇರಬೇಕಾದ ಆಸಕ್ತಿಗಳೇನು?

ಡಿಟಿಪಿ ಮಾಡಲು ಮುಖ್ಯವಾಗಿ ವಿನ್ಯಾಸ ಮಾಡುವ ಆಸಕ್ತಿ ಇರಬೇಕು. ಈಗ ಮಾರುಕಟ್ಟೆಯಲ್ಲಿ, ವೆಬ್‌ಸೈಟ್‌ಗಳಲ್ಲಿ ಇರುವ ವಿನ್ಯಾಸಗಳನ್ನು ಸದಾ ಗಮನಿಸುತ್ತ ಇರಬೇಕಾಗುತ್ತದೆ. ಇದಲ್ಲದೆ ಮುದ್ರಣ ರಂಗದ ಕಿರು ಪರಿಚಯ ಕೂಡಾ ಇರಬೇಕು. ಪುಸ್ತಕ, ಕರಪತ್ರ, ಹೋರ್ಡಿಂಗ್, ಪೋಸ್ಟರ್ – ಎಲ್ಲದಕ್ಕೂ ಒಂದು ನಿರ್ದಿಷ್ಟ ಆಕಾರ ಮತ್ತು ಗಾತ್ರ ಇರುತ್ತದೆ. ಮುದ್ರಣ ಮಾಧ್ಯಮದ ಅಳತೆಗಳು, ಪರಿಭಾಷೆ – ಎಲ್ಲವನ್ನೂ ಪ್ರಾಥಮಿಕ ಮಟ್ಟದಲ್ಲಾದರೂ ತಿಳಿದುಕೊಂಡಿರಬೇಕು. ಉದಾಹರಣೆಗೆ ಡೆಮಿ ಚತುರ್ದಳ (ಡೆಮಿ ಒನ್ ಫೋರ್ಥ್) ಕ್ರೌನ್ ಅಷ್ಟದಳ (ಕ್ರೌನ್ ಒನ್ ಏಯ್‌ಥ್) – ಇವುಗಳ ಅಳತೆಯು ಮಿಲಿಲೀಟರ್‌ಗಳಲ್ಲಿ ಎಷ್ಟು, ಇಂಚುಗಳಲ್ಲಿ ಎಷ್ಟು ಎಂದು ಗೊತ್ತಿಲ್ಲದೇ ಹೋದರೆ ವಿನ್ಯಾಸ ಮಾಡಲು ಅಸಾಧ್ಯ. ಒಂದು ಪುಸ್ತಕದ ಗಾತ್ರವೇ ಗೊತ್ತಿಲ್ಲದಿದ್ದರೆ, ಅದಕ್ಕೆ ಬೇಕಾದ ಸ್ಪೈನ್ (ಪುಸ್ತಕದ ಬೆನ್ನುಹುರಿ, ಅರ್ಥಾತ್ ಪುಸ್ತಕದ ಮಧ್ಯಭಾಗದ ದಪ್ಪದ ಜಾಗ) ಎಷ್ಟು ಅಗಲ ಎಂದು ತಿಳಿಯುವುದಿಲ್ಲ. ಆಗ ವಿನ್ಯಾಸವೇ ಕೆಟ್ಟುಹೋಗುತ್ತದೆ. ಮುಖಪುಟದ ಬಣ್ಣವು ಹಿಂಪುಟಕ್ಕೂ ಅನಗತ್ಯವಾಗಿ ಹರಿಯುತ್ತದೆ.

ಇದಲ್ಲದೆ ಕಂಪ್ಯೂಟರಿನಲ್ಲಿ ಕನ್ನಡ ಅಕ್ಷರಜೋಡಣೆ ಮಾಡುವುದು, ಕರಡು ತಿದ್ದುವುದು, ಬಣ್ಣಗಳ ಸಂಯೋಜನೆ, ಚಿತ್ರಗಳನ್ನು ಸಂಪಾದಿಸುವುದು – ಈ ಎಲ್ಲ ಕುಶಲತೆಗಳನ್ನು ಪ್ರಾಥಮಿಕ ಹಂತದಲ್ಲಾದರೂ ಕಲಿತಿರಬೇಕು. ಕಾಲಕ್ರಮೇಣ ಆಸಕ್ತಿ

ಬಳಸಿಕೊಂಡರೆ ಈ ಎಲ್ಲಾ ಸಂಕೀರ್ಣ ಕೆಲಸಗಳೂ ಸುಲಭವಾಗುತ್ತವೆ ಮತ್ತು ಹೆಚ್ಚು ಹೆಚ್ಚು ಆಸಕ್ತಿ ಹುಟ್ಟಿಸುತ್ತವೆ.

ಡಿಟಿಪಿ ಸಾಫ್ಟ್‌ವೇರ್‌ಗಳ ಪರಿಚಯ

ಡಿಟಿಪಿ ಮಾಡುವುದಕ್ಕೆ ಹಲವು ಖಾಸಗಿ ಸಂಸ್ಥೆಗಳು ಸಂಕೀರ್ಣ ಮತ್ತು ಬಹುಸಾಧ್ಯತೆಗಳ ತಂತ್ರಾಂಶಗಳನ್ನು ರೂಪಿಸಿವೆ. ಇವುಗಳು ಸಾಮಾನ್ಯ ಭಾರತೀಯರ ಖರೀದಿ ಸಾಮರ್ಥ್ಯಕ್ಕೆ ಹೋಲಿಸಿದರೆ ತುಂಬಾ ದುಬಾರಿ ಎನ್ನಿಸುತ್ತದೆ. ಉದಾಹರಣೆಗೆ ಅಡೋಬ್ ಸಂಸ್ಥೆಯ ಅತ್ಯುತ್ಕೃಷ್ಟ ಡಿಟಿಪಿ ತಂತ್ರಾಂಶ ಇನ್‌ಡಿಸೈನ್. ಇದರ ವಾರ್ಷಿಕ ಬಳಕೆ ಬೆಲೆ (2014ರಲ್ಲಿ) ಸುಮಾರು 18 ಸಾವಿರ ರೂ.ಗಳು. ಇನ್‌ಡಿಸೈನ್ ಜೊತೆಗೇ ಚಿತ್ರಗಳನ್ನು ಸಂಪಾದಿಸಲು, ಹಲವು ಬಗೆಯ ಚಿತ್ರಾಂಶಗಳನ್ನು ಡಿಟಿಪಿಯಲ್ಲಿ ಸೇರಿಸಲು (ಇದನ್ನು ಇಂಗ್ಲಿಷಿನಲ್ಲಿ ಗ್ರಾಫಿಕ್ಸ್ ಎಂದು ಕರೆಯುತ್ತಾರೆ) ಫೋಟೋಶಾಪ್ (ಚಿತ್ರಗಳ ಸಂಪಾದನೆ), ಇಲಸ್ಟ್ರೇಟರ್ (ಸಂಸ್ಥೆಗಳ ಚಿಹ್ನೆ ತಯಾರಿಸುವ, ವಿವಿಧ ಕಲಾಕೃತಿಗಳನ್ನು, ಕೋಷ್ಟಕಗಳನ್ನು ರಚಿಸುವ ಸಾಧನ), – ಹೀಗೆ ಹಲವು ತಂತ್ರಾಂಶಗಳ ಸರಣಿಯನ್ನೇ ಅಡೋಬ್ ಸಂಸ್ಥೆಯು ಮಾರುಕಟ್ಟೆಗೆ ತಂದಿದೆ. **(ಈ ಪಾಠದ ಕೊನೆಯಲ್ಲಿ ಒಂದು ಪಟ್ಟಿ ನೀಡಿದೆ, ಗಮನಿಸಿ)**

ಗಮನಿಸಿ: ಈ ಹಿಂದೆ ಭಾರತದಲ್ಲಿ ಜನಪ್ರಿಯವಾಗಿದ್ದ ಅಡೋಬ್ ಪೇಜ್‌ಮೇಕರ್ ತಂತ್ರಾಂಶವೂ ಇದೇ ಸಂಸ್ಥೆಗೆ ಸೇರಿದ್ದು, ಈಗ ಅದರ ಅಭಿವೃದ್ಧಿಯನ್ನು ನಿಲ್ಲಿಸಲಾಗಿದೆ. ಆದರೆ ಪೇಜ್‌ಮೇಕರ್ ಕಡತಗಳನ್ನು ಇನ್‌ಡಿಸೈನ್‌ನಲ್ಲಿ ತೆರೆಯಬಹುದಾಗಿದೆ.

ತಂತ್ರಾಂಶ ರಂಗದಲ್ಲಿ ಹಲವು ಮುಕ್ತ ತಂತ್ರಾಂಶಗಳೂ ಸಿಗುತ್ತವೆ. ಇವುಗಳಲ್ಲಿ ಸ್ಕ್ರೈಬಸ್, ಇಂಕ್‌ಸ್ಕೇಪ್, ಗಿಂಪ್ ಮತ್ತು ಕ್ರಿತಾ ಮುಖ್ಯವಾದವು. ಖರೀದಿಗೆ ಸಿಗುವ ಮತ್ತು ಮುಕ್ತವಾಗಿ ಸಿಗುವ ತಂತ್ರಾಂಶಗಳ ಪಟ್ಟಿಯನ್ನು ಈ ಪಾಠದ ಕೊನೆಯಲ್ಲಿ ನೀಡಲಾಗಿದೆ. ಇವೆಲ್ಲವೂ ಬಹುತೇಕ ವಿಂಡೋಸ್ ಆಪರೇಟಿಂಗ್ ಸಿಸ್ಟಂನಲ್ಲಿ ಸ್ಥಾಪನೆಯಾಗುತ್ತವೆ.

ವಿನ್ಯಾಸದ ಮೂಲ ಗುಣಗಳು

ಯಾವುದೇ ಕೃತಿಯನ್ನು ಡಿಟಿಪಿ ಮೂಲಕ ವಿನ್ಯಾಸಗೊಳಿಸಬೇಕು ಎಂದರೆ ಈ ಅಂಶಗಳನ್ನು ಗಮನಿಸಬೇಕು: ವಿನ್ಯಾಸದ ಗಾತ್ರ, ಪುಟಗಳು, ಮುದ್ರಣದ ಮತ್ತು ಬೈಂಡ್ ಆಗುವ ಮಾಹಿತಿಗಳು, ಇತ್ಯಾದಿ.

ಪಠ್ಯ, ಚಿತ್ರಗಳ ಮೂಲ ಅಂಶಗಳು

ಪ್ರತಿಯೊಂದೂ ಡಿಟಿಪಿ ತಂತ್ರಾಂಶದಲ್ಲಿ ಪರದೆಯ ಮೇಲ್ಭಾಗದಲ್ಲಿ ಮೆನ್ಯು ಇದ್ದೇ ಇರುತ್ತದೆ. ವರ್ಡ್ ಪ್ರಾಸೆಸರ್‌ಗಳಲ್ಲಿ ಇರುವಂತೆಯೇ ಈ ಮೆನ್ಯುಗಳು ಕಾಣಿಸಿದರೂ, ಇಲ್ಲಿ ಆಯ್ಕೆಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ ಮತ್ತು ಮುದ್ರಣರಂಗದ, ಕಲಾರಂಗದ ಹಲವು ಅಂಶಗಳನ್ನು ಹೊಂದಿರುತ್ತವೆ. ಕಾಪಿ

ಪೇಸ್ಟ್, ಪೇಸ್ಟ್ ಆಪ್ಶನ್ಸ್, ಚಿತ್ರವನ್ನು ಸೇರಿಸುವ ಪ್ಲೇಸ್ ಆಯ್ಕೆ – ಹೀಗೆ ಕೆಲವು ಸರ್ವೇಸಾಧಾರಣ ಆಯ್ಕೆಗಳ ಜೊತೆಗೇ ಹಲವು ಆಕಾರಗಳನ್ನು ಜೋಡಿಸುವ, ಪಠ್ಯ ಮತ್ತು ಚಿತ್ರಗಳನ್ನು ಹೊಂದಿಸುವ, ಇತರೆ ಸಂಕೀರ್ಣ ಅವಕಾಶಗಳನ್ನೂ ಈ ತಂತ್ರಾಂಶಗಳು ನೀಡುತ್ತವೆ.

ಡಿಟಿಪಿ ಕೆಲಸಕ್ಕೆ ಕಲರ್ ಪ್ರಿಂಟಿಂಗ್‌ನ ಸೂತ್ರಗಳ ಪ್ರಾಥಮಿಕ ಮಾಹಿತಿಯೂ ಅಗತ್ಯ. ಆರ್‌ಜಿಬಿ (ರೆಡ್ ಗ್ರೀನ್ ಬ್ಲೂ), ಸಿಎಂವೈಕೆ (ಸಯಾನ್, ಮೆಜೆಂಟಾ, ಯೆಲ್ಲೋ, ಬ್ಲಾಕ್) ಗ್ರೇಸ್ಕೇಲ್, ಡಿಪಿಐ (ಡಾಟ್ಸ್ ಪರ್ ಇಂಚಸ್), – ಹೀಗೆ ಕೆಲವು ತಾಂತ್ರಿಕ ಮಾಹಿತಿಗಳನ್ನು ಅರಿಯಬೇಕು. ಚಿತ್ರಗಳ ವಿಷಯಕ್ಕೆ ಬಂದರೆ ಜೆಪೆಗ್, ಟಿಫ್, ಬಿಟ್‌ಮ್ಯಾಪ್, ಜಿಫ್, ಪಿಎನ್‌ಜಿ ಫಾರ್ಮಾಟ್‌ಗಳ ಬಗ್ಗೆ ಅರಿವು ಇರಬೇಕಾಗುತ್ತದೆ.

ಡಿಟಿಪಿ ಮಾಡುವಾಗ ಫ್ಲೋ, ರನಾನ್, ಶೀರ್ಷಿಕೆ, ಫುಟರ್, ಹೆಡರ್, ಬಾಕ್ಸ್, ಪರಿವಿಡಿ, ಮುಖಪುಟ, ಹಿಂಪುಟ, ಫೋಲಿಯೋ, ವಿಡೋ ಮತ್ತು ಆರ್ಫನ್, ಅಲೈನ್‌ಮೆಂಟ್, ಗಟರ್ ಸ್ಪೇಸ್, ಬ್ರೀದಿಂಗ್ ಸ್ಪೇಸ್, ಡ್ರಾಪ್‌ಕ್ಯಾಪ್ ಮುಂತಾದ ಡಿಟಿಪಿ ಕೇಂದ್ರಿತ ಪದ / ಪದಗುಚ್ಛಗಳನ್ನು ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಂದೂ ಮೆನ್ಯುವಿನಲ್ಲಿ ಇಂಥ ಹತ್ತಾರು ಪದಗಳಿರುತ್ತವೆ. ನಿಧಾನವಾಗಿ ಒಂದು ಖಾಲಿ ಪುಟದಲ್ಲಿ ಕೆಲವು ಪಠ್ಯಗಳನ್ನು ನಮೂದಿಸಿ ಈ ಆಯ್ಕೆಗಳನ್ನು ಮಾಡಿ ಪ್ರಯೋಗ ಮಾಡಿಯೇ ಇವುಗಳ ಅರ್ಥ ತಿಳಿಯಬೇಕು. ಕೊನೆಯ ಮೆನ್ಯುವಿನಲ್ಲಿ ಸಾಮಾನ್ಯವಾಗಿ ಸಹಾಯದ ಅಧ್ಯಾಯ ಇರುತ್ತದೆ. ಇಲ್ಲಿ ನೀವು ಈ ತಂತ್ರಾಂಶವನ್ನು, ಅದರ ಸಂಕೀರ್ಣ ಮೆನ್ಯುವನ್ನು ಬಳಸಿಕೊಳ್ಳುವುದು ಹೇಗೆ ಎಂಬ ಸಚಿತ್ರ ವಿವರಣೆ ಇರುತ್ತದೆ. ಇತ್ತೀಚೆಗೆ ಈ ಸಹಾಯಪುಟವು ಆನ್‌ಲೈನ್ ಕೋಶಕ್ಕೆ ಜೋಡಣೆಯಾಗಿರುತ್ತದೆ. ಆದ್ದರಿಂದ ನೀವು ತಾಜಾ ಮಾಹಿತಿಯನ್ನು ಪಡೆಯಬಹುದು.

ಡಿಟಿಪಿ ಕಲಿಯುವುದು ಒಂದು ಕಲೆ. ಅದಕ್ಕೆ ದಿನದ ನಿರ್ದಿಷ್ಟ ಕಾಲವನ್ನು ನೀಡಬೇಕು. ಗಮನವಿಟ್ಟು ಕಲಿಯಬೇಕು. ಅನುಭವಿಗಳಲ್ಲಿ ಕೇಳಿ ತಿಳಿಯಬೇಕು. ಪದೇ ಪದೇ ವಿವಿಧ ಆಯ್ಕೆಗಳನ್ನು ಪ್ರಯೋಗಿಸಿ ಅರಿಯಬೇಕು.

ಡಿಟಿಪಿ ಸೂತ್ರಗಳು

- ಪುಸ್ತಕದಂಥ ಪಠ್ಯದ ಸಂದರ್ಭದಲ್ಲಿ ಬರೀ ಉದ್ದುದ್ದ ಸಾಲುಗಳು, ಪ್ಯಾರಾಗಳು ಇರಬಾರದು. ಅಲ್ಲಲ್ಲಿ ಸೂಕ್ತವಾದ ಪ್ಯಾರಾ ಶೀರ್ಷಿಕೆಗಳನ್ನು ಬರೆಯಬೇಕು.
- ಲೈನ್‌ಸ್ಪೇಸ್ (ಸಾಲು ಅಂತರ) : ಓದುವ ಪಠ್ಯಭಾಗವನ್ನು ರನ್‌ಆನ್ ಟೆಕ್ಸ್ಟ್ ಎಂದು ಕರೆಯುತ್ತಾರೆ. ಈ ಸಾಲುಗಳ ಅಂತರವನ್ನು ತಂತ್ರಾಂಶದಲ್ಲೇ ಅಳವಡಿಸಲಾಗಿದೆ. ಸಾಮಾನ್ಯ ಸಂದರ್ಭಗಳಲ್ಲಿ ಈ 'ಆಟೋ ಸ್ಪೇಸ್'ನ್ನೇ ಬಳಸಬೇಕು. ವಿನ್ಯಾಸದ ಸಂದರ್ಭಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಅಂತರವನ್ನು ಬದಲಿಸಬಹುದು.

- ಎರಡು ಅಥವಾ ಹೆಚ್ಚು ಕಾಲಂಗಳಿರುವ ಕಡೆ ಬದಿಯ ಅಂತರವನ್ನು ಪುಸ್ತಕದ ಗಾತ್ರಕ್ಕೆ ತಕ್ಕಂತೆ ಇಟ್ಟುಕೊಳ್ಳಬೇಕು. ಕಾಲಂಗಳ ನಡುವಣ ಅಂತರವನ್ನು 'ಗಟರ್‌ಸ್ಪೇಸ್' ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಕನಿಷ್ಠ 5 ಮಿಲಿಮೀಟರ್ ಇರುತ್ತದೆ.
- ವಿನ್ಯಾಸದಲ್ಲಿ ಪಠ್ಯವನ್ನು ಜಾಗ ಇದ್ದಲ್ಲೆಲ್ಲ ತುಂಬುವುದಕ್ಕಿಂತ ಬದಿಗಳಲ್ಲಿ, ಮೇಲೆ ಮತ್ತು ಕೆಳಭಾಗದಲ್ಲಿ ಕಲಾತ್ಮಕವಾಗಿ ಬಿಳಿ ಜಾಗವನ್ನು ಬಿಡಬೇಕು. ಇದನ್ನು ಬ್ರೀದಿಂಗ್ ಸ್ಪೇಸ್ ಎನ್ನುತ್ತಾರೆ. ಇದನ್ನು ಅನುಭವದಿಂದಲೇ ಕರಗತ ಮಾಡಿಕೊಳ್ಳಬೇಕು.
- ಇದಲ್ಲದೆ ಡಿಟಿಪಿ ಕೆಲಸಗಳಲ್ಲಿ ಅಂಚುಗಳನ್ನು ಹಾಕುವುದು, ರಿವರ್ಸ್ ಪಠ್ಯ, ಸ್ಕ್ರೀನ್, ಗೆರೆ ಮತ್ತು ಬಾಕ್ಸ್‌ಗಳನ್ನು ಹಾಕುವುದು – ಮುಂತಾದ ಆಯ್ಕೆಗಳಿರುತ್ತವೆ. ಇವನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಬೇಕೇ ವಿನಃ ಅವಕಾಶ ಇದೆ ಎಂದು ಪದೇ ಪದೇ ಬಳಸಬಾರದು.
- ಕನ್ನಡದಲ್ಲಿ ಹೈಫನೇಶನ್ : ಡಿಟಿಪಿ ತಂತ್ರಾಂಶಗಳು ಹೆಚ್ಚಾಗಿ ಇಂಗ್ಲಿಷ್ ಪಠ್ಯಕ್ಕೆಂದೇ ರೂಪಿಸಿದ್ದು. ಆದ್ದರಿಂದ ಕನ್ನಡದ ಪಠ್ಯವನ್ನು ಸರಿಯಾಗಿ ಹೈಫನೇಶನ್ (ಪದಭಾಗ ಮಾಡುವುದು) ಮಾಡುವುದನ್ನು ಕಲಿತುಕೊಳ್ಳಬೇಕು. ಪ್ರತಿಯೊಂದೂ ತಂತ್ರಾಂಶದಲ್ಲಿ ಹೈಫನೇಶನ್ ಕುರಿತ ಆಯ್ಕೆಗಳನ್ನು ಸೂಕ್ತವಾಗಿ ಬದಲಿಸಿಕೊಳ್ಳಬಹುದು.

ಡಿಟಿಪಿಗೆ ಬೇಕಾದ ಸಾಧನಗಳು

- ಡಿಟಿಪಿ ಮಾಡಲು ಮುಖ್ಯವಾಗಿ ತಂತ್ರಾಂಶ ಬೇಕು. ಈ ಬಗ್ಗೆ ಮೊದಲೇ ಮಾಹಿತಿ ನೀಡಿದೆ.
- ಡಿಟಿಪಿ ಮಾಡುವ ಕಂಪ್ಯೂಟರಿನಲ್ಲಿ ವಿವಿಧ ಬಗೆಯ ಮತ್ತು ಬೇರೆ ಬೇರೆ ಭಾಷೆಗಳ ಫಾಂಟ್‌ಗಳು (ಅಕ್ಷರಗಳು) ಇರಬೇಕು.
- ಡಿಟಿಪಿಗೆ ಬೇಕಾದ ಚಿತ್ರಗಳನ್ನು ಮೊದಲೇ ಸಂಗ್ರಹಿಸಿ ಒಂದು ಫೋಲ್ಡರಿನಲ್ಲಿ ಇಟ್ಟುಕೊಂಡಿರಬೇಕು. ಈ ಚಿತ್ರಗಳನ್ನೂ ಸಾಮಾನ್ಯವಾಗಿ ನಾಲ್ಕು ಬಣ್ಣಗಳ (ಸಿಎಂವೈಕೆ) ಜೆಪೆಗ್ ಫಾರ್ಮ್ಯಾಟ್‌ನಲ್ಲಿ ಪರಿವರ್ತಿಸಿ ಇಟ್ಟುಕೊಳ್ಳಬೇಕು. ಕಪ್ಪು ಬಿಳುಪು ಪುಸ್ತಕವಾದರೆ ಚಿತ್ರಗಳನ್ನು ಕಪ್ಪು ಬಿಳುಪಿಗೆ ಪರಿವರ್ತಿಸಿಕೊಳ್ಳಬೇಕು.
- ಮುದ್ರಣಕ್ಕಾಗಿ ಕಡತವನ್ನು ಕಳಿಸಲು ಪಿಡಿಎಫ್ ಕನ್ವರ್ಟರ್‌ನ್ನು (ಪೋರ್ಟಬಲ್ ಡಾಕ್ಯುಮೆಂಟ್ ಫಾರ್ಮ್ಯಾಟ್) ಹೊಂದಿರಬೇಕು. ಏಕೆಂದರೆ ಮುದ್ರಣಾಲಯಗಳಲ್ಲಿ ನಾವು ವಿನ್ಯಾಸಕ್ಕೆ ಬಳಸುವ ತಂತ್ರಾಂಶ ಮತ್ತು ಫಾಂಟ್‌ಗಳು ಇದ್ದೇ ಇರುತ್ತವೆ ಎಂದು ನಿರೀಕ್ಷಿಸಲಾಗದು. ಅಲ್ಲದೆ ನಾವು ಕಳಿಸಿದ ಕಡತದಲ್ಲಿ ಏನೂ ಬದಲಾವಣೆ ಆಗದೆ, ವಿನ್ಯಾಸವು

ಹೆಚ್ಚುಕಡಿಮೆಯಾಗದೆ ಮುದ್ರಣವಾಗಬೇಕು ಎಂದಿದ್ದರೆ ಮುದ್ರಕರು ಬದಲಿಸಲಾಗದಂಥ ಪಿಡಿಎಫ್ ಫಾರ್ಮಾಟ್‌ನಲ್ಲಿಯೇ ಕಡತವನ್ನು ಕಳಿಸಬೇಕಾಗುತ್ತದೆ. (ಆಕ್ರೋಬ್ಯಾಟ್ ಪಾವತಿಸಬೇಕಾದ ತಂತ್ರಾಂಶವಾಗಿದೆ ಎಂಬುದನ್ನು ಗಮನಿಸಿ. ಉಚಿತವಾಗಿ ಸಿಗುವ ಪಿಡಿಎಫ್ ಕನ್ವರ್ಟರ್‌ಗಳು ವಿನ್ಯಾಸದ ಪುಟಗಳ ಮೇಲೆ ತಮ್ಮ ಸಂಸ್ಥೆಯ ಹೆಸರನ್ನು ಛಾಪಿಸುವ ಸಾಧ್ಯತೆಯೂ ಇರುತ್ತದೆ.)


- ಡಿಟಿಪಿಯನ್ನು ಕಲಿಯುತ್ತ ಹೋದಂತೆಲ್ಲ ಮೇಲಿನ ಹಂತದ ಕುಶಲತೆಯನ್ನೂ ಬೆಳೆಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಡಿಟಿಪಿ ತಂತ್ರಾಂಶದ ಪುಟದಲ್ಲಿ ವರ್ಡ್ ಪ್ರಾಸೆಸರ್‌ನ ಪಠ್ಯವನ್ನು ಪ್ಲೇಸ್ ಮಾಡುವುದು, ಪಠ್ಯದ ಕರಡನ್ನು ತಂತ್ರಾಂಶ ಬಳಕೆಯ ಮೂಲಕ ತಿದ್ದುವುದು, ಫಾಂಟ್ ಪರಿವರ್ತನೆ, ಚಿತ್ರಗಳ ಸಂಪಾದನೆ, (ಎರಡು ಹಂತಗಳಲ್ಲಿ: ಮೊದಲು ಎಡಿಟ್ ಮಾಡುವುದು, ಆಮೇಲೆ ಡಿಟಿಪಿ ಮಾಡುವಾಗ ಟ್ರಿಮ್ ಮಾಡುವುದು ಇತ್ಯಾದಿ), ಪರಿವಿಡಿಯನ್ನು ತಂತ್ರಾಂಶ ಬಳಕೆಯ ಮೂಲಕ ರೂಪಿಸುವುದು ಇತ್ಯಾದಿ.


ಡಿಟಿಪಿಯ ಕಲಿಕೆಯ ಹಂತಗಳು

ಯಾವುದೇ ತಂತ್ರಾಂಶದಲ್ಲಿ ಮೊದಲು ಒಂದು ಪುಟ ತೆರೆಯುವುದು ಮತ್ತು ಸೇವ್ ಮಾಡುವುದು – ಇದನ್ನು ಕಲಿಯಿರಿ. ಸಾಮಾನ್ಯವಾಗಿ ಕಂಟ್ರೋಲ್+N ಒತ್ತಿದರೆ ಹೊಸ ಕಡತದ ನಿರ್ಮಾಣಕ್ಕಾಗಿ ತಂತ್ರಾಂಶವು ಹಲವು ಮಾಹಿತಿಗಳನ್ನು ಕೇಳುತ್ತದೆ. ಹಳೆಯ ಕಡತವನ್ನು ತೆರೆಯಲು ಕಂಟ್ರೋಲ್+O ಒತ್ತಬೇಕು. ಪ್ರತಿಯೊಂದೂ ತಂತ್ರಾಂಶವೂ ತನ್ನದೇ ಆದ ಕೀಲಿಮಣೆ ಶಾರ್ಟ್‌ಕಟ್‌ಗಳನ್ನು ಹೊಂದಿರುತ್ತದೆ. ಇತ್ತೀಚೆಗೆ ಒಂದು ತಂತ್ರಾಂಶದ ಶಾರ್ಟ್‌ಕಟ್‌ಗಳಂತೆಯೇ ಇನ್ನೊಂದು ತಂತ್ರಾಂಶದಲ್ಲಿ ಕೀಲಿಮಣೆಯನ್ನು ಬದಲಿಸಿಕೊಳ್ಳುವ ಅನುಕೂಲವೂ ಬಂದಿದೆ.

ಒಂದು ಪುಟವನ್ನು ತೆರೆದ ಮೇಲೆ ಅದೇ ಪುಟದಲ್ಲಿ ಪಠ್ಯ ಹಾಕುವುದು, ಚಿತ್ರ ಹಾಕುವುದು, ಸಮತಲದಲ್ಲಿ ಎರಡು ಕಾಲಂಗಳನ್ನು ಜೋಡಿಸುವುದು, ಪುಟಸಂಖ್ಯೆ ಹಾಕುವುದು ಇತ್ಯಾದಿ ಕೆಲಸಗಳನ್ನು ಕಲಿಯಿರಿ. ಹಾಗೆಯೇ ಇನ್‌ಡಿಸೈನ್‌ನಂಥ ತಂತ್ರಾಂಶದಲ್ಲಿ ನೀವು ಮಾಸ್ಟರ್ ಪೇಜ್ ತಯಾರಿಸುವುದು ಹೇಗೆ ಎಂದು ಕಲಿಯಿರಿ. ನೂರಾರು ಪುಟಗಳಲ್ಲಿ ಫುಟರ್ ಅಥವಾ ಹೆಡರ್‌ಗಳನ್ನು, ಪುಟಸಂಖ್ಯೆಗಳನ್ನು ಯಾಂತ್ರಿಕವಾಗಿ ಮೂಡಿಸಬೇಕಾದರೆ ಈ ಮಾಸ್ಟರ್ ಪೇಜ್‌ಗಳನ್ನು ಬಳಸಬೇಕು.

ಗಮನಿಸಿ: ಈಗಿನ ಡಿಟಿಪಿ ತಂತ್ರಾಂಶಗಳಲ್ಲಿ ಯುನಿಕೋಡ್ ಕನ್ನಡ ಫಾಂಟ್‌ಗಳ ಬಳಕೆ ಸಾಧ್ಯವಿಲ್ಲ. ಇನ್‌ಡಿಸೈನ್ 6.0 ಆವೃತ್ತಿಯಲ್ಲಿ ಯುನಿಕೋಡ್ ಕನ್ನಡವನ್ನು ನಮೂದಿಸಬಹುದಾದರೂ ಅದನ್ನು ಬೇಕಾದ ವಿನ್ಯಾಸಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಸಾಧ್ಯತೆಗಳು ಇನ್ನೂ ಗಟ್ಟಿಯಾಗಿಲ್ಲ. ಆದ್ದರಿಂದ ಈಗಿರುವ ಫಾಂಟ್‌ಗಳನ್ನೇ ಬಳಸಬೇಕು.





ಮೇಲಿನ ಚಿತ್ರದಲ್ಲಿ ಇನ್‌ಡಿಸೈನ್ ಕೆಲಸದ ಪರದೆಯನ್ನು ಗಮನಿಸಿ. ಕೆಳಗಿನದು ಗಿಂಪ್ ತಂತ್ರಾಂಶದ್ದು. ಚಿತ್ರದಲ್ಲಿ ಡಿಟಿಪಿಯ ವಿವಿಧ ಅವಕಾಶಗಳನ್ನು ಗಮನಿಸಬಹುದು.



ಕಪ್ಪು ಬಣ್ಣ ಮತ್ತು ಪಠ್ಯವನ್ನಷ್ಟೇ ಬಳಸಿ ರೂಪಿಸಿದ ಡಿಟಿಪಿ ಪುಟ.

ಅನಂತರ ಡಿಟಿಪಿ ಮೂಲಕ ವಿನ್ಯಾಸ ಮಾಡುವ ವಿವಿಧ ಹಂತಗಳನ್ನು ಕಲಿಯಿರಿ. ಉದಾಹರಣೆಗೆ ಪ್ಯಾರಾಗ್ರಾಫ್ ಮತ್ತು ಕ್ಯಾರಕ್ಟರ್ ಶೈಲಿಗಳನ್ನು ರೂಪಿಸುವುದು, – ಟೆಕ್ಸ್ಟ್ ಫ್ಲೋ, ಚಿತ್ರಗಳನ್ನು ಅಳವಡಿಸುವುದು, ಅಧ್ಯಾಯಗಳು, ಶೀರ್ಷಿಕೆ – ಇಂಟ್ರೋ, ಡ್ರಾಪ್‌ಕ್ಯಾಪ್, ಬಾಕ್ಸ್, ಟೇಬಲ್, ಫುಟ್‌ನೋಟ್, ಪುಟಸಂಖ್ಯೆ, ಇಂಡೆಕ್ಸ್, ಫೋಲಿಯೋ, ಇತ್ಯಾದಿ.

ಈ ಪಾಠದಲ್ಲಿ ಈವರೆಗೆ ತಿಳಿದುಕೊಂಡ ಮಾಹಿತಿಗಳನ್ನು ನೋಡಿದರೆ ಡಿಟಿಪಿಯು ಒಂದು ಕಂಪ್ಯೂಟರ್ ಶಿಕ್ಷಣ, ಭಾಷೆಯ ಶುದ್ಧತೆ, ಕನ್ನಡ ಫಾಂಟ್‌ಗಳ ಬಳಕೆ, ಚಿತ್ರಗಳ ಸಂಪಾದನೆ, ಮುದ್ರಣರಂಗದ ಮಾಹಿತಿ, ಬಣ್ಣಗಳ ಅರಿವು, ವಿನ್ಯಾಸದ ಸೃಜನಶೀಲತೆ – ಇವೆಲ್ಲವನ್ನೂ ಬೇಡುವ ಬಹುಕೌಶಲ್ಯದ ಕಲೆ ಎನ್ನಬಹುದು ಅಲ್ಲವೆ?

ಈ ಪಾಠವು ಡಿಟಿಪಿ ಕುರಿತ ಪ್ರಾಥಮಿಕ ಮಾಹಿತಿಗಳನ್ನು ಪರಿಚಯಿಸುತ್ತದೆ; ಪುಟಮಿತಿಯಿಂದಾಗಿ ಡಿಟಿಪಿಯ ಎಲ್ಲಾ ಸೂತ್ರಗಳನ್ನೂ ಸಚಿತ್ರವಾಗಿ ಮೂಡಿಸಿಲ್ಲ ಎಂಬುದನ್ನು ಗಮನಿಸಿ.

ವಿದ್ಯಾರ್ಥಿ ಹಂತದಲ್ಲೇ ಡಿಟಿಪಿಯನ್ನು ಕಲಿತರೆ, ಮುಂದಿನ ದಿನಗಳಲ್ಲಿ ಉದ್ಯೋಗ ನೀಡುವ ಸಂಸ್ಥೆಗಳಲ್ಲಿ ಡಿಟಿಪಿ ಕೌಶಲ್ಯವೂ ಒಂದು ಹೆಚ್ಚುಗಾರಿಕೆಯ ಅಂಶವಾಗುತ್ತದೆ. ಏಕೆಂದರೆ ಯಾವುದೇ ಕಂಪ್ಯೂಟರ್ ಕಡತಕ್ಕೂ ಒಂದು ಶಿಸ್ತಿನ ವಿನ್ಯಾಸ ಬೇಕೇ ಬೇಕು. ಮುದ್ರಣವಾಗಲಿ, ಆಗದಿರಲಿ, ಬರೆದಿದ್ದೆಲ್ಲ ಶಿಸ್ತಿನಿಂದ ಜೋಡಣೆಯಾಗಿದ್ದರೆ ಸಂಸ್ಥೆಗೆ, ಸಿಬ್ಬಂದಿಗೆ ಒಳ್ಳೆಯ ಹೆಸರು.

ಆದ್ದರಿಂದ ಈ ಕಾಲದಲ್ಲಿ ಡಿಟಿಪಿ ಕಲಿಯುವುದು ಕೇವಲ ಡಿಟಿಪಿ ಆಪರೇಟರ್‌ಗೆ ಮಾತ್ರ ಸೀಮಿತವಲ್ಲ. ಕಂಪ್ಯೂಟರ್ ಹೊಂದಿದ ಪ್ರತಿಯೊಬ್ಬರೂ ಈ ಕಲೆಯನ್ನು ಕರಗತ ಮಾಡಿಕೊಳ್ಳಬಹುದು.

ಅನುಬಂಧ: ಕೆಲವು ಡಿಟಿಪಿ ತಂತ್ರಾಂಶಗಳ ಪಟ್ಟಿ

ಪುಸ್ತಕವಿನ್ಯಾಸ ಕೇಂದ್ರಿತ ಅಪ್ಲಿಕೇಶನ್ ತಂತ್ರಾಂಶಗಳು

● **ಸ್ಕ್ರೈಬಸ್/ ಮುಕ್ತ ತಂತ್ರಾಂಶ**

www.scribus.com

ಬಳಕೆಯ ಉದ್ದೇಶ: ಪುಸ್ತಕ ವಿನ್ಯಾಸ, ಬ್ರೋಶರ್‌ಗಳು

ಇದು ಇನ್‌ಡಿಸೈನ್ ಮತ್ತು ಪೇಜ್‌ಮೇಕರ್‌ಗಳಿಗೆ ಪರ್ಯಾಯವಾದ ಮುಕ್ತ ತಂತ್ರಾಂಶ. ಆದರೆ ಇಲ್ಲೂ ಸಾಕಷ್ಟು ಸುಧಾರಣೆಗಳಾಗಬೇಕಿದೆ.

● **ಕೋರೆಲ್ ವೆಂಚುರಾ/ ಪಾವತಿಸಬೇಕಾದ ತಂತ್ರಾಂಶ**

www.corel.com

ಬಳಕೆಯ ಉದ್ದೇಶ: ಪುಸ್ತಕ ವಿನ್ಯಾಸ, ಬ್ರೋಶರ್‌ಗಳು

ಇದು ವಿಂಡೋಸ್ ಎಕ್ಸ್ ಪಿವರೆಗೆ ಮಾತ್ರ ಬಳಕೆಗೆ ಲಭ್ಯ. ಈಗ ಚಾಲ್ತಿಯಲ್ಲಿಲ್ಲ. ಇದರ ಹಳೆಯ ಕಡತಗಳಿಂದ ಪಠ್ಯವನ್ನು ತೆಗೆಯಲು ವಿಂಡೋಸ್ ಎಕ್ಸ್ ಪಿ ಯಲ್ಲಿ ಸ್ಥಾಪನೆ ಮಾಡಿಕೊಂಡರೆ ಮಾತ್ರ ಸಾಧ್ಯ.

● **ಮೈಕ್ರೋಸಾಫ್ಟ್ ಪಬ್ಲಿಶರ್/ ಪಾವತಿಸಬೇಕಾದ ತಂತ್ರಾಂಶ**

office.microsoft.com

ಬಳಕೆಯ ಉದ್ದೇಶ: ಪುಸ್ತಕವಿನ್ಯಾಸ, ಸರಳ ಜಾಲಪುಟಗಳು

ಇದು ಮೈಕ್ರೋಸಾಫ್ಟ್ ಸಂಸ್ಥೆಯು 'ನನ್ನಲ್ಲೂ ಡಿಟಿಪಿ ತಂತ್ರಾಂಶ' ಇದೆ ಎಂದು ತೋರಿಸಿಕೊಳ್ಳಲು ರೂಪಿಸಿದ ತಂತ್ರಾಂಶ. ಬಳಕೆದಾರ ಸ್ನೇಹಿ ಅಲ್ಲ.

● **ಇನ್‌ಡಿಸೈನ್ (ಅಡೋಬ್)/ ಪಾವತಿಸಬೇಕಾದ ತಂತ್ರಾಂಶ**

www.adobe.com

ಬಳಕೆಯ ಉದ್ದೇಶ: ಪುಸ್ತಕ ವಿನ್ಯಾಸ, ಬ್ರೋಶರ್‌ಗಳು, ಪೋಸ್ಟರ್‌ಗಳು,

ಇದು ಮಾರುಕಟ್ಟೆಯಲ್ಲಿ ಲಭ್ಯವಿರುವ ಅತ್ಯಂತ ಬಳಕೆಸ್ನೇಹಿ, ಪ್ರೊಪ್ರೈಟರಿ ತಂತ್ರಾಂಶ. ಭಾರತದಲ್ಲಿ ಇದರ ಬಳಕೆ ಕಡಿಮೆ ಇದ್ದರೂ, ಈ ಕಡತಗಳನ್ನು ಇಮೇಜ್ ಅಥವಾ ಪಿಡಿಎಫ್ ಮಾಡಿ ಮುದ್ರಣಕ್ಕೆ ಕಳಿಸಬಹುದು. ಹೀಗಾಗಿ ಇದು ಪುಸ್ತಕ ವಿನ್ಯಾಸಕ್ಕೆ ಹೇಳಿ ಮಾಡಿಸಿದ ಅತ್ಯುತ್ಕೃಷ್ಟ ತಂತ್ರಾಂಶ.

● **ಕ್ವಾರ್ಕ್ ಎಕ್ಸ್‌ಪ್ರೆಸ್ / ಪಾವತಿಸಬೇಕಾದ ತಂತ್ರಾಂಶ**

www.quarkexpress.com

ಬಳಕೆಯ ಉದ್ದೇಶ: ಡಿಟಿಪಿ, ಪುಸ್ತಕ ವಿನ್ಯಾಸ

ಇದು ಹಲವು ಮಾಧ್ಯಮ ಸಂಸ್ಥೆಗಳಲ್ಲಿ ಬಳಕೆಯಾಗುತ್ತಿದೆ. ಇವರು ಸಾಂಸ್ಥಿಕ ಗ್ರಾಹಕರನ್ನೇ ಹೆಚ್ಚು ಹೊಂದಿದ್ದಾರೆ. ಆದರೆ ಇದೂ ಪುಟವಿನ್ಯಾಸಕ್ಕೆ ಸಾಕಷ್ಟು ಅನುಕೂಲಗಳನ್ನು ಹೊಂದಿದೆ. ಇನ್‌ಡಿಸೈನ್ ಬಿಟ್ಟರೆ ಇದೇ ಹೆಚ್ಚು ಅನುಕೂಲ ಹೊಂದಿರುವ ತಂತ್ರಾಂಶ.

ಚಿತ್ರವಿನ್ಯಾಸ ಕೇಂದ್ರಿತ ಅಪ್ಲಿಕೇಶನ್ ತಂತ್ರಾಂಶಗಳು

● **ಕೋರೆಲ್‌ಡ್ರಾ/ ಪಾವತಿಸಬೇಕಾದ ತಂತ್ರಾಂಶ**

www.corel.com

ಬಳಕೆಯ ಉದ್ದೇಶ: ಜಾಹೀರಾತುಗಳು, ಬ್ರೋಶರ್‌ಗಳು, ಪ್ರಚಾರ ಸಾಮಗ್ರಿಗಳು, ಭಾರೀ ಗಾತ್ರದ ಹೋರ್ಡಿಂಗ್ ಮುಂತಾದ ವಿನ್ಯಾಸಗಳು, ಸೈನ್‌ಬೋರ್ಡ್‌ಗಳು

ಇದನ್ನು ಪುಸ್ತಕ ವಿನ್ಯಾಸಕ್ಕೆ ಬಳಸುವುದು ಅಪೇಕ್ಷಣೀಯವಲ್ಲ. ಈ ತಂತ್ರಾಂಶವು ಮುಖ್ಯವಾಗಿ ಎಸ್ ವಿ ಜಿ (ಸ್ಕೇಲಬಲ್ ವೆಕ್ಟರ್ ಗ್ರಾಫಿಕ್ಸ್) ಆಧಾರಿತವಾದ ಪ್ರಧಾನ ತಂತ್ರಾಂಶವಾಗಿದ್ದು, ಜಾಹೀರಾತು ರಂಗದಲ್ಲಿ ಸರಸರ ಭರಭರ ಕೆಲಸ ಮಾಡಲು ಬಳಕೆಯಾಗುತ್ತಿದೆ.

● **ಕ್ರಿಟಾ / ಮುಕ್ತ ತಂತ್ರಾಂಶ**

KRITA

www.krita.org

ಬಳಕೆಯ ಉದ್ದೇಶ: ಕಲಾಕೃತಿಗಳನ್ನು ಕಂಪ್ಯೂಟರಿನಲ್ಲಿಯೇ ಮೂಡಿಸುವುದು

ಇದು ವಿಂಡೋಸ್ ಮತ್ತು ಲಿನಕ್ಸ್ – ಎರಡೂ ಆಪರೇಟಿಂಗ್ ಸಿಸ್ಟಂಗಳಲ್ಲಿ ಬಳಸಬಹುದಾದ ಕಲಾವಿದರಿಗೇ ಹೆಚ್ಚು ಅನುಕೂಲಕರವಾದ ಗ್ರಾಫಿಕಲ್ ಸಾಫ್ಟ್‌ವೇರ್. ಪೆನ್–ಟ್ಯಾಬ್ಲೆಟ್ (ಯುಎಸ್‌ಬಿ ಮೂಲಕ ಕಂಪ್ಯೂಟರಿಗೆ ಜೋಡಿಸಬಹುದಾದ ಒಂದು ಸ್ಲೇಟಿನಂಥ ಫಲಕ ಮತ್ತು ಡಿಜಿಟಲ್ ಪೆನ್) ಇದ್ದರೆ ಕ್ರಿಟಾದಿಂದ ಅದ್ಭುತವಾದ ಕಲಾಕೃತಿಗಳನ್ನು, ಮುಖಪುಟಗಳನ್ನು ರಚಿಸಬಹುದು. ಈಗ ಇದು ಮೊಬೈಲ್‌ಗಳಿಗೂ / ಸ್ಮಾರ್ಟ್‌ಫೋನ್‌ಗಳಿಗೂ ಬೇಕಾದ ಸ್ವರೂಪದಲ್ಲಿ ಸಿಗುತ್ತಿದೆ.

inkscape Draw Freely

● **ಇಂಕ್‌ಸ್ಕೇಪ್/ ಮುಕ್ತ ತಂತ್ರಾಂಶ**

www.inkscape.org

ಬಳಕೆಯ ಉದ್ದೇಶ: ಜಾಹೀರಾತುಗಳು, ಬ್ರೋಶರ್‌ಗಳು, ಪ್ರಚಾರ ಸಾಮಗ್ರಿಗಳು, ಭಾರೀ ಗಾತ್ರದ ಹೋರ್ಡಿಂಗ್ ಮುಂತಾದ ವಿನ್ಯಾಸಗಳು, ಸೈನ್‌ಬೋರ್ಡ್‌ಗಳು

● **ಫೋಟೋಶಾಪ್ (ಅಡೋಬ್)/ ಪಾವತಿಸಬೇಕಾದ ತಂತ್ರಾಂಶ**

www.adobe.com

ಬಳಕೆಯ ಉದ್ದೇಶ: ಚಿತ್ರಗಳ ತಿದ್ದುವಿಕೆ, ಮಾರ್ಪಡಿಸುವಿಕೆ (ಮಾರ್ಫಡಿಸುವಿಕೆಗೂ!)ಗೆ ಬಳಕೆಯಾಗುತ್ತದೆ. ಕೆಲವರು ಬ್ರೋಶರ್‌ಗಳಿಗೂ ಬಳಸುತ್ತಾರೆ. ಮುಖಪುಟ ವಿನ್ಯಾಸಕ್ಕೆ ಹೇಳಿ ಮಾಡಿಸಿದ ತಂತ್ರಾಂಶ.

ಇದು ಕಲಾವಿದರ ತಂತ್ರಾಂಶವೇ ಹೊರತು, ಡಿಟಿಪಿಗೆ ಅಲ್ಲ. ಕಲಾವಿರ ಕಲ್ಪನೆಯನ್ನೆಲ್ಲ ಸಾಕಾರಗೊಳಿಸುತ್ತದೆ. ಲೇಖಕರ ಕಲ್ಪನೆಗಳನ್ನೆಲ್ಲ ಕಲಾವಿದರಿಗೆ ಹೇಳಿ ಇಲ್ಲಿ ಸಾಧಿಸಬಹುದು. ಇದಕ್ಕೆ ಕಲಾತ್ಮಕ ಮನೋಭಾವ ಮುಖ್ಯ.

● **ಗಿಂಪ್ / ಮುಕ್ತ ತಂತ್ರಾಂಶ**

www.gimp.org

ಬಳಕೆಯ ಉದ್ದೇಶ: ಜಾಹೀರಾತುಗಳು, ಬ್ರೋಶರ್‌ಗಳು, ಪ್ರಚಾರ ಸಾಮಗ್ರಿಗಳು, ಭಾರೀ ಗಾತ್ರದ ಹೋರ್ಡಿಂಗ್ ಮುಂತಾದ ವಿನ್ಯಾಸಗಳು, ಸೈನ್‌ಬೋರ್ಡ್‌ಗಳು

ದಾಖಲೀಕರಣ ಕೇಂದ್ರಿತ ಅಪ್ಲಿಕೇಶನ್ ತಂತ್ರಾಂಶಗಳು

● **ಎಂ ಎಸ್ ಆಫೀಸ್/ ಪಾವತಿಸಬೇಕಾದ ತಂತ್ರಾಂಶ**

office.microsoft.com

ಬಳಕೆಯ ಉದ್ದೇಶ: ಅಕ್ಷರಜೋಡಣೆ, ಸರಳ ವಿನ್ಯಾಸ

ಇದು ಮೈಕ್ರೋಸಾಫ್ಟ್‌ನ ಅತಿಮುಖ್ಯ ತಂತ್ರಾಂಶ. ಇದನ್ನು ಅಕ್ಷರಜೋಡಣೆಗೆ, ಲೇಖನದ ಪಠ್ಯವನ್ನು ಇ-ಮೇಲ್ ಮಾಡಲು, ಮಾಹಿತಿ ಕಲೆ ಹಾಕಲು ಬಳಸಬಹುದು.

● **ಓಪನ್ ಆಫೀಸ್, ಲಿಬ್ರೆ ಆಫೀಸ್ / ಮುಕ್ತ ತಂತ್ರಾಂಶ**

www.openoffice.org

www.libreoffice.org

ಓಪನ್ ಆಫೀಸಿನಲ್ಲಿ ಎಂ ಎಸ್ ಆಫೀಸ್‌ಗಿಂತ ಹಲವು ಉತ್ತಮ ಗುಣಗಳು, ಅನುಕೂಲಗಳು ಇವೆ. ಲಿಬ್ರೆ ಆಫೀಸ್ ಕೂಡಾ ಹಲವು ಆಧುನಿಕ ಅನುಕೂಲಗಳನ್ನು ಹೊಂದಿದೆ. ಆದ್ದರಿಂದ ಇದನ್ನು ವಿಂಡೋಸ್ ಓಎಸ್‌ನಲ್ಲೂ ಸುಲಭವಾಗಿ ಬಳಸಬಹುದು.

ಅಂತರಜಾಲ ಮತ್ತು ಕನ್ನಡ

ಟಿ. ಜಿ. ಶ್ರೀನಿಧಿ

ಈಚಿನ ವರ್ಷಗಳಲ್ಲಿ ಅಂತರಜಾಲ ಹಾಗೂ ವಿಶ್ವವ್ಯಾಪಿ ಜಾಲಗಳು ನಮ್ಮೆಲ್ಲರ ಬದುಕಿನ ಅವಿಭಾಜ್ಯ ಅಂಗಗಳಾಗಿ ಹೋಗಿವೆ. ಹತ್ತಾರು ಪ್ರತ್ಯಕ್ಷ-ಪರೋಕ್ಷ ಉಪಯೋಗಗಳಿಗಾಗಿ ಎಲ್ಲರೂ ಅವನ್ನು ಬಳಸುತ್ತಿದ್ದರೂ ಜಾಲಲೋಕದಲ್ಲಿ ಸರಾಗವಾಗಿ ಸಂಚರಿಸಲು ಇಂಗ್ಲಿಷ್ ಭಾಷೆ ಗೊತ್ತಿರಬೇಕು ಎನ್ನುವ ಅಭಿಪ್ರಾಯ ಮಾತ್ರ ಅದೇಕೋ ವ್ಯಾಪಕವಾಗಿ ಉಳಿದುಕೊಂಡುಬಿಟ್ಟಿದೆ.

ಇಂದಿನ ಪರಿಸ್ಥಿತಿ ಎಷ್ಟು ಮುಂದುವರೆದಿದೆಯೆಂದರೆ ಅಂತರಜಾಲ-ವಿಶ್ವವ್ಯಾಪಿ ಜಾಲಗಳಲ್ಲಿ ಪ್ರಪಂಚದ ಹಲವಾರು ಭಾಷೆಗಳನ್ನು ಇಂಗ್ಲಿಷಿನಷ್ಟೇ ಪರಿಣಾಮಕಾರಿಯಾಗಿ ಬಳಸುವುದು ಸಾಧ್ಯವಾಗಿದೆ. ಇದಕ್ಕೆ ಕನ್ನಡವೂ ಹೊರತಲ್ಲ. ವೆಬ್‌ಲೋಕದಲ್ಲಿ ವಿಹರಿಸುವಾಗ ನಾವು ನಮ್ಮ ಕಸ್ತೂರಿ ಕನ್ನಡದಲ್ಲಿಯೇ ಬಹಳಷ್ಟು ಕೆಲಸಗಳನ್ನು ಪೂರೈಸಿಕೊಳ್ಳಬಹುದು.

ನಮ್ಮ ಪಾಲಿಗೆ ಜಾಲಲೋಕದ ಬೆಳಕಿಂಡಿಯಾದ ಬ್ರೌಸರ್ ತಂತ್ರಾಂಶದಿಂದ ಪ್ರಾರಂಭಿಸಿ ನಮ್ಮದೇ ವೆಬ್‌ಸೈಟಿನವರೆಗೆ ಎಲ್ಲ ಕಡೆಯಲ್ಲೂ ಕನ್ನಡದ ಬಳಕೆ ಬಹಳ ಸುಲಭ. ಈ ನಿಟ್ಟಿನಲ್ಲಿ ಒಂದಷ್ಟು ಮಾಹಿತಿಯನ್ನು ಒದಗಿಸುವುದೇ ಈ ಲೇಖನದ ಉದ್ದೇಶ.

ಜಾಲಲೋಕದಲ್ಲಿ ಕನ್ನಡ: ನಡೆದು ಬಂದ ದಾರಿ

ಕಂಪ್ಯೂಟರ್ ಪ್ರಪಂಚದಲ್ಲಿ ಕನ್ನಡ ಮೊದಲಿಗೆ ಬಳಕೆಯಾಗಿದ್ದು ಇಂಗ್ಲಿಷ್ ಲಿಪಿಯ ಮೂಲಕ. ಇಂಗ್ಲಿಷ್ ಅಕ್ಷರಗಳಲ್ಲಿ ಕನ್ನಡವನ್ನು ಮೂಡಿಸುವ ಈ ವಿಧಾನ 'ಕಂಗ್ಲಿಷ್' ಭಾಷೆ ಎಂದೇ ಜನಪ್ರಿಯ. ಕನ್ನಡದ 'ನಮಸ್ಕಾರ'ವನ್ನು ಇಂಗ್ಲಿಷಿನಲ್ಲಿ 'namaskaara' ಎಂದು ಲಿಪ್ಯಂತರ ಮಾಡಿ ಬರೆಯುವ ಈ ವಿಧಾನವನ್ನು ಇನ್ನೂ ಇಮೇಲ್-ಚಾಟ್-ಎಸ್ಸೆಮ್ಮೆಸ್ ಇತ್ಯಾದಿಗಳಲ್ಲಿ ಬಳಸಲಾಗುತ್ತದೆ.


ಕನ್ನಡದ ಪದಸಂಸ್ಕಾರಕ, ಅಂದರೆ ವರ್ಡ್ ಪ್ರಾಸೆಸರ್ ತಂತ್ರಾಂಶಗಳು ಬಂದಾಗ ಕಂಪ್ಯೂಟರ್ ಪ್ರಪಂಚದಲ್ಲಿ ಕನ್ನಡದ ಬಳಕೆಗೆ ಮೊದಲ ಪ್ರೋತ್ಸಾಹ ದೊರಕಿತು. ಈ ತಂತ್ರಾಂಶಗಳಿಂದಾಗಿ ಕಂಪ್ಯೂಟರಿನಲ್ಲಿ ಕನ್ನಡ ಅಕ್ಷರಗಳನ್ನು ಮೂಡಿಸುವುದು, ಕಂಪ್ಯೂಟರ್ ಸಹಾಯದಿಂದ ಅವನ್ನು ಮುದ್ರಿಸಿಕೊಳ್ಳುವುದು ಸಾಧ್ಯವಾಯಿತು. ಇಂತಹ ಪದಸಂಸ್ಕಾರಕ ತಂತ್ರಾಂಶಗಳ ಪೈಕಿ ಕೆಲವಕ್ಕೆ ದುಡ್ಡುಕೊಡಬೇಕಿದ್ದರೆ ಶ್ರೀ ಕೆ. ಪಿ. ರಾವ್ ರೂಪಿಸಿದ 'ಸೇಡಿಯಾಪು'ನಂತಹ ತಂತ್ರಾಂಶಗಳನ್ನು ದಶಕಗಳ ಹಿಂದೆಯೇ ಉಚಿತ ಬಳಕೆಗೆ ನೀಡಲಾಗಿತ್ತು. ಸರಕಾರ ಹಾಗೂ ಖಾಸಗಿ ಸಂಸ್ಥೆಗಳಷ್ಟೇ ಅಲ್ಲದೆ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಪರಿಣತರಾಗಿದ್ದ ಅನೇಕ ಉತ್ಸಾಹಿಗಳು ಕೂಡ

ಬಹಳ ಹಿಂದಿನಿಂದಲೇ ತಮ್ಮ ಸ್ವಂತ ಆಸಕ್ತಿಯಿಂದ ಕನ್ನಡದ ತಂತ್ರಾಂಶಗಳನ್ನು ರೂಪಿಸುವಲ್ಲಿ ತೊಡಗಿಸಿಕೊಂಡದ್ದು ಗಮನಾರ್ಹ ಸಂಗತಿ.

ಇಮೇಲ್ ಬಳಕೆ ವ್ಯಾಪಕವಾಗುತ್ತಿದ್ದಂತೆ ಈ ತಂತ್ರಾಂಶಗಳನ್ನು ಬಳಸಿ ಟೈಪುಮಾಡಿದ ಕಡತಗಳನ್ನು ಅಟ್ಯಾಚ್‌ಮೆಂಟ್ ರೂಪದಲ್ಲಿ ಕಳುಹಿಸುವ ಅಭ್ಯಾಸ ಶುರುವಾಯಿತು. ಇದು ಕಂಗ್ಲಿಷ್ ಬಳಕೆಯ ನಂತರದ ಅತ್ಯಂತ ಪ್ರಮುಖ ಹೆಜ್ಜೆ ಎಂದೇ ಹೇಳಬೇಕು.

ಈ ನಡುವೆ ತೊಂಬತ್ತರ ದಶಕದಲ್ಲೇ ಕನ್ನಡದ ವೆಬ್ ಪುಟಗಳು ಕಾಣಿಸಿಕೊಂಡಿದ್ದವು. ಕನ್ನಡ ಪಠ್ಯವನ್ನು ಇಂಗ್ಲಿಷ್ ಲಿಪಿಯಲ್ಲಿ ಮೂಡಿಸಿದ್ದ 'ಕನ್ನಡ ಸಾಹಿತ್ಯ ಪುಟ' ಕನ್ನಡದ ಮೊದಲ ವೆಬ್‌ಪುಟಗಳಲ್ಲೊಂದು. 1996ರಲ್ಲಿ ಕನ್ನಡದ ಮೊದಲ ವೆಬ್ ಪತ್ರಿಕೆ 'ವಿಶ್ವಕನ್ನಡ' ಪ್ರಾರಂಭವಾಯಿತು. ಸರಿಸುಮಾರು ಅದೇ ಸಮಯದಲ್ಲಿ 'ಸಂಜೆವಾಣಿ'ಯ ಜಾಲತಾಣವೂ ಶುರುವಾಯಿತು. ಮುಂದೆ, ಈ ಶತಮಾನದ ಪ್ರಾರಂಭದಲ್ಲಿ, ರೆಡಿಫ್‌ಮೇಲ್‌ನಂತಹ ಕೆಲ ತಾಣಗಳು ಕನ್ನಡದಲ್ಲೇ ಇಮೇಲ್ ಕಳುಹಿಸುವ ಸೌಲಭ್ಯವನ್ನೂ ಒದಗಿಸಿದವು. ಈ ಸೌಲಭ್ಯದ ನೆರವಿನಿಂದ ಬೇರೆ ಯಾವುದೇ ತಂತ್ರಾಂಶದ ನೆರವಿಲ್ಲದೆ ಕನ್ನಡದ ಸಂದೇಶಗಳನ್ನು ವಿನಿಮಯಮಾಡಿಕೊಳ್ಳುವುದು ಸಾಧ್ಯವಾಯಿತು.

ವಿಶ್ವವ್ಯಾಪಿ ಜಾಲ ಹಾಗೂ ಇಮೇಲ್ ಮಾಧ್ಯಮದಲ್ಲಿ ಕನ್ನಡದ ಬಳಕೆ ವ್ಯಾಪಕವಾಗಿ ಬೆಳೆಯುವಲ್ಲಿ ಬರಹ ಹಾಗೂ ನುಡಿ (ಹಿಂದಿನ ಹೆಸರು 'ಕಲಿತ') ತಂತ್ರಾಂಶಗಳು ಕೂಡ ಪ್ರಮುಖ ಪಾತ್ರ ವಹಿಸಿದವು. ಸಾಫ್ಟ್‌ವೇರ್ ತಜ್ಞ ಶೇಷಾದ್ರಿವಾಸು ಚಂದ್ರಶೇಖರನ್ 'ಬರಹ'ವನ್ನು ರೂಪಿಸಿದರೆ, ಕನ್ನಡ ಗಣಕ ಪರಿಷತ್ತು ಕರ್ನಾಟಕ ಸರಕಾರದ ಸಹಯೋಗದಲ್ಲಿ 'ನುಡಿ' ತಂತ್ರಾಂಶವನ್ನು ಪರಿಚಯಿಸಿತು (ಮೊದಲಿಗೆ ಇವೆರಡೂ ತಂತ್ರಾಂಶಗಳು ಬಳಕೆದಾರರಿಗೆ ಉಚಿತವಾಗಿಯೇ ದೊರಕಿದ್ದವಾದರೂ ಬರಹ ತಂತ್ರಾಂಶ ಬಳಸಲು ಇತ್ತೀಚೆಗೆ ಶುಲ್ಕ ನಿಗದಿಪಡಿಸಲಾಗಿದೆ; 'ನುಡಿ' ಈಗಲೂ ಉಚಿತವೇ). ಈ ನಡುವೆ ಬಹುತೇಕ ಎಲ್ಲ ಕಾರ್ಯಾಚರಣ ವ್ಯವಸ್ಥೆಗಳಲ್ಲೂ ನೇರವಾಗಿ ಕನ್ನಡ ಅಕ್ಷರಗಳನ್ನು ಮೂಡಿಸುವ ಸವಲತ್ತು ಲಭ್ಯವಾಯಿತು. ಹಲವಾರು ಪದಸಂಸ್ಕಾರಕ ತಂತ್ರಾಂಶಗಳು ಕೂಡ ಬಳಕೆಗೆ ಬಂದವು.



ಕೆ. ಪಿ. ರಾವ್ ರೂಪಿಸಿದ 'ಸೇಡಿಯಾಪು' ತಂತ್ರಾಂಶ

ಕನ್ನಡದ ಪ್ರಾರಂಭಿಕ ಜಾಲತಾಣಗಳ ಪೈಕಿ ಸಂಜೆವಾಣಿ ಜಾಲತಾಣದಲ್ಲಿ ಕನ್ನಡದ ಪಠ್ಯ ಚಿತ್ರರೂಪದಲ್ಲಿತ್ತು. ಕನ್ನಡದ ಮೊದಲ ಬ್ಲಾಗುಗಳಲ್ಲೊಂದು ಎಂದು ಪರಿಗಣಿಸಬಹುದಾದ ಕಾಮತ್ ಡಾಟ್ ಕಾಮ್‌ನಲ್ಲೂ ಮೊದಲಿಗೆ ಕನ್ನಡ ಪಠ್ಯ

ಚಿತ್ರರೂಪದಲ್ಲೇ ಮೂಡಿಬಂತು. ಇನ್ನು 'ವಿಶ್ವಕನ್ನಡ'ದಂತಹ ತಾಣಗಳು, ಕನ್ನಡದಲ್ಲಿ ಸಂದೇಶ ವಿನಿಮಯ ಮಾಡಿಕೊಳ್ಳಲು ನೆರವಾಗುತ್ತಿದ್ದ ಇಮೇಲ್ ಸೇವೆಗಳು ಕನ್ನಡ ಫಾಂಟನ್ನೇ ಬಳಸುತ್ತಿದ್ದವಾದರೂ ಅಲ್ಲೂ ಒಂದು ಸಮಸ್ಯೆಯಿತ್ತು. ಆಯಾ ತಾಣಗಳು ಬಳಸುತ್ತಿದ್ದ ನಿರ್ದಿಷ್ಟ ಫಾಂಟನ್ನು ನಮ್ಮ ಕಂಪ್ಯೂಟರಿನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳದೆ ಕನ್ನಡದ ಪಠ್ಯ ಓದುವುದು ಆಗ ಸಾಧ್ಯವಾಗುತ್ತಿರಲಿಲ್ಲ. ಇಮೇಲ್‌ನಲ್ಲೂ ಅಷ್ಟೆ; ಯಾವುದೇ ಕನ್ನಡ ತಂತ್ರಾಂಶ ಬಳಸಿ ನೀವೊಂದು ಕಡತ ತಯಾರಿಸಿದ್ದರೆ ನಿಮ್ಮ ಸಂದೇಶ ಓದುವವರಲ್ಲೂ ಆ ತಂತ್ರಾಂಶ, ಅಥವಾ ಕನಿಷ್ಠಪಕ್ಷ ಅದರ ಫಾಂಟುಗಳಾದರೂ ಇರಬೇಕಿದ್ದು ಅನಿವಾರ್ಯವಾಗಿತ್ತು. ಸರಿಯಾದ ಫಾಂಟುಗಳಿಲ್ಲದ ಕಂಪ್ಯೂಟರಿನಲ್ಲಿ ಕನ್ನಡ ತಾಣಗಳಲ್ಲಿದ್ದ ಪಠ್ಯವೆಲ್ಲ ಇಂಗ್ಲಿಷ್ ಅಕ್ಷರಗಳ ಅಸಂಬದ್ಧ ಜೋಡಣೆಯಂತೆಯೇ ಕಾಣುತ್ತಿದ್ದವು.

ಈ ಸಮಸ್ಯೆ ನಿವಾರಿಸಲು ಅನೇಕ ಪ್ರಯತ್ನಗಳು ನಡೆದವು. ಈ ನಿಟ್ಟಿನಲ್ಲಿ ಗಮನಾರ್ಹ ಪ್ರಯತ್ನ ನಡೆಸಿದ್ದು ಡಾ। ಯು. ಬಿ. ಪವನಜರ 'ವಿಶ್ವಕನ್ನಡ' ತಾಣ. ಈ ತಾಣ ಮೊತ್ತಮೊದಲ ಬಾರಿಗೆ ಕನ್ನಡದ ಡೈನಮಿಕ್ ಫಾಂಟುಗಳನ್ನು ಬಳಸಿತು. ಆ ಮೂಲಕ ತಾಣದಲ್ಲಿದ್ದ ಕನ್ನಡದ ಮಾಹಿತಿಯನ್ನು ಯಾವುದೇ ಫಾಂಟ್ ಇನ್‌ಸ್ಟಾಲ್ ಮಾಡಿಕೊಳ್ಳದೆಯೇ ನಮ್ಮ ಕಂಪ್ಯೂಟರಿನಲ್ಲಿ ವೀಕ್ಷಿಸುವುದು ಸಾಧ್ಯವಾಯಿತು. ಆದರೆ ನಿರ್ದಿಷ್ಟ ಫಾಂಟ್ ಅವಲಂಬನೆ ಅಲ್ಲೂ ಮುಂದುವರೆದಿತ್ತು; ಸರ್ಚ್ ಇಂಜಿನ್ ಮೂಲಕ ಕನ್ನಡದ ಮಾಹಿತಿಯನ್ನು ಸುಲಭವಾಗಿ ಹುಡುಕಲು ಆಗುತ್ತಿರಲಿಲ್ಲ.

ಈ ಪರಿಸ್ಥಿತಿ ಬದಲಾದದ್ದು ಯುನಿಕೋಡ್ ಸಂಕೇತ ವಿಧಾನ ಬಳಕೆಗೆ ಬಂದಾಗ. ಇಮೇಲ್ ಕಳುಹಿಸುವುದು, ಜಾಲತಾಣಗಳಿಗೆ–ಬ್ಲಾಗುಗಳಿಗೆ ಮಾಹಿತಿ ಸೇರಿಸುವುದು, ಅವನ್ನು ಓದುವುದು, ಕನ್ನಡದ ಮಾಹಿತಿಯನ್ನು ಸರ್ಚ್ ಇಂಜನ್‌ಗಳಲ್ಲಿ ಕನ್ನಡದಲ್ಲೇ ಹುಡುಕುವುದು – ಇದೆಲ್ಲವನ್ನೂ ನಿರ್ದಿಷ್ಟ ತಂತ್ರಾಂಶದ ಮೇಲೆ ಅವಲಂಬಿತರಾಗದೆ ಮಾಡಲು ಸಾಧ್ಯವಾಗಿಸಿದ್ದು ಯುನಿಕೋಡ್‌ನ ವೈಶಿಷ್ಟ್ಯ.

ಈಚಿನ ವರ್ಷಗಳಲ್ಲಿ ಯುನಿಕೋಡ್ ಬಳಕೆ ವ್ಯಾಪಕವಾಗುತ್ತಿದ್ದಂತೆ ವಿಶ್ವವ್ಯಾಪಿ ಜಾಲದಲ್ಲಿ ಕನ್ನಡದ ಸಾಧ್ಯತೆಗಳೂ ಹೆಚ್ಚುತ್ತಲೇ ಇವೆ. ಸಾವಿರಾರು ಸಂಖ್ಯೆಯ ಬ್ಲಾಗ್ ಹಾಗೂ ಜಾಲತಾಣಗಳ ಮೂಲಕ ಜಾಲಲೋಕದ ಉದ್ದಗಲಕ್ಕೂ ಕನ್ನಡದ ಕಂಪು ಪಸರಿಸುತ್ತಿದೆ. ಅಷ್ಟೇ ಅಲ್ಲ, ಗೂಗಲ್ ಟ್ರಾನ್ಸ್‌ಲಿಟರೇಟ್ ಹಾಗೂ ಕನ್ನಡ ಅಕ್ಷರಗಳನ್ನು ಮೂಡಿಸುವ ಅಂತಹವೇ ಇನ್ನೂ ಕೆಲ ಆನ್‌ಲೈನ್ ಸವಲತ್ತುಗಳ ನೆರವಿನಿಂದ ಯಾವುದೇ ಪ್ರತ್ಯೇಕ ತಂತ್ರಾಂಶದ ಸಹಾಯವಿಲ್ಲದೆ ವಿಶ್ವವ್ಯಾಪಿ ಜಾಲದಲ್ಲೇ ನೇರವಾಗಿ ಕನ್ನಡ ಅಕ್ಷರಗಳನ್ನು ಮೂಡಿಸಬಹುದು. ಅಷ್ಟೇ ಏಕೆ, ಹತ್ತಾರು ವಿಶ್ವವಿಖ್ಯಾತ ತಾಣಗಳು ಈಗ ಕನ್ನಡದಲ್ಲೂ ದೊರಕುತ್ತಿವೆ. ಒಟ್ಟಿನಲ್ಲಿ, ಇಂಗ್ಲಿಷ್ ಅಥವಾ ಬೇರಾವುದೋ ಭಾಷೆಯ ಮೂಲಕ ಜಾಲಲೋಕದಲ್ಲಿ ಏನೇನು ಸಾಧ್ಯವೋ ಅದರಲ್ಲಿ ಬಹುಪಾಲು ಈಗ ಕನ್ನಡದಲ್ಲೂ ಸಾಧ್ಯವಾಗಿದೆ ಎನ್ನಬಹುದು.

ಬ್ರೌಸರ್‌ಗಳಲ್ಲಿ ಕನ್ನಡ

ವಿಶ್ವವ್ಯಾಪಿ ಜಾಲವನ್ನು ನಾವೆಲ್ಲ ಬಳಸುತ್ತೇವಾದರೂ ಬಳಕೆಯ ಉದ್ದೇಶ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಲೇ ಇರುತ್ತದೆ. ಶಾಲೆಯ ವಿದ್ಯಾರ್ಥಿಗೆ ವೆಬ್ ವಿಹಾರವೆಂದರೆ ಆಟವಾಡುವ ಅಥವಾ ಹೋಮ್‌ವರ್ಕ್‌ಗೆ ಬೇಕಾದ ಮಾಹಿತಿ ಹುಡುಕುವ ಮಾರ್ಗ; ಅದೇ ವೃತ್ತಿಪರನೊಬ್ಬನಿಗೆ ವಿಶ್ವವ್ಯಾಪಿ ಜಾಲವೆಂದರೆ ಕಚೇರಿಯ ಕೆಲಸಕ್ಕೆ ಮನೆಯಿಂದಲೇ ಕಿಟಕಿ ತೆರೆದುಕೊಡುವ ಕೊಂಡಿಯಿದ್ದಂತೆ.

ಇವರೆಲ್ಲ ವಿಶ್ವವ್ಯಾಪಿ ಜಾಲವನ್ನು ಸಂಪರ್ಕಿಸುವ ವಿಧಾನ ಕೂಡ ವಿಭಿನ್ನವೇ. ಒಬ್ಬರು ತಮ್ಮ ಮೊಬೈಲಿನ ಥ್ರೀಜಿ ಸಂಪರ್ಕ ಬಳಸಿದರೆ, ಇನ್ನೊಬ್ಬರ ಮನೆಯಲ್ಲಿ ಬ್ರಾಡ್‌ಬ್ಯಾಂಡ್, ವೈ-ಫಿ ಇತ್ಯಾದಿಗಳೆಲ್ಲ ಇರುತ್ತದೆ. ಇನ್ನು ಕೆಲವೆಡೆ ಹಳೆಯಕಾಲದ ಡಯಲ್ ಅಪ್ ಸಂಪರ್ಕವೂ ಬಳಕೆಯಾಗುತ್ತಿರುತ್ತದೆ.

ಇಷ್ಟೆಲ್ಲ ವೈವಿಧ್ಯಗಳ ನಡುವೆ ವಿಶ್ವವ್ಯಾಪಿ ಜಾಲದ ಎಲ್ಲ ಬಳಕೆದಾರರೂ ಕಡ್ಡಾಯವಾಗಿ ಉಪಯೋಗಿಸುವ ಅಂಶವೊಂದಿದೆ. ಅದೇ ಬ್ರೌಸರ್‌ಗಳ ಬಳಕೆ.

ವಿಶ್ವವ್ಯಾಪಿ ಜಾಲದಲ್ಲಿರುವ ತಾಣಗಳನ್ನು ತಮ್ಮ ಕಂಪ್ಯೂಟರಿನಲ್ಲಿ ವೀಕ್ಷಿಸಲು ಬಳಕೆದಾರರಿಗೆ ಅನುವುಮಾಡಿಕೊಡುವುದು ಈ ತಂತ್ರಾಂಶದ ಕೆಲಸ. ಹಾಗಾಗಿಯೇ ಬಳಸುತ್ತಿರುವ ಕಂಪ್ಯೂಟರ್, ಸಂಪರ್ಕದ ವಿಧಾನ, ಬಳಕೆಯ ಉದ್ದೇಶ ಇವೆಲ್ಲ ಏನೇ ಆದರೂ ವಿಶ್ವವ್ಯಾಪಿಜಾಲದ ಬಳಕೆದಾರರೆಲ್ಲರೂ ಬ್ರೌಸರ್ ತಂತ್ರಾಂಶವನ್ನು ಬಳಸಲೇಬೇಕು. ಲ್ಯಾಪ್‌ಟಾಪ್-ಡೆಸ್ಕ್‌ಟಾಪ್‌ಗಳಿಗಷ್ಟೆ ಅಲ್ಲ, ಟ್ಯಾಬ್ಲೆಟ್ಟು-ಮೊಬೈಲುಗಳಲ್ಲೂ ಬ್ರೌಸರ್ ತಂತ್ರಾಂಶ ಬೇಕು. ಕ್ಲೌಡ್ ಕಂಪ್ಯೂಟಿಂಗ್ ವಿಷಯಕ್ಕೆ ಬಂದರಂತೂ ಅದೆಷ್ಟೋ ಕೆಲಸಗಳಿಗೆ ಬ್ರೌಸರ್ ತಂತ್ರಾಂಶವೇ ಜೀವಾಳ.

ಈ ತಂತ್ರಾಂಶಗಳಲ್ಲಿ ಹಲವು ಬಗೆ. ಮೊದಲ ಬ್ರೌಸರ್ 'ಮೊಸಾಯಿಕ್'ನಿಂದ ಪ್ರಾರಂಭಿಸಿ ಇಂದಿನವರೆಗೆ ಅನೇಕ ಬ್ರೌಸರ್ ತಂತ್ರಾಂಶಗಳು ಬಂದುಹೋಗಿವೆ. ಈಗ ಪ್ರಚಲಿತದಲ್ಲಿರುವ ಬ್ರೌಸರ್‌ಗಳಲ್ಲಿ ಗೂಗಲ್ ಕ್ರೋಮ್, ಮೊಜಿಲ್ಲಾ ಫೈರ್‌ಫಾಕ್ಸ್, ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಮೊದಲಾದವು ಮುಖ್ಯವಾದವು. ಮೊಬೈಲ್ ಉಪಕರಣಗಳಿಗಾಗಿಯೇ ಇರುವ ವಿಶೇಷ ಬ್ರೌಸರುಗಳೂ ಇವೆ.

ನಾವು ನೋಡುತ್ತಿರುವ ಜಾಲತಾಣ ಕನ್ನಡದ್ದಾಗಿರಲಿ, ಇಂಗ್ಲಿಷಿನದ್ದಾಗಿರಲಿ ಅಥವಾ ರಷ್ಯನ್ ಭಾಷೆಯದೇ ಇರಲಿ – ತಾಂತ್ರಿಕ ಹೊಂದಾಣಿಕೆಗಳೆಲ್ಲ ಸರಿಯಾಗಿದ್ದ ಪಕ್ಷದಲ್ಲಿ ಅಲ್ಲಿರುವ ಮಾಹಿತಿಯನ್ನು ನಮ್ಮೆದುರು ಪ್ರದರ್ಶಿಸುವುದು ಬ್ರೌಸರ್‌ನ ಕೆಲಸ. ಹೀಗೆ ವಿಶ್ವವ್ಯಾಪಿ ಜಾಲದಲ್ಲಿರುವ ಮಾಹಿತಿಯನ್ನು ನೋಡುವುದು ಮಾತ್ರವಲ್ಲ; ಆ ಮಾಹಿತಿಯನ್ನು ಉಳಿಸಿಕೊಳ್ಳುವುದು, ಮುದ್ರಿಸಿಕೊಳ್ಳುವುದು, ವಿವಿಧ ಪುಟಗಳ ನಡುವೆ ಹಿಂದೆಮುಂದೆ ಓಡಾಡುವುದು, ಅಚ್ಚುಮೆಚ್ಚಿನ ಪುಟಗಳ ವಿಳಾಸ ಸಂಗ್ರಹಿಸಿಟ್ಟುಕೊಳ್ಳುವುದು ಮುಂತಾದ ಇನ್ನಿತರ ಸೌಲಭ್ಯಗಳೂ ಬ್ರೌಸರ್ ತಂತ್ರಾಂಶದಲ್ಲಿರುತ್ತವೆ.

ಯಾವ ಭಾಷೆಯ ಯಾವ ರೂಪದ ಮಾಹಿತಿಯನ್ನಾದರೂ ಬ್ರೌಸರಿನಲ್ಲಿ ನೋಡಬಹುದು ಎನ್ನುವುದೇನೋ ಸರಿ, ಆದರೆ ಬ್ರೌಸರಿನಲ್ಲಿ ಇಂತಹ ಹಲವಾರು ಸೌಲಭ್ಯಗಳಿರುತ್ತವಲ್ಲ, ಅದಕ್ಕೆ ಸಂಬಂಧಿಸಿದ ಆಯ್ಕೆಗಳೆಲ್ಲ (ಮೆನು) ಯಾವ ಭಾಷೆಯಲ್ಲಿರುತ್ತದೆ?

ಈ ಪ್ರಶ್ನೆಗೆ 'ಇಂಗ್ಲಿಷ್' ಎಂದೇ ಉತ್ತರಿಸಬೇಕಾದ ಅನಿವಾರ್ಯತೆ ಈಚಿನ ಕೆಲ ವರ್ಷಗಳವರೆಗೂ ಇತ್ತು. ಆದರೆ ಈಗ ಪರಿಸ್ಥಿತಿ ಹಾಗಿಲ್ಲ ಎನ್ನುವುದು ಖುಷಿಯ ಸಂಗತಿ.

ನಿಜ, ಇಂದು ಹಲವಾರು ಪ್ರಮುಖ ಬ್ರೌಸರುಗಳ ಕನ್ನಡ ಆವೃತ್ತಿ ನಮಗೆ ಲಭ್ಯ. ಹೀಗಾಗಿ ಕ್ರೋಮ್, ಫೈರ್‌ಫಾಕ್ಸ್, ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಮುಂತಾದ ಪ್ರಮುಖ ಬ್ರೌಸರುಗಳಲ್ಲಿರುವ ಆಯ್ಕೆಗಳನ್ನೆಲ್ಲ ನಾವು ಕನ್ನಡದಲ್ಲಿ ನೋಡಬಹುದು, ಬಳಸಬಹುದು. ವಿಶ್ವವ್ಯಾಪಿ ಜಾಲದಲ್ಲಿ ಕನ್ನಡದ ಮಾಹಿತಿ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತಿರುವಾಗ ಅದನ್ನು ಪಡೆದುಕೊಳ್ಳುವ ಪ್ರಕ್ರಿಯೆಯೂ ಕನ್ನಡದಲ್ಲೇ ಆಗುವುದು ಇಂಗ್ಲಿಷ್ ಅವಲಂಬನೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯೆಂದೇ ಹೇಳಬಹುದು.

ಮೊಜಿಲ್ಲಾ ಫೈರ್‌ಫಾಕ್ಸ್ ವಿಷಯಕ್ಕೆ ಬಂದರೆ ಬ್ರೌಸರ್ ತಂತ್ರಾಂಶವನ್ನು ಡೌನ್‌ಲೋಡ್ ಮಾಡುವಾಗಲೇ ನಾವು ಕನ್ನಡ ಆವೃತ್ತಿಯನ್ನು ಆರಿಸಿಕೊಳ್ಳಬೇಕಾಗುತ್ತದೆ. ಆದರೆ ಗೂಗಲ್ ಕ್ರೋಮ್ ಬಳಕೆದಾರರು ತಮ್ಮ ಇಷ್ಟದ ಭಾಷೆ ಆರಿಸಿಕೊಳ್ಳಲು ಸೆಟಿಂಗ್ಸ್ ಮೆನುಗೆ ಹೋದರೆ ಸಾಕು. ಅಲ್ಲಿರುವ ಅಡ್ವಾನ್ಸ್‌ಡ್ ಆಯ್ಕೆಗಳನ್ನು ಬಳಸಿಕೊಂಡು ನಾವು ಕ್ರೋಮ್ ತಂತ್ರಾಂಶವನ್ನು ಯಾವ ಭಾಷೆಯಲ್ಲಿ ನೋಡಲು ಇಷ್ಟಪಡುತ್ತೇವೆ ಎನ್ನುವುದನ್ನು ಸೂಚಿಸಬಹುದು.

ಕನ್ನಡದ ಅನುಭವ ನೀಡುವಲ್ಲಿ ಇಂಟರ್‌ನೆಟ್ ಎಕ್ಸ್‌ಪ್ಲೋರರ್ ಕೂಡ ಹಿಂದೆಬಿದ್ದಿಲ್ಲ. ಈ ತಂತ್ರಾಂಶಕ್ಕಾಗಿ ಮೈಕ್ರೋಸಾಫ್ಟ್ ಜಾಲತಾಣದಲ್ಲಿ ಸಿಗುವ ಲ್ಯಾಂಗ್ವೇಜ್ ಪ್ಯಾಕ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ನಾವು ಅದನ್ನು ಕನ್ನಡದಲ್ಲಿ ಬಳಸುವುದು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ನಾವು ವಿಶ್ವವ್ಯಾಪಿ ಜಾಲವನ್ನು ಜಾಲಾಡಲು ಕಾರಣ ಏನೇ ಆದರೂ ಆ ಸಂದರ್ಭದಲ್ಲಿ ಕನ್ನಡದ ಬ್ರೌಸರ್ ತಂತ್ರಾಂಶ ಬಳಸುವುದು ಒಂದು ವಿಭಿನ್ನ ಅನುಭವ ಕಟ್ಟಿಕೊಡುತ್ತದೆ. ಅಷ್ಟೇ ಅಲ್ಲ, ಇಂತಹ ಸಣ್ಣಸಣ್ಣ ಹೆಜ್ಜೆಗಳು ಕೂಡ ತಂತ್ರಜ್ಞಾನ ಲೋಕದಲ್ಲಿ ಕನ್ನಡವನ್ನು ಮುನ್ನಡೆಸುವಲ್ಲೂ ಸಹಕಾರಿಯಾಗುತ್ತವೆ!

ಕೆಲವು ಕನ್ನಡ ತಾಣಗಳು

ಈ ಶತಮಾನದ ಪ್ರಾರಂಭದಿಂದ ಈಚೆಗೆ ಜಾಲಲೋಕದಲ್ಲಿ ಕನ್ನಡ ಬೆಳೆದ ರೀತಿ ಗಮನಾರ್ಹವಾದದ್ದು. 'ಜಾಲದಲ್ಲಿ ಕನ್ನಡವೆಂದರೆ ಅದೊಂದು ಪ್ರಾಯೋಗಿಕ ಪ್ರಯತ್ನವಷ್ಟೆ' ಎನ್ನುವಂತಿದ್ದ ಕಾಲವನ್ನು ದಾಟಿ ಬಹಳ ಮುಂದೆ ಬಂದಿರುವ

ನಾವು ಇದೀಗ ಹಲವಾರು ಬಗೆಯ ಕನ್ನಡ ಜಾಲತಾಣಗಳನ್ನು ನೋಡಬಹುದು. ಸಂಘಸಂಸ್ಥೆಗಳ ತಾಣಗಳಷ್ಟೇ ಅಲ್ಲದೆ ಪ್ರಚಲಿತ ವಿದ್ಯಮಾನ, ಸಾಹಿತ್ಯ, ವಿಜ್ಞಾನ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ತಾಣಗಳನ್ನು ಇಂದು ಸಕ್ರಿಯವಾಗಿವೆ. ಈ ಸಾಲಿನಲ್ಲಿ ದಟ್ಸ್‌ಕನ್ನಡದಂತಹ ಪೋರ್ಟಲ್‌ಗಳು, ಅವಧಿ–ಕೆಂಡಸಂಪಿಗೆಯಂತಹ ಆನ್‌ಲೈನ್ ಪತ್ರಿಕೆಗಳು, ಇಜ್ಞಾನ ಡಾಟ್ ಕಾಮ್‌ನಂತಹ ವಿಜ್ಞಾನ ತಾಣಗಳು, ಚುಕ್ಕುಬುಕ್ಕು–ಸಿರಿನುಡಿ ಮುಂತಾದ ವಿಶಿಷ್ಟ ತಾಣಗಳು, ವಿವಿಧ ಪತ್ರಿಕೆಗಳ ಆನ್‌ಲೈನ್ ಆವೃತ್ತಿಗಳು – ಹೀಗೆ ಅನೇಕ ಕನ್ನಡ ತಾಣಗಳನ್ನು ನಾವು ಪಟ್ಟಿಮಾಡಬಹುದು.

ವಿಶ್ವವ್ಯಾಪಿ ಜಾಲದಲ್ಲಿ ಕನ್ನಡದ ಬಳಕೆ ಬಹುತೇಕ ಯುನಿಕೋಡ್ ಮೂಲಕವೇ ಆಗುತ್ತಿರುವುದು ಸರಿಯಷ್ಟೆ. ಕನ್ನಡದ ಪಠ್ಯವನ್ನು ಯುನಿಕೋಡ್‌ನಲ್ಲಿ ಮೂಡಿಸಲು ಬೇಕಾದ ಅನೇಕ ಸವಲತ್ತುಗಳು ವಿಶ್ವವ್ಯಾಪಿ ಜಾಲದಲ್ಲಿ ಲಭ್ಯವಿವೆ – ಗೂಗಲ್ ಟ್ರಾನ್ಸ್‌ಲಿಟರೇಟ್, ಕ್ವಿಲ್‌ಪ್ಯಾಡ್, ಕನ್ನಡ ಸ್ಲೇಟ್ ಮುಂತಾದವು ಈ ಬಗೆಯ ತಾಣಗಳಿಗೆ ಕೆಲ ಉದಾಹರಣೆಗಳು. ಇಲ್ಲಿ ಇಂಗ್ಲಿಷ್‌ನಲ್ಲಿ ಬರೆದದ್ದು ತನ್ನಷ್ಟಕ್ಕೆ ತಾನೇ ಕನ್ನಡ ಲಿಪಿಯಲ್ಲಿ ಮೂಡಿಬರುತ್ತದೆ. ನಿಮ್ಮಲ್ಲಿ ಯಾವುದೇ ಕನ್ನಡ ತಂತ್ರಾಂಶ ಇಲ್ಲದಿದ್ದರೂ ಚಿಂತೆಯಿಲ್ಲ, ಇಲ್ಲಿ ಟೈಪಿಸಿದ ಕನ್ನಡ ಪಠ್ಯವನ್ನು ಬೇಕಾದ ಕಡೆಗೆ ಸುಲಭವಾಗಿ ಕಾಪಿ–ಪೇಸ್ಟ್ ಮಾಡಿಕೊಳ್ಳಬಹುದು. ಜಿಮೇಲ್, ವಿಕಿಪೀಡಿಯಾ ಸೇರಿದಂತೆ ಹಲವು ತಾಣಗಳಲ್ಲಿ ನೇರವಾಗಿ ಕನ್ನಡದಲ್ಲೇ ಬೆರಳಚ್ಚಿಸುವುದು ಸಾಧ್ಯವಿರುವುದರಿಂದ ನಾವು ಬಾಹ್ಯ ತಂತ್ರಾಂಶಗಳನ್ನು ಅವಲಂಬಿಸಬೇಕಾದ ಅಗತ್ಯವೂ ನಿಧಾನಕ್ಕೆ ಕಡಿಮೆಯಾಗುತ್ತಿದೆ ಎನ್ನಬಹುದು.

ವಿಶ್ವವ್ಯಾಪಿ ಜಾಲದಲ್ಲಿ ಕನ್ನಡದ ವಿಶ್ವಕೋಶಗಳೂ ಇವೆ. ಇವುಗಳಲ್ಲಿ ಮುಖ್ಯವಾದದ್ದು ವಿಕಿಪೀಡಿಯಾ. ಇಂಗ್ಲಿಷಿನ ವಿಕಿಪೀಡಿಯಾದಂತೆಯೇ ಕನ್ನಡ ತಾಣ ಕೂಡ ಸಮುದಾಯ ಸಹಭಾಗಿತ್ವದಲ್ಲಿ ಮುಕ್ತ ಹಾಗೂ ಉಚಿತವಾಗಿ ದೊರಕುವ ಮಾಹಿತಿ ಭಂಡಾರವನ್ನು ಸಿದ್ಧಪಡಿಸುತ್ತಿದೆ. ಯಾರು ಬೇಕಾದರೂ ತಮ್ಮ ಆಸಕ್ತಿಯ ವಿಷಯಗಳ ಕುರಿತು ಮಾಹಿತಿ ಸೇರಿಸಲು ಅನುವುಮಾಡಿಕೊಡುವುದು ಈ ತಾಣದ ವೈಶಿಷ್ಟ್ಯ. ಉದ್ದೇಶಪೂರ್ವಕವಾಗಿಯೋ ಮಾಹಿತಿಯ ಕೊರತೆಯಿಂದಲೋ ತಪ್ಪು ವಿವರಗಳು ವಿಕಿಪೀಡಿಯಾದಲ್ಲಿ ಆಗಿಂದಾಗ್ಗೆ ಸೇರಿಕೊಳ್ಳುವುದಕ್ಕೂ ಇದೇ ಕಾರಣ. ಹೀಗಾಗಿಯೇ



ವಿಕಿಪೀಡಿಯಾ ಬಳಕೆದಾರರು ಸೇರಿಸಿದ ಮಾಹಿತಿಯನ್ನು ಬೇರೆಯವರು ಪರಿಶೀಲಿಸಿ ಅದರಲ್ಲಿ ತಪ್ಪಿರುವ ಅಂಶಗಳನ್ನು ಸರಿಪಡಿಸುವ ವ್ಯವಸ್ಥೆಯನ್ನೂ ರೂಪಿಸಲಾಗಿದೆ.

ಇನ್ನು ರಾಜ್ಯ ಸರಕಾರದ ಆಶ್ರಯದಲ್ಲಿ ರೂಪುಗೊಂಡಿರುವ 'ಕಣಜ' ಜ್ಞಾನಕೋಶ ಹೆಸರಾಂತ ಲೇಖಕರ ಕೃತಿಗಳು, ವಿಶ್ವವಿದ್ಯಾಲಯ ಹಾಗೂ ಅಕಾಡೆಮಿಗಳ ಪ್ರಕಟಣೆಗಳನ್ನು ವಿಶ್ವವ್ಯಾಪಿ ಜಾಲದ ಮೂಲಕ ಉಚಿತವಾಗಿ ದೊರಕುವಂತೆ ಮಾಡುತ್ತಿದೆ. ಪುಸ್ತಕಗಳು, ಲೇಖನಗಳು, ನಿಘಂಟುಗಳು ಸೇರಿದಂತೆ ಅಪಾರ ಪ್ರಮಾಣದ ಮಾಹಿತಿ ಈಗಾಗಲೇ ಈ ತಾಣದಲ್ಲಿದೆ.

ಬರಿಯ ವಿಶ್ವಕೋಶಗಳಷ್ಟೆ ಅಲ್ಲ, ಕನ್ನಡದ ಹಲವಾರು ನಿಘಂಟುಗಳೂ ವಿಶ್ವವ್ಯಾಪಿ ಜಾಲದಲ್ಲಿವೆ. ಹಿರಿಯ ವಿದ್ವಾಂಸರಾದ ಪ್ರೊ. ಜೀವಿಯವರು ರಚಿಸಿದ ನಿಘಂಟುಗಳು ಮೊದಲಿಗೆ ಬರಹ ತಂತ್ರಾಂಶದ ಜಾಲತಾಣದ ಮೂಲಕ ಮುಕ್ತವಾಗಿ ದೊರಕಿದವು. ಆ ನಿಘಂಟುಗಳ ಜೊತೆಗೆ ನವಕರ್ನಾಟಕದ ವಿಜ್ಞಾನ-ತಂತ್ರಜ್ಞಾನ ಪದಸಂಪದ, ಸಿಇಇ ವಿವರಣಾತ್ಮಕ ಪರಿಸರ ಅರ್ಥಕೋಶ, ಕನ್ನಡ ವಿವಿಯ ಕೃಷಿ ಪದಕೋಶ, ದಾಸಸಾಹಿತ್ಯ ಕೋಶ ಮುಂತಾದ ಅನೇಕ ನಿಘಂಟುಗಳು ಕಣಜ ಜಾಲತಾಣದಲ್ಲೂ ಇವೆ. ವಿಕಿಪೀಡಿಯಾ ಬಳಗದ 'ವಿಕ್ಷನರಿ', ಬರಹ ಡಾಟ್ ಕಾಮ್‌ನ 'ನಿಮ್ಮದೇ ನಿಘಂಟು' ಮುಂತಾದ ಕೆಲವೆಡೆ ನಿಘಂಟುಗಳನ್ನು ಬೆಳೆಸುವಲ್ಲಿ ನಾವೂ ನೆರವಾಗುವುದು ಸಾಧ್ಯವಿದೆ.

ಅಷ್ಟೇ ಅಲ್ಲ, ನಾವೆಲ್ಲ ವ್ಯಾಪಕವಾಗಿ ಬಳಸುವ ಹಲವು ವಿಶ್ವವಿಖ್ಯಾತ ತಾಣಗಳೂ ಕನ್ನಡದಲ್ಲಿ ದೊರಕುತ್ತವೆ. ಗೂಗಲ್, ಜಿಮೇಲ್, ಫೇಸ್‌ಬುಕ್ ಮುಂತಾದ ಬಹುತೇಕ ತಾಣಗಳ ಕನ್ನಡ ಆವೃತ್ತಿ ಈಗಾಗಲೇ ಇದೆ.

ಇಂತಹ ಹಲವು ತಾಣಗಳ ವಾತಾವರಣವನ್ನು ಕನ್ನಡಕ್ಕೆ ಹೊಂದಿಸಿಕೊಡುವ ಕೆಲಸ ಕ್ರೌಡ್‌ಸೋರ್ಸ್ ಆಗಿರುವುದು ವಿಶೇಷ; ಅಂದರೆ ಅನುವಾದದ ಕೆಲಸವನ್ನು ಕನ್ನಡದ ಸಮುದಾಯಕ್ಕೇ ವಹಿಸಿಕೊಡಲಾಗಿದೆ. ಕ್ರೌಡ್‌ಸೋರ್ಸಿಂಗ್ ಅಥವಾ ಗುಂಪುಗುತ್ತಿಗೆಯ ಆಧಾರದ ಮೇಲೆ ಸಿದ್ಧವಾಗಿರುವ, ಸಿದ್ಧವಾಗುತ್ತಿರುವ ಇನ್ನೂ ಅನೇಕ ಯೋಜನೆಗಳಿವೆ. ವಿಕಿಪೀಡಿಯಾ ವಿಶ್ವಕೋಶ, ವಿಕ್ಷನರಿ ನಿಘಂಟು - ಇವೆಲ್ಲ ಇಂತಹ ತಾಣಗಳಿಗೆ ಕೆಲ ಉದಾಹರಣೆಗಳಷ್ಟೆ.

ವಿಶ್ವವ್ಯಾಪಿ ಜಾಲದಲ್ಲಿ ಓಡಾಡುವಾಗ ನಮ್ಮ ಸುತ್ತ ಮಾಹಿತಿಯ ಮಹಾಪೂರವೇ ಇರುತ್ತದೆ. ಈ ಮಾಹಿತಿ ಇಂಗ್ಲಿಷಿನಲ್ಲೇ ಇರಬೇಕು ಎಂದೇನೂ ಇಲ್ಲ. ಫ್ರೆಂಚ್‌ನಲ್ಲೋ ಜರ್ಮನ್ ಭಾಷೆಯಲ್ಲೋ ಇರುವ ತಾಣದಲ್ಲೂ ನಮಗೆ ಬೇಕಾದ ಮಾಹಿತಿ ಇರಬಹುದು. ಹೀಗೆ ಬೇರಾವುದೋ ಭಾಷೆಯಲ್ಲಿ ಇರುವ ಮಾಹಿತಿಯನ್ನು ಆ ಕ್ಷಣದಲ್ಲೇ ನಮಗೆ ಅರ್ಥವಾಗುವ ಭಾಷೆಗೆ ಅನುವಾದಿಸಿಕೊಂಡು ಓದುವ ಸೌಲಭ್ಯ ಬಹಳ ದಿನಗಳಿಂದಲೇ ಇದೆ. ಇದು ಎಲ್ಲ ಸಂದರ್ಭಗಳಲ್ಲೂ ಶೇ.100ರಷ್ಟು ನಿಖರ ಅನುವಾದ ಕೊಡದಿದ್ದರೂ ಅರ್ಥವಾಗದ ಭಾಷೆಯ ಪಠ್ಯಕ್ಕಿಂತ ಹೆಚ್ಚು ಉಪಯುಕ್ತವಾಗಿರುತ್ತದೆ.

ಇಂತಹ ಸೌಲಭ್ಯವನ್ನು ಕನ್ನಡಕ್ಕೂ ಒದಗಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಇಂಗ್ಲಿಷ್‌ನಿಂದ ಕನ್ನಡಕ್ಕೆ, ಮತ್ತು ಕನ್ನಡದಿಂದ ಇಂಗ್ಲಿಷ್‌ಗೆ ಪಠ್ಯವನ್ನು ಅನುವಾದಿಸುವ ತಂತ್ರಾಂಶ ಸೇವೆಯನ್ನು 'ಗೂಗಲ್ ಟ್ರಾನ್ಸ್‌ಲೇಟ್' ಅಂಗವಾಗಿ ಗೂಗಲ್ ಸಂಸ್ಥೆ ಪರಿಚಯಿಸಿದೆ. ಸ್ಪರ್ಶಸಂವೇದಿ ಪರದೆಯಿರುವ (ಟಚ್ ಸ್ಕ್ರೀನ್) ಸಾಧನಗಳಲ್ಲಿ ನಾವು 'ಬರೆದ' ಕನ್ನಡ ಅಕ್ಷರ–ಪದ–ವಾಕ್ಯಗಳನ್ನು ಗುರುತಿಸಿ ಅದನ್ನು ಇಂಗ್ಲಿಷಿಗೆ ಅನುವಾದಿಸುವ ಸೌಲಭ್ಯವೂ ಈ ವ್ಯವಸ್ಥೆಯಲ್ಲಿದೆ.

ಕನ್ನಡದಲ್ಲಿ ಮಾಹಿತಿಯಿರುವ ತಾಣಗಳಷ್ಟೇ ಅಲ್ಲ, ಕಂಪ್ಯೂಟರ್ ಪರದೆಯಲ್ಲಿ ಮೂಡಿಬರುವ ಪಠ್ಯವನ್ನು ಓದಿಹೇಳುವ ಟೆಕ್ಸ್ಟ್–ಟು–ಸ್ಪೀಚ್ ತಂತ್ರಾಂಶ ಕೂಡ ಇದೆ. ದೃಷ್ಟಿ ಸವಾಲು ಎದುರಿಸುತ್ತಿರುವ ವ್ಯಕ್ತಿಗಳು ಕಂಪ್ಯೂಟರ್ ಲೋಕದಲ್ಲಿರುವ ಕನ್ನಡದ ಮಾಹಿತಿಯನ್ನು ಆಲಿಸಲು ನೆರವಾಗುವ 'ಈ–ಸ್ಪೀಕ್' ಎಂಬ ಮುಕ್ತ ತಂತ್ರಾಂಶವನ್ನು ಶಿವಮೊಗ್ಗ ಜಿಲ್ಲೆಯ ಕೃಷಿಕ, ಸ್ವತಃ ದೃಷ್ಟಿ ಸವಾಲು ಎದುರಿಸುತ್ತಿರುವ ಶ್ರೀಧರ್ ಅವರು ಕನ್ನಡಕ್ಕೆ ತಂದಿದ್ದಾರೆ. ಈ ತಂತ್ರಾಂಶ ಕಣಜ ಜ್ಞಾನಕೋಶದ ಜಾಲತಾಣದಲ್ಲಿ ಎಲ್ಲರಿಗೂ ಲಭ್ಯವಿದೆ. ಇದೇ ರೀತಿಯಲ್ಲಿ ಕನ್ನಡದ ಮುದ್ರಿತ ಪಠ್ಯವನ್ನು ಗುರುತಿಸಿ ಕಂಪ್ಯೂಟರೀಕರಿಸುವ ಓಸಿಆರ್ ತಂತ್ರಾಂಶ ಕೂಡ ಎಲ್ಲರ ಬಳಕೆಗೂ ಸಿಗಬೇಕಿದೆ.

ಬ್ಲಾಗ್ ಲೋಕದಲ್ಲಿ ಕನ್ನಡ

ಬ್ಲಾಗುಗಳನ್ನು ನಾವೆಲ್ಲ ಅತ್ಯಂತ ಸುಲಭವಾಗಿ ಪಡೆದುಕೊಳ್ಳಬಹುದಾದ ಜಾಲತಾಣಗಳು ಎಂದು ಕರೆಯಬಹುದು.

ಬ್ಲಾಗ್ ಎಂಬ ಹೆಸರು ವೆಬ್ ಲಾಗ್ ಎಂಬುದರ ಅಪಭ್ರಂಶ. ಇವನ್ನು ಜಾಲತಾಣಗಳೆಂದು ಕರೆಯುವುದಕ್ಕಿಂತ ಆನ್‌ಲೈನ್ ದಿನಚರಿಗಳೆಂದು ಕರೆಯುವುದೇ ಸೂಕ್ತ. ನಾವು ಓದಿದ ಪುಸ್ತಕ, ಇಷ್ಟವಾದ ತಿಂಡಿ, ಇಷ್ಟವಾಗದ ಚಲನಚಿತ್ರಗಳಿಂದ ಪ್ರಾರಂಭಿಸಿ ನಮ್ಮ ಹವ್ಯಾಸಗಳು, ಬರವಣಿಗೆಗಳು, ಅಭಿಪ್ರಾಯಗಳು – ಹೀಗೆ ನಮ್ಮ ಮನಸ್ಸಿಗೆ ಬಂದ ಯಾವುದೇ ವಿಷಯವನ್ನು ಬ್ಲಾಗುಗಳ ಮೂಲಕ ಅತ್ಯಂತ ಸುಲಭವಾಗಿ ಇಡೀ ಜಗತ್ತಿನೊಡನೆ ಹಂಚಿಕೊಳ್ಳಬಹುದು.

ಹೊಸತೊಂದು ಬ್ಲಾಗನ್ನು ಸೃಷ್ಟಿಸಿಕೊಳ್ಳುವುದು ನಮಗೊಂದು ಇಮೇಲ್ ವಿಳಾಸ ಪಡೆದುಕೊಂಡಷ್ಟೇ ಸುಲಭ! ಬ್ಲಾಗರ್, ವರ್ಡ್‌ಪ್ರೆಸ್ ಮುಂತಾದ ಯಾವುದೇ ತಾಣಕ್ಕೆ ಹೋಗಿ ಅವರು ಕೇಳುವ ಒಂದಷ್ಟು ಮಾಹಿತಿ ಕೊಟ್ಟು ನೋಂದಾಯಿಸಿಕೊಂಡರೆ ಸಾಕು, ನಮ್ಮದೇ ಆದ ಬ್ಲಾಗು ಸಿದ್ಧವಾಗುತ್ತದೆ.

ನಾವು ನಮ್ಮ ಬ್ಲಾಗಿಗೆ ಮಾಹಿತಿ ಸೇರಿಸುತ್ತಿದ್ದಂತೆ ಅದನ್ನು ಎಲ್ಲರೂ ನೋಡುವುದು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ಓದುಗರಿಗೆ ಇಷ್ಟವಾದ, ಇಷ್ಟವಾಗದ ವಿಷಯಗಳ ಬಗ್ಗೆ ಅವರ ಪ್ರತಿಕ್ರಿಯೆ ದಾಖಲಿಸಲೂ ಬ್ಲಾಗ್‌ಗಳು ಅನುವುಮಾಡಿಕೊಡುತ್ತವೆ.

ಬ್ಲಾಗುಗಳು ಇಂದು ಅಭೂತಪೂರ್ವ ಯಶಸ್ಸು ಗಳಿಸಿಕೊಂಡಿರುವುದು ತಮ್ಮ ಈ

ಸರಳತೆಯಿಂದಾಗಿಯೇ. ಹೀಗಾಗಿಯೇ ಇಂದು ಕನ್ನಡವೂ ಸೇರಿದಂತೆ ಬಹುತೇಕ ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಬ್ಲಾಗುಗಳು ಜನಪ್ರಿಯವಾಗಿವೆ.

1990ರ ದಶಕದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾದ ಬ್ಲಾಗುಗಳು ಹೆಚ್ಚಿನ ಜನಪ್ರಿಯತೆ ಗಳಿಸಿಕೊಂಡದ್ದು ಈ ಶತಮಾನದ ಪ್ರಾರಂಭದಲ್ಲಿ. ಇದಾದ ಒಂದೆರಡು ವರ್ಷಗಳ ಅವಧಿಯಲ್ಲೇ ಕನ್ನಡದಲ್ಲೂ ಬ್ಲಾಗುಗಳು ನಿರ್ಮಾಣವಾದವು. ಕೃಷ್ಣಾನಂದ ಕಾಮತರ ಪುತ್ರ ಶ್ರೀ ವಿಕಾಸ ಕಾಮತರು 2003ರಲ್ಲೇ ತಮ್ಮ ಜಾಲತಾಣದಲ್ಲಿ ಕನ್ನಡ ಬ್ಲಾಗನ್ನು ಪ್ರಾರಂಭಿಸಿದ್ದರು. ಅಲ್ಲಿನ ಬರಹಗಳು ಚಿತ್ರರೂಪದಲ್ಲಿರುತ್ತಿದ್ದವು.

ಮುಂದೆ ಕನ್ನಡ ಯೂನಿಕೋಡ್ ಸೌಲಭ್ಯ ಲಭ್ಯವಾದಾಗ ಬ್ಲಾಗುಗಳ ಮೂಲಕ ಮಾಹಿತಿ ಸಂವಹನ ನಡೆಸುವುದು ಇನ್ನಷ್ಟು ಸುಲಭವಾಯಿತು. ಆ ವೇಳೆಗಾಗಲೇ ಪ್ರಸಿದ್ಧವಾಗಿದ್ದ ಬರಹ ಹಾಗೂ ನುಡಿ ತಂತ್ರಾಂಶಗಳು ಸುಲಭವಾಗಿ ಯುನಿಕೋಡ್ ಪಠ್ಯವನ್ನು ಬೆರಳಚ್ಚಿಸಲು ಅನುವುಮಾಡಿಕೊಟ್ಟಿದ್ದು ಕನ್ನಡದಲ್ಲಿ ಹೊಸಹೊಸ ಬ್ಲಾಗುಗಳು ತಯಾರಾಗಲು ಪರೋಕ್ಷ ಪ್ರೇರಣೆ ಒದಗಿಸಿತು.

ಡಾ. ಯು. ಬಿ. ಪವನಜ, ಹರಿಪ್ರಸಾದ್ ನಾಡಿಗ್, ಪಿ. ಎಂ. ಕೃಷ್ಣರಾಜ್, ಎಂ. ಎಸ್. ಶ್ರೀರಾಮ್, ಶೇಷಾದ್ರಿ, ಸತೀಶ್ ಕುಮಾರ್ ಮುಂತಾದ ಅನೇಕರು ಕನ್ನಡದಲ್ಲಿ ಬ್ಲಾಗಿಸಲು ಪ್ರಾರಂಭಿಸಿದರು. ಹರಿಪ್ರಸಾದ್ ನಾಡಿಗ್ 2005ರಲ್ಲಿ ಸಂಪದ ಎಂಬ ಸಮುದಾಯತಾಣವನ್ನು ಪ್ರಾರಂಭಿಸಿದ ಮೇಲೆ ಕನ್ನಡ ಬ್ಲಾಗುಗಳಿಗೊಂದು ಪ್ರಭಾವಶಾಲಿ ವೇದಿಕೆಯೂ ದೊರೆಯಿತು. ಕನ್ನಡಕ್ಕಾಗಿಯೇ ಇರುವ, ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಈ ತಾಣದಲ್ಲಿ ನೋಂದಾಯಿಸಿಕೊಂಡ ಯಾರು ಬೇಕಿದ್ದರೂ ಕನ್ನಡ ಬ್ಲಾಗುಗಳನ್ನು ಪ್ರಾರಂಭಿಸಬಹುದು.

ಈಗಂತೂ ಲೇಖಕರು, ಪತ್ರಕರ್ತರು, ಅಂಕಣಕಾರರು, ತಂತ್ರಜ್ಞರು, ಹವ್ಯಾಸಿ ಬರಹಗಾರರು, ವಿವಿಧ ವಿಷಯಗಳ ಪರಿಣತರು – ಹೀಗೆ ಅನೇಕರು ಬ್ಲಾಗ್ ಪ್ರಪಂಚದಲ್ಲಿ ಸಕ್ರಿಯರಾಗಿ ಕನ್ನಡದ ಬೆಳವಣಿಗೆಗಾಗಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಕನ್ನಡದ್ದೇ ಆದ ಸಾವಿರಾರು ಬ್ಲಾಗುಗಳು ಒಟ್ಟಾರೆಯಾಗಿ ಜಾಲಲೋಕದಲ್ಲಿ ಕನ್ನಡದ ಬೆಳವಣಿಗೆಗೆ ತಮ್ಮ ಕೊಡುಗೆ ನೀಡುತ್ತಿವೆ.


ಇಷ್ಟೆಲ್ಲ ಸಂಖ್ಯೆಯ ಬ್ಲಾಗುಗಳಿರುವಾಗ ಅವುಗಳಲ್ಲಿ ಪ್ರಕಟವಾಗುವ ಮಾಹಿತಿಯನ್ನೆಲ್ಲ ಓದುಗರಿಗೆ ಸುಲಭವಾಗಿ ತಲುಪಿಸುವ ಉದ್ದೇಶ ರಿಯಲಿ ಸಿಂಪಲ್ ಸಿಂಡಿಕೇಷನ್ (ಆರ್‌ಎಸ್‌ಎಸ್) ವ್ಯವಸ್ಥೆಯದು. ಈ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಕೆಲಸಮಾಡುತ್ತಿರುವ ಕನ್ನಡ ತಾಣಗಳಿಗೆ 'ಬರಹ ಕನ್ನಡಲೋಕ' ಒಂದು ಉದಾಹರಣೆ. ಆ ತಾಣದಲ್ಲಿ ನೋಂದಾಯಿಸಿಕೊಂಡಿರುವ ಕನ್ನಡದ ಬ್ಲಾಗುಗಳಲ್ಲಿ ಹೊಸದಾಗಿ ಏನೆಲ್ಲ ಲೇಖನಗಳು ಪ್ರಕಟವಾಗುತ್ತಿವೆ ಎನ್ನುವುದನ್ನು ನಾವು ಅಲ್ಲಿ ನೋಡಬಹುದು.

ಬ್ಲಾಗುಗಳಲ್ಲಿ ಪ್ರಕಟವಾಗುವ ಮಾಹಿತಿಯ ಕೊಂಡಿಯನ್ನು ಫೇಸ್‌ಬುಕ್ ಮೂಲಕ ಹಂಚಿಕೊಳ್ಳುವ ಅಭ್ಯಾಸವೂ ವ್ಯಾಪಕವಾಗಿದೆ. ವೈಯಕ್ತಿಕ ಪ್ರೊಫೈಲುಗಳಲ್ಲಷ್ಟೇ ಅಲ್ಲದೆ ಫೇಸ್‌ಬುಕ್‌ನಲ್ಲಿ ನಮ್ಮ ಬ್ಲಾಗಿಗೆಂದೇ ವಿಶೇಷ ಪುಟಗಳನ್ನು ರೂಪಿಸಿಕೊಳ್ಳುವ ಸಾಧ್ಯತೆಯೂ ಇದೆ. ನಮ್ಮ ಬ್ಲಾಗಿನಲ್ಲಿ ಪ್ರಕಟವಾದ ಮಾಹಿತಿಯ ಕೊಂಡಿ ನೇರವಾಗಿ ಫೇಸ್‌ಬುಕ್ ಪುಟದಲ್ಲೂ ಕಾಣಿಸಿಕೊಳ್ಳುವಂತೆ ಮಾಡುವ ಸೇವೆಗಳೂ ಲಭ್ಯವಿವೆ.

ಮೊಬೈಲ್ ಹಾಗೂ ಟ್ಯಾಬ್ಲೆಟ್‌ಗಳಲ್ಲಿ ಕನ್ನಡ

ಈಚಿನ ವರ್ಷಗಳಲ್ಲಿ ಸ್ಮಾರ್ಟ್‌ಫೋನುಗಳೆಲ್ಲ ಬಂದಮೇಲೆ ಕಂಪ್ಯೂಟರುಗಳಿಗೂ ಮೊಬೈಲ್ ಫೋನುಗಳಿಗೂ ನಡುವೆ ವ್ಯತ್ಯಾಸವೇ ಗೊತ್ತಾಗದ ಪರಿಸ್ಥಿತಿ ಹೇಗೂ ನಿರ್ಮಾಣವಾಗಿದೆ, ಅಷ್ಟೇ ಅಲ್ಲದೆ ಅಂದಾಜುಗಳ ಪ್ರಕಾರ ನಮ್ಮ ದೇಶದ ಜನಸಂಖ್ಯೆಯ ಅರ್ಧಕ್ಕೂ ಹೆಚ್ಚಿನ ಜನರು ಈಗಾಗಲೇ ಮೊಬೈಲ್ ಫೋನ್ ಬಳಸುತ್ತಾರಂತೆ. 2013ರ ಮಧ್ಯಭಾಗದಲ್ಲಿ ಪ್ರಕಟವಾದ ಇಂಟರ್‌ನ್ಯಾಷನಲ್ ಟೆಲಿಕಮ್ಯೂನಿಕೇಶನ್ ಯೂನಿಯನ್ ಅಧ್ಯಯನ ವರದಿಯ ಪ್ರಕಾರ ಈ ವರ್ಷ (2014) ಪ್ರಪಂಚದಲ್ಲಿರುವ ಮೊಬೈಲ್ ಸಂಪರ್ಕಗಳ ಸಂಖ್ಯೆ ಪ್ರಪಂಚದ ಜನಸಂಖ್ಯೆಯನ್ನೇ ಮೀರುವ ನಿರೀಕ್ಷೆಯಿದೆ. ಅಷ್ಟೇ ಅಲ್ಲ – ರಷ್ಯನ್ ಒಕ್ಕೂಟ, ಬ್ರೆಜಿಲ್ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿ ಈಗಾಗಲೇ ಸೃಷ್ಟಿಯಾಗಿಬಿಟ್ಟಿದೆ; ಇನ್ನೂ ಕೆಲ ರಾಷ್ಟ್ರಗಳು ಈ ಸಾಲನ್ನು ಸೇರುವ ಹಾದಿಯಲ್ಲಿವೆ!

ಆದರೆ ಮೊಬೈಲ್ ಪ್ರಪಂಚದಲ್ಲಿ ಕನ್ನಡದ ಕತೆ ಹೇಗಿದೆ ಎಂದು ನೋಡಲು ಹೊರಟರೆ ನಮಗೆ ಕಾಣಸಿಗುವ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿ ತೋರುವುದಿಲ್ಲ. ಬ್ಯಾಂಕಿಂಗ್ ವ್ಯವಹಾರದಿಂದ ಪ್ರಾರಂಭಿಸಿ ಸಿನಿಮಾ ಟಿಕೆಟ್ ಬುಕಿಂಗ್‌ವರೆಗೆ ಸಕಲವನ್ನೂ ಮೊಬೈಲ್ ಮೂಲಕವೇ ಮಾಡಿಕೊಳ್ಳುವ ಸನ್ನಿವೇಶವಿದ್ದರೂ ಕನ್ನಡದ ಮಟ್ಟಿಗೆ ಮಾತ್ರ 'ಕನ್ನಡ ಅಕ್ಷರ ಕಾಣುತ್ತಾ?' ಎಂದು ಕೇಳಿಕೊಂಡು ಮೊಬೈಲಿನ ಬ್ರೌಸರಿನಲ್ಲಿ ಕನ್ನಡ ಪಠ್ಯ ನೋಡಿಯೇ ಖುಷಿಪಡಬೇಕಾದ ಸ್ಥಿತಿ ಬಹುತೇಕ ಬಳಕೆದಾರರದು.



ಇತ್ತೀಚಿನ ಕೆಲ ಸಾಧನಗಳಲ್ಲಿ ಈ ಸಮಸ್ಯೆ ನಿಧಾನಕ್ಕೆ ದೂರವಾಗುತ್ತಿದೆ ಎನ್ನುವುದು ಖುಷಿಯ ವಿಷಯ. ಆಪಲ್ ಹಾಗೂ ಸ್ಯಾಮ್‌ಸಂಗ್ ಉತ್ಪನ್ನಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ. ಈ ಸಾಧನಗಳಲ್ಲಿ ಕನ್ನಡವನ್ನು ಓದುವುದಷ್ಟೆ ಅಲ್ಲ, ನಿರ್ದಿಷ್ಟ ಕೀಬೋರ್ಡ್ ತಂತ್ರಾಂಶಗಳನ್ನು ಬಳಸಿ ಕನ್ನಡ ಅಕ್ಷರಗಳನ್ನು ಮೂಡಿಸುವುದು ಕೂಡ ಸಾಧ್ಯ. ಅಷ್ಟೇ ಏಕೆ, ಸಂಪೂರ್ಣವಾಗಿ ಕನ್ನಡದ

ಮೆನುಗಳನ್ನೇ ಅಳವಡಿಸಿಕೊಂಡಿರುವ ಮೊಬೈಲ್ ಫೋನುಗಳೂ ಮಾರುಕಟ್ಟೆಯಲ್ಲಿವೆ.

ಫೋನಿನಲ್ಲಿ ಕನ್ನಡ ಅಕ್ಷರಗಳು ಮೂಡಿದ ಮೇಲೆ ಕನ್ನಡದ ಇನ್ನಿತರ ಆಪ್‌ಗಳು ಇಲ್ಲದಿದ್ದರೆ ಹೇಗೆ? ಆಟವಾಡುವುದರಿಂದ ಪ್ರಾರಂಭಿಸಿ ಕನ್ನಡದ ಸುದ್ದಿಗಳನ್ನು ಓದುವವರೆಗೆ ಹಲವು ಕೆಲಸಗಳನ್ನು ಸಾಧ್ಯವಾಗಿಸುವ ಆಪ್‌ಗಳು ಪ್ರಮುಖ ಆಪ್‌ಸ್ಟೋರ್‌ಗಳಲ್ಲಿ ಲಭ್ಯವಿವೆ.

ಹಾಗೆಂದ ಮಾತ್ರಕ್ಕೆ ಇತರ ಫೋನುಗಳಲ್ಲಿ ಕನ್ನಡ ಬರುವುದೇ ಇಲ್ಲ ಎಂದೇನೂ ಇಲ್ಲ. ಮೂಲತಃ ಕನ್ನಡ ಅಕ್ಷರಗಳನ್ನು ಬೆಂಬಲಿಸದ ಹಳೆಯ ಸಾಧನಗಳಲ್ಲೂ ಕನ್ನಡ ಪಠ್ಯ ಓದಲು ಇಲ್ಲೊಂದು ಮಾರ್ಗವಿದೆ: ಒಪೆರಾ ಮಿನಿ ಬ್ರೌಸರನ್ನು ನಿಮ್ಮ ಮೊಬೈಲ್ ಸಾಧನದಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳಿ. ನಂತರ ಅದರ ಅಡ್ರೆಸ್ ಬಾರ್‌ನಲ್ಲಿ 'about:config' ಎಂದು ಟೈಪಿಸಿ. ಆಗ ತೆರೆದುಕೊಳ್ಳುವ ಪುಟದ ಕೊನೆಯವರೆಗೂ ಹೋಗಿ 'Use bitmap fonts for complex script' ಆಯ್ಕೆಯನ್ನು 'Yes' ಎಂದು ಬದಲಿಸಿ ಸೇವ್ ಮಾಡಿ. ಇಷ್ಟು ಮಾಡಿದ ನಂತರ ಒಪೆರಾ ಮಿನಿ ಬ್ರೌಸರಿನಲ್ಲಿ ಕನ್ನಡದ ಪುಟಗಳನ್ನು ನೋಡುವುದು ಸಾಧ್ಯವಾಗುತ್ತದೆ.

ಇಷ್ಟೆಲ್ಲ ಕಷ್ಟ ಬೇಡ, ನಮ್ಮ ಫೋನಿನಲ್ಲಿ ಇಂಗ್ಲಿಷ್ ಬರುವಷ್ಟೇ ಸರಾಗವಾಗಿ ಕನ್ನಡವೂ ಮೂಡಬೇಕು ಎನ್ನುವುದಾದರೆ ಅದಕ್ಕೂ ಒಂದು ಸರಳ ಸೂತ್ರವಿದೆ: ಫೋನ್ ಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಫೋನಿನಲ್ಲಿ ಕನ್ನಡ ಅಕ್ಷರಗಳು ಸರಿಯಾಗಿ ಮೂಡಬೇಕು ಎಂದು ಕೇಳಿದರೆ ಮೊಬೈಲ್ ನಿರ್ಮಾತೃಗಳು ತಾವಾಗಿಯೇ ತಮ್ಮ ಉತ್ಪನ್ನಗಳಲ್ಲಿ ಕನ್ನಡ ಭಾಷೆಯನ್ನು ಬೆಂಬಲಿಸುತ್ತಾರೆ. ಹೀಗೆ ಎಲ್ಲ ಫೋನುಗಳಲ್ಲೂ ಕನ್ನಡ ಭಾಷೆ ಮೂಡುವಂತೆ ಆಗುವವರೆಗಂತೂ ನಾವು ಕನ್ನಡವಿಲ್ಲದ ಫೋನು ನಮಗೆ ಬೇಡ ಎನ್ನುವ ನಿಲುವು ತಳೆದುಬಿಟ್ಟರಾಯಿತು, ಪರಿಸ್ಥಿತಿ ತನ್ನಷ್ಟಕ್ಕೆ ತಾನೇ ಬದಲಾಗಿಬಿಡುತ್ತದೆ!

ಮುಂದಿನ ಹೆಜ್ಜೆಗಳು

ವಿವಿಧ ಜಾಲತಾಣಗಳಲ್ಲಿ ಕನ್ನಡ ಎಷ್ಟೇ ಪ್ರಮಾಣದಲ್ಲಿದ್ದರೂ ಜಾಲತಾಣಗಳ ವಿಳಾಸವನ್ನು (ಯುಆರ್‌ಎಲ್) ಕನ್ನಡದಲ್ಲಿರುವಂತೆ ಮಾಡುವುದು ಮಾತ್ರ ಇನ್ನೂ ಸಾಧ್ಯವಾಗಿಲ್ಲ. ಉದಾಹರಣೆಗೆ www.karunadu.gov.in ಎನ್ನುವುದು ಕರ್ನಾಟಕ ಸರಕಾರದ ಜಾಲತಾಣದ ವಿಳಾಸ. ಇದರಲ್ಲಿನ ಮಾಹಿತಿ ಕನ್ನಡ ಇಂಗ್ಲಿಷ್ ಎರಡು ಭಾಷೆಗಳಲ್ಲೂ ಇದೆ. ಆದರೆ ತಾಣದ ವಿಳಾಸ ಮಾತ್ರ ಇಂಗ್ಲಿಷಿನಲ್ಲೇ ಇರಬೇಕಾಗಿರುವುದು ಸದ್ಯದ ಪರಿಸ್ಥಿತಿ.

ಜಾಲತಾಣಗಳ ವಿಳಾಸವನ್ನು ಇಂಗ್ಲಿಷಿನ ಬದಲು ನಮ್ಮದೇ ಭಾಷೆಯಲ್ಲಿ ಇಟ್ಟುಕೊಳ್ಳಲು ಅನುವುಮಾಡಿಕೊಡುವ ಇಂಟರ್‌ನ್ಯಾಷನಲೈಸ್ಡ್ ಡೊಮೈನ್ ನೇಮ್ (ಐಡಿಎನ್) ಸೌಲಭ್ಯ ಈಗಾಗಲೇ ಅಸ್ತಿತ್ವದಲ್ಲಿದೆಯಾದರೂ ಭಾರತೀಯ ಭಾಷೆಗಳ ಪೈಕಿ ಅದು ಹಿಂದಿ, ಗುಜರಾತಿ, ಉರ್ದು, ಪಂಜಾಬಿ, ಬೆಂಗಾಲಿ, ತಮಿಳು ಹಾಗೂ

ತೆಲುಗು ಭಾಷೆಗಳಿಗಷ್ಟೆ ಸಿಕ್ಕಿದೆ. ಮುಂದೆ ಕನ್ನಡಕ್ಕೂ ಐಡಿಎನ್ ಸೌಲಭ್ಯ ಬಂದಾಗ ಮೇಲಿನ ಉದಾಹರಣೆಯಲ್ಲಿ ನೋಡಿದ ತಾಣದ ವಿಳಾಸವನ್ನು ನಮ್ಮ ಬ್ರೌಸರಿನ ಅಡ್ರೆಸ್ ಬಾರ್‌ನಲ್ಲಿ ಕನ್ನಡ ಅಕ್ಷರಗಳಲ್ಲಿಯೇ ಬರೆಯುವುದು ಸಾಧ್ಯವಾಗಲಿದೆ.

ಕನ್ನಡಕ್ಕೆ ಯೂನಿಕೋಡ್ ಶಿಷ್ಟತೆಯನ್ನು ಕಡ್ಡಾಯವೆಂದು ಇತ್ತೀಚೆಗೆ ಪ್ರಕಟಿಸಲಾಗಿದೆಯಲ್ಲ, ಅದರೊಡನೆ ಸರಕಾರದ ಎಲ್ಲ ಜಾಲತಾಣಗಳೂ ಕನ್ನಡದಲ್ಲಿ – ಅದರಲ್ಲೂ ಯುನಿಕೋಡ್‌ನಲ್ಲಿ – ಇರುವಂತೆ ಮಾಡುವುದು ಮತ್ತು ಅವುಗಳಲ್ಲಿರುವ ಮಾಹಿತಿ ಆಗಿಂದಾಗ್ಗೆ ಅಪ್‌ಡೇಟ್ ಆಗುತ್ತಿರುವಂತೆ ನೋಡಿಕೊಳ್ಳುವುದೂ ಅಗತ್ಯ. ತಮಗೆ ಬೇಕಾದ ಯಾವುದೇ ಮಾಹಿತಿಯನ್ನು ಯಾರು ಯಾವಾಗ ಬೇಕಿದ್ದರೂ ಸುಲಭವಾಗಿ ಹುಡುಕಿಕೊಳ್ಳುವುದು ಇದರಿಂದ ಸಾಧ್ಯವಾಗುತ್ತದೆ. ಈಗಾಗಲೇ ಲಭ್ಯವಿರುವ ಇ–ಸ್ಪೀಕ್ ತಂತ್ರಾಂಶ ಬಳಸಿ ದೃಷ್ಟಿಸವಾಲು ಎದುರಿಸುತ್ತಿರುವವರು ಕೂಡ ಈ ತಾಣಗಳ ಉಪಯೋಗ ಪಡೆದುಕೊಳ್ಳಬಹುದು. ಸರಕಾರದ ತಾಣಗಳಷ್ಟೇ ಅಲ್ಲ, ಎಲ್ಲ ಪತ್ರಿಕೆಗಳ ಜಾಲತಾಣಗಳೂ ಯುನಿಕೋಡ್‌ನಲ್ಲಿದ್ದರೆ ಗೂಗಲ್ ನ್ಯೂಸ್‌ನಂತಹ ಸೇವೆಗಳಲ್ಲಿ ಕನ್ನಡಕ್ಕೆ ಸ್ಥಾನ ಬೇಕೆಂಬ ಬಹುದಿನಗಳ ಬೇಡಿಕೆಗೆ ಇನ್ನಷ್ಟು ಬಲ ಬರುತ್ತದೆ.

ಮೊಬೈಲ್ ಫೋನ್ ತಯಾರಕರಿಗೆ ಯೂನಿಕೋಡ್ ಶಿಷ್ಟತೆಯನ್ನು ಅಳವಡಿಸಿಕೊಳ್ಳುವಂತೆ ನಿರ್ದೇಶನ ನೀಡುವುದು ಆಗಬೇಕಿರುವ ಇನ್ನೊಂದು ಕೆಲಸ. ಎಲ್ಲರ ಕೈಯಲ್ಲೂ ಒಂದೊಂದು ಮೊಬೈಲ್ ದೂರವಾಣಿ ಕಾಣಸಿಗುವ ಈ ದಿನಗಳಲ್ಲಿ ಅವು ಕನ್ನಡ ಬಳಸುವಂತಿರಬೇಕಾದದ್ದು ಅತ್ಯಗತ್ಯ. ಕನ್ನಡದಲ್ಲೇ



ಸಂದೇಶಗಳನ್ನು ಕಳುಹಿಸುವುದು, ಕನ್ನಡದ ನಿಘಂಟುಗಳನ್ನು ಅಳವಡಿಸುವುದು ಮುಂತಾದ ಕೆಲಸಗಳೆಲ್ಲ ಇದರಿಂದ ಸುಲಭವಾಗಲಿದೆ. ಎಲ್ಲ ಟ್ಯಾಬ್ಲೆಟ್ ಗಣಕಗಳು ಹಾಗೂ ಇ– ಬುಕ್ ರೀಡರ್‌ಗಳಲ್ಲೂ ಯುನಿಕೋಡ್ ಬೆಂಬಲ ಸಿಗಬೇಕಾದ್ದು ಕೂಡ ಅಗತ್ಯ.

ಕೆಲವು ಜಾಲತಾಣಗಳು

- avadhimag.com
- baraha.com
- baraha.com/kannada
- chukkubukku.com
- ejnana.com
- google.com/inputtools
- google.com/intl/kn
- ildc.in/Kannada/Kindex.aspx
- kagapa.in
- kamat.com
- kanaja.in
- kannadakasturi.com
- kannadaprabha.com
- kannadaslate.com
- kendasampige.com
- kn.wikipedia.org
- kn.wiktionary.org
- pada.pro
- prajavani.net
- quillpad.in
- sampada.net
- sanjevani.com
- sirinudi.org
- srinidhi.net.in
- thatskannada.oneindia.in
- totalkannada.com
- translate.google.com
- udayavani.com
- vijaykarnataka.indiatimes.com
- vishvakannada.com

ಹೆಚ್ಚಿನ ಓದು

- ಕಂಪ್ಯೂಟರ್ ಪ್ರಪಂಚ, ಟಿ. ಜಿ. ಶ್ರೀನಿಧಿ, ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು, ಬೆಲೆ: ರೂ. 120/–
- ಫ್ಲಾಪಿಯಿಂದ ಫೇಸ್‌ಬುಕ್‌ವರೆಗೆ, ಟಿ. ಜಿ. ಶ್ರೀನಿಧಿ, ಪ್ರ: ಭಾರತೀ ಪ್ರಕಾಶನ, ಮೈಸೂರು, ಬೆಲೆ: ರೂ. 50/–
- ತಿನ್ನಲಾಗದ ಬಿಸ್ಕತ್ತು ನುಂಗಲಾಗದ ಟ್ಯಾಬ್ಲೆಟ್ಟು, ಟಿ. ಜಿ. ಶ್ರೀನಿಧಿ, ಪ್ರ: ಆಕೃತಿ ಪುಸ್ತಕ ಹಾಗೂ ಇಜ್ಞಾನ ಡಾಟ್ ಕಾಮ್, ಬೆಲೆ: ರೂ. 85/–

ಮುಕ್ತ/ಸ್ವತಂತ್ರ ತಂತ್ರಾಂಶ ಚಳುವಳಿ

ಓಂಶಿವಪ್ರಕಾಶ್ ಎಚ್.ಎಲ್

ಅಂಗೈಯಲ್ಲಿ ಇಂದು ಕಂಪ್ಯೂಟರ್ ಹಿಡಿದು ಜಗತ್ತಿನ ಆಗುಹೋಗುಗಳನ್ನೆಲ್ಲಾ ತಿಳಿಯುವ ನಮಗೆ ಅದು ಹೇಗೆ ಕೆಲಸ ಮಾಡುತ್ತದೆ ಎಂದು ಕೇಳಿದಾಕ್ಷಣ ಸಿಗುವ ಉತ್ತರ, ಅದರ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳ ಸಹಾಯದಿಂದ ಎಂಬುದು. ಸಿ.ಪಿಯು, ಮಾನಿಟರ್, ಕೀಬೋರ್ಡ್, ಮೌಸ್ ಹೀಗೆ ನಮ್ಮ ಕಣ್ಣೆದುರಿಗೆ ಕಾಣುವ ಯಂತ್ರಾಂಶಗಳು ಅಂದರೆ ಹಾರ್ಡ್‌ವೇರ್‌ಗಳು ಕಂಪ್ಯೂಟರಿನ ಬಾಹ್ಯರೂಪವನ್ನು ಬಿಂಬಿಸಿದರೆ, ಅದರೊಳಗೆ ಇರುವ ಸಾಫ್ಟ್‌ವೇರ್ ಎಂಬ ತಂತ್ರಾಂಶ ಈ ಎಲ್ಲ ಯಂತ್ರಾಂಶಗಳಿಗೆ ಜೀವ ಕೊಡುವ ಕೆಲಸ ಮಾಡುತ್ತದೆ. ಕಂಪ್ಯೂಟರ್ ಕೊಳ್ಳುವಾಗ ನಾವು ಕೇವಲ ಹಾರ್ಡ್‌ವೇರ್‌ಗೆ ಹಣಕೊಡದೆ, ಅದನ್ನು ಕೆಲಸ ಮಾಡುವಂತೆ ಮಾಡುವ ತಂತ್ರಾಂಶಕ್ಕೆ ಕೂಡ ಹಣ ಕೊಡುವ ಅವಶ್ಯಕತೆ ಇದೆ. ಯಾವುದೋ ಕಂಪೆನಿಯ ಬ್ರಾಂಡೆಡ್ ಕಂಪ್ಯೂಟರ್ ಕೊಂಡ ಸಮಯದಲ್ಲಿ ತಂತ್ರಾಂಶ ಅದರ ಜೊತೆಗೆ ಸಿಗುತ್ತದೆ (ಲ್ಯಾಪ್‌ಟಾಪ್‌ಗಳಲ್ಲಂತೂ ಇದು ಸಾಮಾನ್ಯ). ಆದರೆ ನಮಗೆ ತಿಳಿದಿರುವ ಅಂಗಡಿಯವನ ಬಳಿ ಕಡಿಮೆ ಬೆಲೆಗೆ ಕಂಪ್ಯೂಟರ್ ಕೊಂಡಾಗ ಅಥವಾ ನಾವೇ ಒಂದು ಕಂಪ್ಯೂಟರ್ ಅನ್ನು ಅಸೆಂಬಲ್ (ಜೋಡಿಸಿ ಸಿದ್ಧಪಡಿಸುವುದು) ಮಾಡಿದಾಗ ತಂತ್ರಾಂಶವನ್ನು ಕೊಂಡು ತಂದು ಸ್ಥಾಪಿಸಬೇಕಾಗುತ್ತದೆ. ಹಣ ಎಷ್ಟು ಕಡಿಮೆ ಖರ್ಚುಮಾಡಲು ಸಾಧ್ಯವೋ ಅದಕ್ಕೆ ಬೇಕಾಗಿರುವುದನ್ನೆಲ್ಲಾ ಮಾಡುವ ಆತುರದಲ್ಲಿ, ಅಂಗಡಿಯವನ ಬಳಿ ಇರುವ ಸಾಫ್ಟ್‌ವೇರ್, ಗೆಳೆಯರ ಅಥವಾ ಪಕ್ಕದ ಮನೆಯವರ ಬಳಿ ಇರುವ ಸಾಫ್ಟ್‌ವೇರ್ ನಕಲು ಮಾಡಿಕೊಂಡು ಇನ್‌ಸ್ಟಾಲ್ ಮಾಡಿಕೊಳ್ಳುವುದು ಸಾಮಾನ್ಯ. ಪೈರಸಿಯ ಭೂತವನ್ನು ನಿಧಾನವಾಗಿ ಆರಾಧಿಸುವುದನ್ನು ಕಲಿಯುವುದು ಇಲ್ಲಿಂದಲೇ.

ಒಂದಾದ ನಂತರ ಮತ್ತೊಂದು ಹೀಗೆ ಕಂಪ್ಯೂಟರ್ ಬಳಕೆಯ ಸಮಯವೆಲ್ಲಾ, ಯಾವುದೋ ಕಂಪೆನಿಯ ಸಾವಿರಾರು ರೂಪಾಯಿ ಬೆಲೆಬಾಳುವ ತಂತ್ರಾಂಶಗಳನ್ನು ಬಳಸಲೇ ಬೇಕು ಎಂದಾದರೆ ಬೇರೆ ದಾರಿ ಕಾಣದಿರುವುದು ಸಹಜವೇ. ಆದರೆ ಕಾನೂನಿನ ಪ್ರಕಾರ ಪೈರಸಿಯ ಮೊರೆ ಹೋಗುವುದು ಶಿಕ್ಷಾರ್ಹ ಅಪರಾಧ. ಜೊತೆಗೆ ಆ ತಂತ್ರಾಂಶ ಸೃಷ್ಟಿಸಿದ ಕಂಪೆನಿಗೂ ಮೋಸ ಮಾಡಿದಂತೆ ಆಗುತ್ತದೆ ಅಲ್ಲವೇ? ನೀವೇ ಆ ಕಂಪೆನಿಯ ಮಾಲೀಕನಾಗಿದ್ದು, ನಿಮ್ಮ ಗೆಳೆಯರೋ, ಇನ್ನ್ಯಾರೋ ತಂತ್ರಾಂಶವನ್ನು ಕದ್ದುಮುಚ್ಚಿ ಬಳಸಿಕೊಂಡರೆ ನಿಮಗೆ ಏನನ್ನಿಸಬಹುದು? ಸ್ವಲ್ಪ ಯೋಚಿಸಿ. ಇದೆಲ್ಲದರ ಜೊತೆಗೆ ಈ ತಂತ್ರಾಂಶಗಳನ್ನು ಬದಲಾಯಿಸಿ, ನಿಮಗೆ ಬೇಕಾದ ರೀತಿಯಲ್ಲಿ ಅವನ್ನು ಪುನಃ ಅಭಿವೃದ್ಧಿಪಡಿಸಿಕೊಳ್ಳುವ ಸಾಧ್ಯತೆಗಳಿವೆಯೇ ಎಂಬುದನ್ನೂ ಪರೀಕ್ಷಿಸಿ. ಖಾಸಗಿ ಸಂಸ್ಥೆಗಳು ಸೃಷ್ಟಿಸುವ ತಂತ್ರಾಂಶಗಳನ್ನು

ಬಳಸುವುದರಿಂದ ಹಿಡಿದು, ಅವನ್ನು ಮರುಬಳಕೆಗೆ ತರುವವರೆಗೂ ಎಲ್ಲದಕ್ಕೂ ಒಂದಲ್ಲಾ ಒಂದು ರೀತಿಯ ಲೈಸೆನ್ಸ್ (ಪರವಾನಗಿ) ಪಡೆಯುವುದು ಅನಿವಾರ್ಯ. ಬಳಕೆಗೆ ಬಳಕೆದಾರನ ಲೈಸೆನ್ಸ್, ತಂತ್ರಾಂಶ ಅಭಿವೃದ್ಧಿ ಮಾಡಲು ಡೆವೆಲಪರ್ ಲೈಸೆನ್ಸ್ – ಹೀಗೆ ಒಬ್ಬ ವ್ಯಕ್ತಿ ಕಂಪ್ಯೂಟರ್ ಬಳಕೆ ಮಾಡುವುದನ್ನು ಈ ವ್ಯವಸ್ಥೆ ಅನುವು ಮಾಡಿಕೊಡುತ್ತದೆಯೇ ಹೊರತು, ಕಂಪ್ಯೂಟರ್ ಕೊಂಡ ವ್ಯಕ್ತಿಯೇ ಆ ಕಂಪ್ಯೂಟರ್ ಅನ್ನು ಅಥವಾ ಅದಕ್ಕೂ ಮಿಗಿಲಾದದ್ದನ್ನು ಸೃಷ್ಟಿಸುವ ವ್ಯವಸ್ಥೆ, ಸವಲತ್ತು, ಜ್ಞಾನವನ್ನು ಈ ಲೈಸೆನ್ಸ್‌ಗಳೊಡನೆ ಹಂಚಿಕೊಳ್ಳುವುದಿಲ್ಲ.

ಸಾಫ್ಟ್‌ವೇರ್ ಅಥವಾ ತಂತ್ರಾಂಶಗಳನ್ನು ಯಾವುದೇ ಒಂದು ಕಂಪೆನಿಯಿಂದ ಖರೀದಿ ಮಾಡಿ ಬಳಸುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದದ್ದೇ ಆಗಿದೆ. ಆದರೆ ಹೆಚ್ಚಿನ ಹಣ ಕೊಟ್ಟು ಅಥವಾ ಈಗಾಗಲೇ ತನ್ನ ಗೆಳೆಯನಲ್ಲಿರುವ ತಂತ್ರಾಂಶವನ್ನು ನಕಲು ಮಾಡಿ ಬಳಸುವುದು ಕೂಡ ಕಂಪ್ಯೂಟರ್ ಬಳಕೆದಾರರ ನಡುವೆ ಸರ್ವೇ ಸಾಮಾನ್ಯ. ಸಿನೆಮಾ, ಸಂಗೀತ ಇತ್ಯಾದಿಗಳನ್ನು ನಕಲು ಮಾಡಿ ಮಾರುವುದು ಅಥವಾ ಬಳಸುವುದು ಹೇಗೆ ಅಪರಾಧವೋ ಅದೇ ರೀತಿ ಕಂಪ್ಯೂಟರ್ ತಂತ್ರಾಂಶಗಳನ್ನೂ ಬಳಸುವುದು ತಪ್ಪು ಎಂಬುದನ್ನು ಎಷ್ಟೋ ಬಾರಿ ಗೊತ್ತಿದ್ದೂ ಅನೇಕರು ಜಾಣ ಮರೆವನ್ನು ಪ್ರದರ್ಶಿಸುತ್ತಾರೆ. ಇದರ ಜೊತೆಗೆ ಖಾಸಗೀ ತಂತ್ರಾಂಶಗಳಿಗೆ ಪರ್ಯಾಯವಾಗಿರುವ, ಜನರಿಂದ ಜನರಿಗಾಗಿ, ಜನರಿಗೋಸ್ಕರವೇ ಇರುವ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳನ್ನು ಕೇವಲ ಪರಿಣಿತರಿಗೆ ಮಾತ್ರ ಎನ್ನುವ ತಪ್ಪು ತಿಳಿವಳಿಕೆ, ಯಾವ ವಯಸ್ಸಿನ ವ್ಯಕ್ತಿಯೇ ಆಗಲಿ ತನ್ನ ಕ್ರಿಯಾತ್ಮಕತೆಯನ್ನು (Creativity) ತಂತ್ರಜ್ಞಾನ, ತಂತ್ರಾಂಶಗಳ ಜೊತೆಗೆ ಕೆಲಸ ಮಾಡುವಾಗ ಬಳಸಬಹುದು, ಅದರಿಂದ ತನಗೆ, ಸಮಾಜಕ್ಕೆ ಬೇಕಿರುವ ಅನೇಕ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಿದೆ ಎನ್ನುವ ಮಾಹಿತಿ ಕೊರತೆ ಇತ್ಯಾದಿ ತಂತ್ರಾಂಶ ಮತ್ತು ತಂತ್ರಜ್ಞಾನ ಸ್ವಾವಲಂಭನೆಯನ್ನು ಸಾಧಿಸುವುದಕ್ಕೆ ಮೂಲ ತೊಡಕುಗಳಾಗಿವೆ.

ಪ್ರತಿಯೊಂದೂ ವಸ್ತುವೂ ಚುಕ್ಕಾಸಿನ ಬೆಲೆಗಾದರೂ ಮಾರಾಟವಾಗುವ ಈ ಕಾಲದಲ್ಲಿ, ಎಲ್ಲದನ್ನೂ ಕಡಿಮೆ ಬೆಲೆಯಲ್ಲಿ ಅಥವಾ ಉಚಿತವಾಗಿ ಪಡೆಯುವ ಈ ಕಾಲದಲ್ಲಿ, ಸಮುದಾಯವೊಂದು ಮುಕ್ತವಾಗಿ, ಸ್ವತಂತ್ರವಾಗಿ ತಂತ್ರಾಂಶಗಳನ್ನು ವಿಶ್ವದಾದ್ಯಂತ ಪಸರಿಸುವಂತೆ ಮಾಡುತ್ತಿದೆ. ಜೊತೆಗೆ ತಂತ್ರಾಂಶ ತನ್ನ ಬಳಕೆದಾರನ ಕಂಪ್ಯೂಟರಿನಲ್ಲಿ ಮಾಡುವ ಕಾರ್ಯಗಳು ಇತ್ಯಾದಿಗಳ ಬಗ್ಗೆ ಪಾರದರ್ಶಕತೆಯನ್ನು ಉಳಿಸಿಕೊಳ್ಳುವದರಲ್ಲಿ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳು ಬೇರೆಲ್ಲ ತಂತ್ರಾಂಶಗಳಿಗಿಂತ ಮುಂದಿವೆ.

ಸಾಫ್ಟ್‌ವೇರ್ ಜಗತ್ತಿನಲ್ಲಿ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳ (FOSS) ಇತ್ತೀಚಿನ ವರ್ಷಗಳ ಬೆಳವಣಿಗೆಗಳನ್ನು ನೋಡಿದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ ದೈತ್ಯ ಸಾಫ್ಟ್‌ವೇರ್ ಕಂಪನಿಗಳೂ ಇವನ್ನು ಯಥೇಚ್ಛವಾಗಿ ತಮ್ಮ ಕಾರ್ಯವ್ಯಾಪ್ತಿಗೆ ಅಳವಡಿಸಿಕೊಂಡಿವೆ. ಇದಲ್ಲದೆ ಮುಕ್ತ ಮಾಹಿತಿ (Open Content), ಮುಕ್ತ

ಸಂಸ್ಕೃತಿ (Open Culture) ನಂತಹ ಚಳುವಳಿಗಳಿಗೂ ಇದು ನಾಂದಿ ಹಾಡಿದ್ದು, ಇದರಿಂದ ಪ್ರಾರಂಭವಾಗಿರುವ ಅನೇಕ ಯೋಜನೆಗಳನ್ನು ಇಂಟರ್‌ನೆಟ್ ಹುಡುಕಿದಾಗ ಸುಲಭವಾಗಿ ತಿಳಿಯುತ್ತದೆ.

ಇತಿಹಾಸ

ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶ ಚಳುವಳಿಯು ಅಮೆರಿಕಾ ಸಂಯುಕ್ತ ಸಂಸ್ಥಾನದ ಕಂಪ್ಯೂಟರ್ ಸೈನ್ಸ್ ಲ್ಯಾಬೋರೇಟರಿಗಳಲ್ಲಿ (ಸ್ಟಾನ್‌ಫರ್ಡ್, ಬರ್ಕ್ಲಿ, ಕಾರ್ನೆಗಿ ಮೆಲ್ಲನ್ ಮತ್ತು ಎಂಐಟಿ) 1950 ಮತ್ತು 1970ರ ದಶಕಗಳಲ್ಲಿ ಶುರುವಾದ 'ಹ್ಯಾಕರ್' ಸಂಸ್ಕೃತಿಯೊಂದಿಗೆ ಹುಟ್ಟಿಕೊಂಡಿತು.

ಈ ಹ್ಯಾಕರ್ ಸಮುದಾಯದಲ್ಲಿದ್ದ ಪ್ರೋಗ್ರಾಮರ್‌ಗಳ ಸಂಖ್ಯೆ ಚಿಕ್ಕದಾಗಿದ್ದು, ಒಬ್ಬರನ್ನೊಬ್ಬರು ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ತಾವು ಅಭಿವೃದ್ಧಿಪಡಿಸಿದ ಪ್ರೋಗ್ರಾಮುಗಳ ಮೂಲ(Code)ವನ್ನು ಸಮುದಾಯದ ಇತರರೊಡನೆ ಹಂಚಿಕೊಳ್ಳುವುದು ಸಾಮಾನ್ಯದ ಸಂಗತಿಯಾಗಿತ್ತು. ಸಮುದಾಯದ ಯಾರೊಬ್ಬರಾದರೂ ಯಾವುದೇ ತಂತ್ರಾಂಶದ ಮೂಲವನ್ನು ಉತ್ತಮಗೊಳಿಸಿದ್ದಲ್ಲಿ ಅದನ್ನು ಇತರರೊಡನೆ ಹಂಚಿಕೊಳ್ಳಬೇಕಾದ್ದು ಸಮುದಾಯದ ನಿಯಮವಾಗಿತ್ತು. ಉದ್ಧರಿಸಿದ ತಂತ್ರಾಂಶ ಮೂಲವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಇಚ್ಛಿಸಿದರೆ, ಅದನ್ನು ಉದ್ಧಟತನ ಎನ್ನಲಾಗುತ್ತಿತ್ತು. ಏಕೆಂದರೆ ಅದನ್ನು ಉದ್ಧರಿಸುವಲ್ಲಿ ನಿಮ್ಮ ಗೆಳೆಯರ ಸಹಾಯ ಸಮುದಾಯದ ಮುಖೇನ ದೊರೆತಿದ್ದು, ಸಮುದಾಯಕ್ಕೆ ಮತ್ತು ಗೆಳೆಯರಿಗೆ ಪ್ರತ್ಯುಪಕಾರ ಮಾಡಬೇಕಾದ್ದು ಧರ್ಮ.

FOSS ಚಳವಳಿ ಕಂಪ್ಯೂಟರ್ ಉದ್ದಿಮೆಯ ಪ್ರಾರಂಭದ ವೇಳೆಯಲ್ಲೇ ಶುರುವಾಯಿತು, ಆದರೆ ಅದಕ್ಕೆ ಬೇಕಾದ ರೂಪುರೇಷೆಗಳನ್ನು ರೂಪಿಸಿರಲಿಲ್ಲ ಅಥವಾ ಅದರ ಪರಿಕಲ್ಪನೆ ಇರಲಿಲ್ಲ. 1970ರ ಕೊನೆ ಮತ್ತು 1980 ಮೊದಲ ಭಾಗದಲ್ಲಿ ತಂತ್ರಾಂಶಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು ಖಾಸಗಿ ಸಾಫ್ಟ್‌ವೇರ್ ಉದ್ಯಮದ ಜೊತೆಗಿನ ವಿರಸಕ್ಕೆ ಕಾರಣವಾಗುತ್ತಾ ಬಂತು. ಬಿಲ್ ಗೇಟ್ಸ್ (William Henry Gates III) ಬರೆದ AN OPEN LETTER TO HOBBYISTS (http://www.tranquileye.com/cyber/1976/gates_open_letter_to_hobbyists.html) ಎಂಬ ಪತ್ರದಲ್ಲಿ 'ಹವ್ಯಾಸಿ ತಂತ್ರಜ್ಞರು ಬೇರೆಯವರು ಬರೆದ ತಂತ್ರಾಂಶಗಳನ್ನು ಬಳಸುವುದು ತಂತ್ರಾಂಶವನ್ನು ಕದ್ದಂತಲ್ಲವೇ? ಕಂಪ್ಯೂಟರ್ ಹಾರ್ಡ್‌ವೇರ್‌ಗೆ ಹಣ ವ್ಯಯಿಸುವಂತೆ ಅದಕ್ಕೆ ಬೇಕಾದ ತಂತ್ರಾಂಶವನ್ನು ಅಭಿವೃದ್ಧಿಪಡಿಸುವವರೂ ಅದನ್ನು ಸೃಷ್ಟಿಸಲು ವ್ಯಯಿಸಿದ ಸಮಯಕ್ಕಾದರೂ ಸರಿಯಾದ ಬೆಲೆಯನ್ನು ಪಡೆಯುತ್ತಿದ್ದಾರಾ ಎಂದು ಯಾರಾದರೂ ವಿಚಾರಿಸಿದ್ದೀರಾ?' ಎಂದು ಸಾಫ್ಟ್‌ವೇರ್ ಇತರರೊಡನೆ ಹಂಚಿಕೊಳ್ಳುವುದಕ್ಕೆ ಮಾತ್ರವೇ ಎಂಬ ಪ್ರಶ್ನೆಯನ್ನು ಎತ್ತಿದರು.

ಇದಾದ ನಂತರ ಮುಂದಿನ ದಿನಗಳಲ್ಲಿ ಖಾಸಗೀ ತಂತ್ರಾಂಶಗಳ ಉದ್ಯಮ ವೇಗವಾಗಿ ಬೆಳೆಯಲಿಕ್ಕೆ ಪ್ರಾರಂಭವಾಯ್ತು. MITಯ ಆರ್ಟಿಫಿಷಿಯಲ್

ಇಂಟೆಲಿಜನ್ಸ್ ಲ್ಯಾಬ್‌ನಲ್ಲಿ 1980ರ ಮೊದಲ ಭಾಗದಲ್ಲಿ ಸಿಂಬಾಲಿಕ್ಸ್ ಎಂಬ ಕಂಪೆನಿ ಹುಟ್ಟಿಕೊಂಡಿತು. ಅದುವರೆಗೂ ಉಚಿತವಾಗಿ ಲಭ್ಯವಿದ್ದ LISP ಪ್ರೋಗ್ರಾಮಿಂಗ್ ಭಾಷೆಯ ಮೂಲವನ್ನು ತನ್ನದಾಗಿಸಿಕೊಂಡ ಈ ಕಂಪೆನಿ ಅದನ್ನು ಖಾಸಗಿ ಸ್ವತ್ತನಾಗಿಸಿಕೊಂಡಿತು. ಇದರೊಂದಿಗೆ ತಂತ್ರಾಂಶಗಳನ್ನು ಇತರರೊಡನೆ ಹಂಚಿಕೊಳ್ಳುತ್ತಿದ್ದ ಸಂಸ್ಕೃತಿಯನ್ನು MIT ಯಲ್ಲಿ ಕೊನೆಯಾಗಿಸಿತು. ಇದರ ಬಗ್ಗೆ ಉಲ್ಲೇಖಗಳನ್ನು Moody, Glyn ಅವರ `Rebel Code' ಪುಸ್ತಕದಲ್ಲಿ ಓದಬಹುದು ಮತ್ತು ವಿಕಿಪೀಡಿಯದಲ್ಲೂ ಕೂಡ ಇದರ ಉಲ್ಲೇಖಗಳಿವೆ (https://en.wikipedia.org/wiki/Free_software). ಇದರ ಜೊತೆ ಜೊತೆಗೆ ಸಾಫ್ಟ್‌ವೇರ್ ಉದ್ದಿಮೆಗಳು ತಂತ್ರಾಂಶವನ್ನು ಅದರ ಮೂಲ ಸೋರ್ಸ್ ಕೋಡ್ ಕೊಡುವ ಅಭ್ಯಾಸವನ್ನು ತಪ್ಪಿಸಲು ಕಂಪ್ಯೂಟರ್ ಹಾರ್ಡ್‌ವೇರ್‌ನಲ್ಲಿ ಕೆಲಸ ಮಾಡುವ ಬೈನರಿ ಫಾರ್ಮ್ಯಾಟ್‌ಗೆ ತಂತ್ರಾಂಶಗಳನ್ನು ಪರಿವರ್ತಿಸಿ, ಹಾರ್ಡ್‌ವೇರ್ ಜೊತೆಗೇ ಮಾರುವುದನ್ನು ಪ್ರಾರಂಭಿಸಿದರು. ಜೊತೆಗೆ 1980ರಲ್ಲಿ ಕಾಪಿರೈಟ್ ಕಾನೂನನ್ನು ಕಂಪ್ಯೂಟರ್ ತಂತ್ರಾಂಶದ ಮೇಲೂ ಹೇರುವಂತೆ ಮಾಡಿದವು. ನೀವು ಈಗ ಖರೀದಿಸುವ ಕಂಪ್ಯೂಟರಿನ ಜೊತೆಗೆ ಅದಕ್ಕೆ ಬೇಕಿರುವ ಆಪರೇಟಿಂಗ್ ಸಿಸ್ಟಂ ಕೂಡ ದೊರೆಯುತ್ತಿರುವುದು ಇದರಿಂದಾಗಿಯೇ. ಈ ಬೆಳವಣಿಗೆ ಹವ್ಯಾಸಿ ಹ್ಯಾಕರ್ ಸಮುದಾಯದಲ್ಲಿ ತಲ್ಲಣವೆಬ್ಬಿಸಿದ ಕಾರಣ, ಸ್ವತಂತ್ರ ತಂತ್ರಾಂಶ ಫೌಂಡೇಷನ್ (FSF - www.fsf.org) ಮತ್ತು ಈಗ ನಮ್ಮ ಮುಂದಿರುವ FOSS ಸಂಸ್ಕೃತಿಯ ಸೃಷ್ಟಿಗೆ ಕಾರಣವಾಯ್ತು.

MITಯ ಸದಸ್ಯ ರಿಚರ್ಡ್ ಸ್ಟಾಲ್‌ಮನ್ (https://en.wikipedia.org/wiki/Richard_Stallman) ಈ ಮೇಲೆ ತಿಳಿಸಿದ ಸಂಗತಿಗಳಿಂದ ವಿಚಲಿತಗೊಂಡು, ಖಾಸಗೀ ತಂತ್ರಾಂಶಗಳ ಬಗ್ಗೆ ತನ್ನ ವಿಚಾರಗಳಿಗೆ ಒಂದು ರೂಪ ಕೊಡಲು ಎತ್ನಿಸಿದಾಗ ಸ್ವತಂತ್ರ ಆಪರೇಟಿಂಗ್ ಸಿಸ್ಟಂ ಒಂದು ಬೇಕು ಎನ್ನುವ ನಿಶ್ಚಯಕ್ಕೆ ಬಂದರು. ತನ್ನ ಕಂಪ್ಯೂಟರ್‌ಗೆ ಎಂದು ಬರೆದುಕೊಂಡ ತಂತ್ರಾಂಶವನ್ನು ತನ್ನ ಗೆಳೆಯರೊಂದಿಗೆ ಮುಕ್ತವಾಗಿ ಹಂಚಿಕೊಂಡರು. ತನ್ನ ಬಿಡುವಿನ ವೇಳೆಯಲ್ಲಿ ಮನೆಯ ಕಂಪ್ಯೂಟರ್‌ನಲ್ಲಿ ಬರೆದ ತನ್ನ ತಂತ್ರಾಂಶ ಇತರ ಗೆಳೆಯರಿಗೆ ಬೇಕಾದೀತು, ಅವರು ಅದನ್ನು ಉಪಯೋಗಿಸಿ ಆತನಿಗೆ ತಮ್ಮ ಅನುಭವವನ್ನು ಹಂಚಿಕೊಂಡಾರು ಎಂಬುದು ಇವರ ಆಶಯವಾಗಿತ್ತು. ಆದರೆ ತಮಗೆ ಕೆಲಸ ಕೊಡುವ ಕಂಪೆನಿಗಳು ನೀನು ಬರೆದ ಎಲ್ಲ ತಂತ್ರಾಂಶಗಳು ಕಂಪೆನಿಗೆ ಸೇರಿದವಾಗಿದ್ದು, ಅದನ್ನು ನೀನು ಮನಃಬಂದಂತೆ ಬೇರೆಯವರೊಡನೆ ಹಂಚಿಕೊಳ್ಳುವ ಹಾಗಿಲ್ಲ ಎನ್ನುವುದು ತನ್ನ ಸ್ವಾತಂತ್ರ್ಯವನ್ನು ಕಸಿದಂತೆ ಎನಿಸಿ 1983ರಲ್ಲಿ ಸ್ವತಂತ್ರ ತಂತ್ರಾಂಶ ಆಂದೋಲನವನ್ನೇ ಪ್ರಾರಂಭಿಸಿದರು. GNU Project (https://en.wikipedia.org/wiki/GNU_project) ತಮ್ಮ ಕನಸಿನ ಸ್ವತಂತ್ರ ಆಪರೇಟಿಂಗ್ ಸಿಸ್ಟಂ ಅನ್ನು ಅಭಿವೃದ್ಧಿಪಡಿಸಲು ಈ ಸಮಯದಲ್ಲಿ ಜನರಿಗೆ ಪರಿಚಯಿಸಿದ ಸ್ಟಾಲ್‌ಮನ್, ಕಂಪ್ಯೂಟರ್ ಉದ್ಯಮದ ಬೆಳವಣಿಗೆಗಳು ಅದರ ಬಳಕೆದಾರನ ಸ್ವಾತಂತ್ರ್ಯವನ್ನು ಕಸಿಯುತ್ತವೆ ಮತ್ತು ನಮ್ಮ ಕಂಪ್ಯೂಟರ್ ಸಮುದಾಯದ ಸಂಸ್ಕೃತಿಯನ್ನು

ಹಾಳುಗೆಡವುತ್ತಿವೆ ಎಂದು ಸಾರಿದರು. ಗ್ನು ಆಪರೇಟಿಂಗ್ ಸಿಸ್ಟಂನ ಅಭಿವೃದ್ಧಿ ಜನವರಿ 1984ರಲ್ಲಿ ಪ್ರಾರಂಭವಾಯಿತು ಮತ್ತು ಈ ಅಭಿವೃದ್ಧಿ ಕಾರ್ಯವನ್ನು ಬೆಂಬಲಿಸಲು ಮತ್ತು ಸ್ವತಂತ್ರ ತಂತ್ರಾಂಶ ಚಳುವಳಿಯನ್ನು ಪ್ರಚುರ ಪಡಿಸಲು ಅಕ್ಟೋಬರ್ 1985ರಲ್ಲಿ ಸ್ವತಂತ್ರ ತಂತ್ರಾಂಶ ಫೌಂಡೇಷನ್ (FSF) ಅನ್ನು ರಚಿಸಲಾಯಿತು. ಸ್ಟಾಲ್‌ಮನ್ ಸ್ವತಂತ್ರ ತಂತ್ರಾಂಶದ ವ್ಯಾಖ್ಯಾನವನ್ನೂ ಮತ್ತು ಕಾಪಿರೈಟ್‌ಗಳಿಂದ ಸಾಫ್ಟ್‌ವೇರ್‌ಗಳನ್ನು ಮುಕ್ತ ಗೊಳಿಸಿ ಎಲ್ಲರಿಗೂ ಸಾಫ್ಟ್‌ವೇರ್ ದೊರೆಯುವಂತೆ ಮಾಡುವ ಪರಿಕಲ್ಪನೆಯಾದ ಕಾಪಿಲೆಫ್ಟ್ (copyleft: https://en.wikipedia.org/wiki/Copyleft) ಅನ್ನು ಪರಿಚಯಿಸಿದರು.

ಕಂಪ್ಯೂಟರ್ ಇತ್ಯಾದಿಗಳನ್ನು ಖರೀದಿಸಿದ ಜನರು, ಅದನ್ನು ನಡೆಸಲು ಬೇಕಿರುವ ತಂತ್ರಾಂಶಗಳನ್ನು ತಾವಾಗಿಯೇ ಅಭಿವೃದ್ಧಿಪಡಿಸಿ, ಅದನ್ನು ಬೇರೆಯವರೊಡನೆ ಹಂಚಿಕೊಂಡು, ಇತರರೂ ಅಷ್ಟೇ ಸ್ವತಂತ್ರವಾಗಿ ತಮಗೆ ದೊರೆತ ಹಾಗೂ ತಾವೇ ಅಭಿವೃದ್ಧಿಪಡಿಸಿದ ತಂತ್ರಾಂಶವನ್ನು ಮತ್ತೆ ಇನ್ನಿತರರಿಗೂ ಹಂಚಿಕೊಳ್ಳುವ, ಒಂದು ಡಿಸ್ಕ್‌ನಿಂದ ಇನ್ನೊಂದಕ್ಕೆ ಅದನ್ನು ಕಾಪಿ ಮಾಡುವ ಇತ್ಯಾದಿ ಸ್ವಾತಂತ್ರ್ಯಗಳನ್ನು 'ಜನರಲ್ ಪಬ್ಲಿಕ್ ಲೈಸೆನ್ಸ್(GPL)' ಎಂಬ ಪರವಾನಗಿಯೊಂದಿಗೆ ಒದಗಿಸುವುದೇ 'ಸ್ವತಂತ್ರ ತಂತ್ರಾಂಶ ಆಂದೋಲನ'ದ ಮುಖ್ಯ ಉದ್ದೇಶವಾಗಿತ್ತು. ಇದರ ಒಂದು ಭಾಗವಾಗಿ ಪ್ರಾರಂಭಗೊಂಡ ಗ್ನು ಯೋಜನೆ (GNU - Gnu is Not Unix) ಕಂಪ್ಯೂಟರ್ ತಂತ್ರಾಂಶಗಳ ಅಭಿವೃದ್ಧಿಗೆ ಬೇಕಾದ ಮೂಲ ತಂತ್ರಾಂಶಗಳನ್ನು ಸಮಾನ ಮನಸ್ಕ ಜನರ ಸಹಾಯದಿಂದ ಅಭಿವೃದ್ಧಿಪಡಿಸುವಲ್ಲಿ ಹೆಜ್ಜೆ ಇಟ್ಟಿತು. ಇದೇ ಜನರ ಗುಂಪು ಮುಂದೆ ದೊಡ್ಡ ಸಮುದಾಯವಾಗಿ ಬೆಳೆಯತೊಡಗಿತು. ಮುಂದಿನ ಒಂದು ದಶಕದಲ್ಲಿ ಕಂಪ್ಯೂಟರ್ ಆಪರೇಟಿಂಗ್ ಸಿಸ್ಟಂಗೆ ಬೇಕಾದ ಅದೆಷ್ಟೋ ಮಹತ್ವದ ಟೂಲ್‌ಗಳನ್ನು ಈ ಯೋಜನೆ ಅಭಿವೃದ್ಧಿಪಡಿಸಿದರೂ, ಆಪರೇಟಿಂಗ್ ಸಿಸ್ಟಂಗೆ ಹೃದಯ ಭಾಗ ಎನ್ನಬಹುದಾದ `kernel' (ಕರ್ನೆಲ್)ನ ಅಭಿವೃದ್ಧಿ ಸಾಧ್ಯವಾಗಿರಲಿಲ್ಲ.

1991ರಲ್ಲಿ ಹೆಲ್ಸಿಂಕಿ ವಿಶ್ವವಿದ್ಯಾನಿಲಯದಲ್ಲಿ 2ನೇ ವರ್ಷದ ವಿದ್ಯಾರ್ಥಿಯಾಗಿದ್ದ ಲಿನಸ್ ಟೋರ್ವಾಲ್ಡ್ (https://en.wikipedia.org/wiki/Linus_Torvalds) ತನ್ನ ವಿಶ್ವವಿದ್ಯಾನಿಲಯದ ಕಂಪ್ಯೂಟರ್‌ಗಳನ್ನು ಸುಲಭವಾಗಿ ಒಂದು ಕಡೆ ಕುಳಿತು ನೆಟವರ್ಕ್ ಮೂಲಕ ಸಂಭಾಳಿಸುವುದಕ್ಕೋಸ್ಕರ ಯುನಿಕ್ಸ್‌ನಂತಹ ಕರ್ನೆಲ್ ಒಂದನ್ನು ಬರೆದು ಹವ್ಯಾಸಿ ತಂತ್ರಜ್ಞರ ಸಮುದಾಯದ ಜೊತೆಗೆ ಹಂಚಿಕೊಂಡರು. ಮುಂದೆ ಇದೇ ಗ್ನು/ಲಿನಕ್ಸ್ ಆಪರೇಟಿಂಗ್ ಸಿಸ್ಟಂನ ಸೃಷ್ಟಿಗೆ ಕಾರಣವಾಯ್ತು.

ಮುಕ್ತ ಮತ್ತು ಸ್ವತಂತ್ರ ತಂತ್ರಾಂಶ ಎಂದರೇನು?

ಡೇವಿಡ್ ಹೀಲರ್ ಪ್ರಕಾರ ಸಂಕ್ಷಿಪ್ತವಾಗಿ ಹೇಳಬೇಕೆಂದರೆ,ಓಪನ್(ಮುಕ್ತ) ಸೋರ್ಸ್ ತಂತ್ರಾಂಶ/ಸ್ವತಂತ್ರ (Free) ತಂತ್ರಾಂಶ ಯೋಜನೆಗಳು ತಮ್ಮ ಪರವಾನಗಿ/ಕೃತಿಸಾಮ್ಯಗಳ ಮೂಲಕ ಕಂಪ್ಯೂಟರ್ ಬಳಕೆದಾರರಿಗೆ ತಂತ್ರಾಂಶಗಳನ್ನು

ಯಾವುದೇ ಕಾರ್ಯಗಳಿಗೆ ಬಳಸುವ, ಅದನ್ನು ಅಭ್ಯಸಿಸುವ, ಬದಲಾಯಿಸುವ ಮತ್ತು ಇತರರೊಡನೆ ಮೂಲ ರೂಪದಲ್ಲಿ ಅಥವಾ ಬದಲಾಯಿಸಿ ಹಂಚಿಕೊಳ್ಳುವ ಸ್ವಾತಂತ್ರ್ಯವನ್ನು ನೀಡುತ್ತವೆ (ಈ ಹಿಂದೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ ತಂತ್ರಜ್ಞರಿಗೆ ಯಾವುದೇ ರೀತಿಯ ಗೌರವ ಹಣ ನೀಡದೆ).

ಮುಕ್ತ ಮತ್ತು ಸ್ವತಂತ್ರ ತಂತ್ರಾಂಶ ತತ್ವಜ್ಞಾನ (Philosophy)

ಇದು ಸ್ವತಂತ್ರ ತಂತ್ರಾಂಶ ಫೌಂಡೇಶನ್ (Free Software Foundation) ಮತ್ತು ಓಪನ್ ಸೋರ್ಸ್ ಇನಿಶಿಯೇಟೀವ್ (OSI) ತತ್ವಜ್ಞಾನಗಳೆಂಬ ನಾಣ್ಯದ ಎರಡು ಮುಖಗಳಿದ್ದಂತೆ.

ಸ್ವತಂತ್ರ ತಂತ್ರಾಂಶ ಫೌಂಡೇಶನ್‌ನ (FSF) ಫಿಲಾಸಫಿ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇದರ ಇತಿಹಾಸವನ್ನು ಮುಂದಿನ ಭಾಗಗಳಲ್ಲಿ ವಿವರಿಸಲಾಗಿದ್ದು, ಚಳುವಳಿಯಲ್ಲಿ ಬಹುಮುಖ್ಯ ಪಾತ್ರವನ್ನು ಹೊಂದಿದೆ.

‘ಸ್ವತಂತ್ರ ತಂತ್ರಾಂಶ’ ಸ್ವಾತಂತ್ರ್ಯದ ಅಂಶ, ಹೊರತು ಬೆಲೆಯಲ್ಲ. ಇದನ್ನ ಅರಿಯಲು ನೀವು ‘ಸ್ವತಂತ್ರ ಸಂವಾದ’ದಲ್ಲಿನ ‘ಸ್ವತಂತ್ರ’ ಎಂಬುದಾಗಿ ಅರ್ಥೈಸಿಕೊಳ್ಳಬೇಕು, ‘ಉಚಿತ ದೋಸೆ’ಯಲ್ಲಿನ ‘ಉಚಿತ’ ವೆಂಬಂತಲ್ಲ.

ಸ್ವತಂತ್ರ ತಂತ್ರಾಂಶ ಬಳಕೆದಾರರ ಬಳಕೆ, ಅನುಕರಣೆ ಮತ್ತು ವಿತರಣೆ, ಅಧ್ಯಯನ, ಬದಲಿಸುವಿಕೆ ಮತ್ತು ಅಭಿವೃದ್ಧಿಯ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಅಂಶವಾಗಿದೆ. ವಿಸ್ತರಿಸಿ ಹೇಳುವುದಾದರೆ, ಇದು ನಾಲ್ಕು ರೀತಿಯ ಸ್ವಾತಂತ್ರ್ಯವನ್ನು ತಂತ್ರಾಂಶ ಬಳಕೆದಾರರಿಗೆ ಸೂಚಿಸುತ್ತದೆ :

- **ಸ್ವಾತಂತ್ರ್ಯ 0 :** ಪ್ರೊಗ್ರಾಮನ್ನು ಯಾವುದೇ ಉದ್ದೇಶಕ್ಕೆ ಬಳಸುವ ಸ್ವಾತಂತ್ರ್ಯ
- **ಸ್ವಾತಂತ್ರ್ಯ 1 :** ಪ್ರೊಗ್ರಾಮ್ ಹೇಗೆ ಕಾರ್ಯನಿರ್ವಹಿಸುತ್ತದೆ ಮತ್ತು ಅದನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಹೇಗೆ ಅಳವಡಿಸಿಕೊಳ್ಳುವುದು ಎಂಬುದನ್ನು ಅಧ್ಯಯನ ಮಾಡುವ ಸ್ವಾತಂತ್ರ್ಯ ಮೂಲ ಗ್ರಂಥ/ರೂಪ ನೋಡಲು (source code) ಮಾಡಿಕೊಡುವ ಪೂರ್ವ ಕರಾರು ಇದಕ್ಕೆ ಅನ್ವಯಿಸುತ್ತದೆ.
- **ಸ್ವಾತಂತ್ರ್ಯ 2 :** ಪ್ರತಿಗಳನ್ನು ಮರುವಿತರಣೆ ಮಾಡುವ ಸ್ವಾತಂತ್ರ್ಯ, ಇದರಿಂದ ನಿಮ್ಮ ನೆರೆಹೊರೆಯವರಿಗೆ ನೆರವಾಗಲು ಸಾಧ್ಯವಾಗುತ್ತದೆ.
- **ಸ್ವಾತಂತ್ರ್ಯ 3 :** ತಂತ್ರಾಂಶಗಳನ್ನು ಅಭಿವೃದ್ಧಿ ಮಾಡುವ, ಮತ್ತು ಪರಿಷ್ಕರಿಸಿದ ಆವೃತ್ತಿಗಳನ್ನು ಸಮುದಾಯದ ಒಳಿತಿಗಾಗಿ ಸಾರ್ವಜನಿಕರಿಗೆ ಬಿಡುಗಡೆಗೊಳಿಸುವ ಸ್ವಾತಂತ್ರ್ಯ. ಮೂಲ ಗ್ರಂಥ/ರೂಪ ನೋಡಲು (source code) ಮಾಡಿಕೊಡುವ ಪೂರ್ವ ಕರಾರು ಇದಕ್ಕೆ ಅನ್ವಯಿಸುತ್ತದೆ.

Non-Free ಅಥವಾ ಸ್ವತಂತ್ರ ಸಾಫ್ಟ್‌ವೇರ್ ಅಲ್ಲದ ಖಾಸಗಿ ಕಂಪೆನಿಗಳಿಂದ ಸೃಷ್ಟಿಸಲ್ಪಟ್ಟ ತಂತ್ರಾಂಶಗಳು ಯಾವುದೇ ರೀತಿಯ ಸ್ವಾತಂತ್ರ್ಯವನ್ನು ತನ್ನ ಬಳಕೆದಾರರಿಗೆ ನೀಡುವುದಿಲ್ಲ ಮತ್ತು ಅದರ ಕಾರ್ಯವೈಖರಿಯನ್ನು ಅರ್ಥ ಮಾಡಿಕೊಳ್ಳಲೂ ಬಿಡುವುದಿಲ್ಲ. ಎಫ್.ಎಸ್.ಎಫ್ ಪ್ರಕಾರ ಇದು ನೈತಿಕವಲ್ಲ. ಇದೆಲ್ಲದರ ಜೊತೆಗೆ ಸಾಫ್ಟ್‌ವೇರ್ ಪೇಟೆಂಟುಗಳನ್ನೂ ಮತ್ತು ಕಾಪಿರೈಟ್ ಕಾಯಿದೆಗಳಲ್ಲಿ ಹೇರಲ್ಪಡುವ ಇತರೆ ಅಧಿಕ ಮಿತಿಗಳನ್ನೂ ಎಫ್.ಎಸ್.ಎಫ್ ವಿರೋಧಿಸುತ್ತದೆ. ತಂತ್ರಾಂಶಗಳು ಏಕೆ ಮುಕ್ತವಾಗಿರಬೇಕು ಮತ್ತು ಸ್ವತಂತ್ರವಾಗಿರಬೇಕು ಹಾಗೂ ಮೇಲೆ ಹೇಳಿದ ಎಲ್ಲ 4 ಸ್ವಾತಂತ್ರ್ಯಗಳನ್ನೂ ನೀಡಬೇಕು ಎಂಬುದನ್ನು http://www.fsf.org/philosophy/shouldbefree.html ನಲ್ಲಿ ವಿವರಿಸಲಾಗಿದೆ.

ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಈ ಜಾಲತಾಣಗಳನ್ನು ಜಾಲಾಡಿ. http://www.gnu.org ಅಥವಾ http://www.fsf.org

ಒ.ಎಸ್.ಐ ತತ್ವಜ್ಞಾನ / ಓಪನ್ ಸೋರ್ಸ್ ಸಾಫ್ಟ್‌ವೇರ್ ಫಿಲಾಸಫಿ

ಇದು ಸ್ವತಂತ್ರ ತಂತ್ರಾಂಶ ಫಿಲಾಸಫಿಗಿಂತ ಸ್ವಲ್ಪ ಭಿನ್ನ. ಇದರ ಸಾಮಾನ್ಯ ಕಲ್ಪನೆ/ಉದ್ದೇಶ ಬಹಳ ಸುಲಭವಾದದ್ದು: ಪ್ರೋಗ್ರಾಮರ್‌ಗಳು ಯಾವುದೇ ತಂತ್ರಾಂಶದ ಮೂಲವನ್ನು (Source Code) ಓದಲು, ಹಂಚಿಕೊಳ್ಳಲು ಮತ್ತು ಮಾರ್ಪಡಿಸಲು ಸಾಧ್ಯವಾದಲ್ಲಿ, ತಂತ್ರಾಂಶ ಬೆಳೆಯುತ್ತದೆ. ಜನರು ಇವನ್ನು ಸುಧಾರಿಸುತ್ತಾರೆ, ತಮ್ಮ ಅವಶ್ಯಕತೆಗಳಿಗೆ ಅಳವಡಿಸಿಕೊಳ್ಳುತ್ತಾರೆ, ಅದರಲ್ಲಿನ ನ್ಯೂನತೆಗಳನ್ನು ಸರಿಪಡಿಸುತ್ತಾರೆ. ಮತ್ತು ಇದೆಲ್ಲಾ ನಡೆಯುವ ವೇಗವನ್ನು ನೋಡಿದರೆ, ಸಾಂಪ್ರದಾಯಿಕ ತಂತ್ರಾಂಶ ಅಭಿವೃದ್ಧಿಯ ನಿಧಾನಗತಿಯ ಬೆಳವಣಿಗೆಯ ವೇಗ ನಿಮ್ಮನ್ನು ಚಕಿತಗೊಳಿಸಬಹುದು.

ಓಪನ್‌ಸೋರ್ಸ್ ಇನಿಶಿಯೇಟಿವ್ (OSI) ತನ್ನ ಗಮನವನ್ನು ಶಕ್ತಿಶಾಲಿ, ನಂಬಿಕಾರ್ಹ ಮತ್ತು ಎಫ್.ಎಸ್.ಎಫ್ ಗಿಂತಲೂ ಹೆಚ್ಚು ಉದ್ಯಮ ಸ್ನೇಹಿಯಾದ ತಂತ್ರಾಂಶಗಳ ತಾಂತ್ರಿಕ ಮೌಲ್ಯಗಳ ಕಡೆಗೆ ಹರಿಸುತ್ತದೆ. ಸ್ವತಂತ್ರ ತಂತ್ರಾಂಶಗಳ ನೈತಿಕ ಸಮಸ್ಯೆಗಳ ಕಡೆ ಕಡಿಮೆ ಗಮನಹರಿಸಿ, ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳ ಹಂಚಿದ/ಹರಡಿದ (distributed) ಅಭಿವೃದ್ಧಿ ವಿಧಾನ ಪ್ರಾಯೋಗಿಕ ಉಪಯುಕ್ತತೆಯ ಕಡೆಗೆ ಹೆಚ್ಚು ಗಮನ ನೀಡುತ್ತದೆ.

ಈ ಎರಡೂ ಚಳುವಳಿಗಳ ಮೂಲ ತತ್ವಜ್ಞಾನಗಳು ಬೇರೆಯಾಗಿದ್ದರೂ, ಎಫ್.ಎಸ್.ಎಫ್ ಮತ್ತು ಓ.ಎಸ್.ಐ ಒಂದೇ ನೆಲೆಯನ್ನು ಹಂಚಿಕೊಂಡು ತಂತ್ರಾಂಶ ಅಭಿವೃದ್ಧಿ, ಖಾಸಗೀ ತಂತ್ರಾಂಶಗಳ ವಿರುದ್ಧ ದನಿ ಎತ್ತುವಿಕೆ, ತಂತ್ರಾಂಶ ಹಕ್ಕುಸಾಮ್ಯಗಳು (patents) ಮುಂತಾದ ಪ್ರಾಯೋಗಿಕ ನೆಲೆಗಳ ಮೇಲೆ ರಿಚರ್ಡ್ ಸ್ಟಾಲ್‌ಮನ್ ಹೇಳುವಂತೆ ಒಂದೇ ಸಮುದಾಯದ ಎರಡು ರಾಜಕೀಯ ಪಕ್ಷಗಳಂತೆ ಕೆಲಸ ಮಾಡುತ್ತವೆ.

ತಂತ್ರಾಂಶಗಳು – ಉಚಿತವೇ, ಕೊಳ್ಳಬೇಕೆ?

ಸ್ವತಂತ್ರ ತಂತ್ರಾಂಶಗಳು ಖಾಸಗಿ ಕಂಪೆನಿಗಳ ತಂತ್ರಾಂಶಗಳಿಗೆ ತದ್ವಿರುದ್ಧ. ಇವು ನಿಮಗೆ ಮುಕ್ತವಾಗಿ, ಸ್ವತಂತ್ರವಾಗಿ ದೊರೆಯುತ್ತವೆ. ಜಿಂಪ್, ಓಪನ್/ಲಿಬ್ರೆ ಆಫೀಸ್, ಇಂಕ್ ಸ್ಕೇಪ್ ಹೀಗೆ ಪ್ರತಿಯೊಂದೂ ತಂತ್ರಾಂಶಕ್ಕೂ ಸ್ವತಂತ್ರ ತಂತ್ರಾಂಶದ ಬದಲಿ ವ್ಯವಸ್ಥೆ ಇಂದು ಲಭ್ಯವಿದೆ. http://www.osalt.com/ ವೆಬ್ ಸೈಟ್ ನಲ್ಲಿ ನೀವು ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ಕಾಣಬಹುದು.

ವಿದ್ಯಾರ್ಥಿಗಳಿಗೆ ತಂತ್ರಾಂಶ

ಶೈಕ್ಷಣಿಕ ಬಳಕೆಗೆ ಬೇಕಿರುವ ಅನೇಕ ತಂತ್ರಾಂಶಗಳನ್ನು ಎಫ್.ಎಸ್.ಎಫ್ ನ ಈ ಕೊಂಡಿಯಲ್ಲಿ ಪಟ್ಟಿ ಮಾಡಲಾಗಿದೆ. http://directory.fsf.org/wiki/Category/Education

- ನಿಮಗೆ ಬೇಕಿರುವ ತಂತ್ರಾಂಶಕ್ಕೆ ಬದಲಿಯಾಗಿ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳು ಬೇಕೆಂದಲ್ಲಿ –
  - http://osalt.com/
  - http://www.opensourcealternative.org/
  - http://alternativeto.net/software/open-source-software-directory/

ಲಿನಕ್ಸ್ – ನೀವೂ ಬಳಸಬಹುದು

ಲೈವ್ ಸಿ.ಡಿ

ಸಾಮಾನ್ಯವಾಗಿ ಲಿನಕ್ಸ್ ಸಿ.ಡಿ ಕೈಗೆ ಸಿಕ್ಕ ತಕ್ಷಣ ಅದನ್ನು ಉಪಯೋಗಿಸಿ ನಿಮ್ಮ ಕಂಪ್ಯೂಟರ್ ಬೂಟ್ ಮಾಡಿ ಲಿನಕ್ಸ್‌ನಲ್ಲಿ ಕೆಲಸ ಮಾಡಬಹುದು. ಹೌದು, ಇನ್‌ಸ್ಟಾಲ್ ಮಾಡದೆಯೇ ಲಿನಕ್ಸ್ ಡೆಸ್ಕ್‌ಟಾಪ್ ನಿಮ್ಮ ಪರದೆಯ ಮುಂದೆ ಬರುತ್ತದೆ. ಲಿನಕ್ಸ್‌ನ ಎಲ್ಲ ಮುಖ್ಯ ಡಿಸ್ಟ್ರಿಬ್ಯೂಷನ್‌ಗಳು ಇಂದು ಲೈವ್ ಸಿ.ಡಿ ಆವೃತ್ತಿಯಲ್ಲಿ ಸಿಗುತ್ತವೆ.

ಉಬುಂಟು, ಫೆಡೋರ, ಓಪನ್ ಸುಸೆ, ಕ್ನಾಪಿಕ್ಸ್, ಲಿನಕ್ಸ್ ಮಿಂಟಗಳ ವೆಬ್ ಸೈಟ್ ಗಳಿಂದ ನೀವು ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಲೈವ್ ಯು.ಎಸ್.ಬಿ

ನಿಮ್ಮ ಬಳಿ ಯು.ಎಸ್.ಬಿ ಡ್ರೈವ್ ಇದೆಯೇ? ಅದನ್ನು ನಿಮ್ಮ ಕಂಪ್ಯೂಟರಿನಲ್ಲಿ ಲಿನಕ್ಸ್ ಬಳಸಲು ಉಪಯೋಗಿಸಬಹುದು. ಹೌದು, ಕಂಪ್ಯೂಟರಿಗೆ ನೇರವಾಗಿ ಲಿನಕ್ಸ್ ಇನ್‌ಸ್ಟಾಲ್ ಮಾಡಿಕೊಳ್ಳುವುದರ ಬದಲು ನಿಮ್ಮ ಬಳಿ ಇರುವ ಯು.ಎಸ್.ಬಿ ಬಳಸಬಹುದು.

Unetbootin ಎಂಬ ತಂತ್ರಾಂಶ ಬಳಸಿ ಲಿನಕ್ಸ್ ಸಿ.ಡಿಯನ್ನು ಯು.ಎಸ್.ಬಿ ಗೆ

ಇಳಿಸಿಕೊಳ್ಳಬಹುದಾಗಿದೆ. ಇತ್ತೀಚೆಗೆ ಲಿನಕ್ಸ್ ಡಿಸ್ಟ್ರಿಬ್ಯೂಷನ್‌ಗಳು ನೇರವಾಗಿ ಯು.ಎಸ್.ಬಿ ಗೆ ಎಂದೇ ಡೌನ್‌ಲೋಡ್‌ಗೆ ಸಿಗುತ್ತವೆ.

ಯು.ಎಸ್.ಬಿ ಬೂಟ್ ಮಾಡಲು ಮೊದಲೇ ಹೇಳಿದಂತೆ, POST ಸ್ಕ್ರೀನ್ ನಲ್ಲಿ ಸಿಗುವ ಬೂಟ್ ಆಪ್ಶನ್ ನ ಕೀ ಒತ್ತಿ ಯು.ಎಸ್.ಬಿ ಆಯ್ದುಕೊಂಡರಾಯ್ತು.

ವರ್ಚುಅಲೈಸೇಷನ್

ಇತ್ತೀಚೆಗೆ ಪೇಟೆಯಲ್ಲಿ ಸಿಗುವ ಕಂಪ್ಯೂಟರ್‌ಗಳ ಕಾರ್ಯಕ್ಷಮತೆ ಎಷ್ಟಿರುತ್ತದೆ ಎಂದರೆ, ಒಂದು ಆಪರೇಟಿಂಗ್ ಸಿಸ್ಟಂನ ಒಳಗೆ ಇನ್ನೂ ಒಂದೆರಡು ಆಪರೇಟಿಂಗ್ ಸಿಸ್ಟಂಗಳನ್ನು ನಡೆಸಬಹುದು. ಅಂದರೆ, ನೀವು ಮೂರು ನಾಲ್ಕು ಕಂಪ್ಯೂಟರ್ ಗಳನ್ನು ಇಟ್ಟುಕೊಂಡು ಬೇರೆಬೇರೆ ಆಪರೇಟಿಂಗ್ ಸಿಸ್ಟಂ ಇನ್‌ಸ್ಟಾಲ್ ಮಾಡಿ ಬಳಸುವ ಬದಲು, ವರ್ಚುಯಲೈಸೇಷನ್ ತಂತ್ರಜ್ಞಾನ ಬಳಸಿ ನಿಮ್ಮ ಮೂಲ ಆಪರೇಟಿಂಗ್ ಸಿಸ್ಟಂನೊಳಗೇ ಬೇರೆ ಬೇರೆ ಆಪರೇಟಿಂಗ್ ಸಿಸ್ಟಂಗಳ ವರ್ಚುಅಲ್ ಮೆಶಿನ್‌ಗಳ ಜೊತೆ ಕೆಲಸ ಮಾಡಬಹುದು.

ಉದಾ:– VMware, VirtualBox ನಂತಹ ಸಾಫ್ಟ್‌ವೇರ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಂಡು, ಅವುಗಳ ಮೂಲಕ ವಾಸ್ತವಿಕ/ವರ್ಚುಅಲ್ ವಾಗಿ ವಿಂಡೋಸ್ ನಲ್ಲಿ ಲಿನಕ್ಸ್, ಲಿನಕ್ಸ್ ನಲ್ಲಿ ವಿಂಡೋಸ್ ಆಪರೇಟಿಂಗ್ ಸಿಸ್ಟಂ ಗಳನ್ನು ಇನ್‌ಸ್ಟಾಲ್ ಮಾಡಿ ಉಪಯೋಗಿಸಬಹುದು. ಲಿನಕ್ಸ್ ಇನ್‌ಸ್ಟಾಲ್ ಮಾಡಿಕೊಂಡು ಉಪಯೋಗಿಸುವುದನ್ನು ಕಲಿಯ ಬೇಕು ಎಂದೆನಿಸಿದವರಿಗೆ ವರ್ಚುಅಲೈಸೇಷನ್ ಒಂದು ವರದಾನವೇ ಸರಿ.

ದಿನನಿತ್ಯದ ಕೆಲಸಗಳಲ್ಲಿ ಗ್ನು/ಲಿನಕ್ಸ್, FOSS ಬಳಕೆ

- ಕಲಿಕೆ ಹಾಗೂ ಸಂಶೋಧನೆ, ಸಂಪರ್ಕ ಹಾಗೂ ಸಂವಹನೆ, ತಂತ್ರಜ್ಞಾನ ಹಾಗೂ ತಂತ್ರಾಂಶ ಅಭಿವೃದ್ಧಿಯಲ್ಲಿ, ಮನರಂಜನೆಗಾಗಿ (ದೃಶ್ಯ, ಶ್ರಾವ್ಯ, ಆಟಗಳು ಇತ್ಯಾದಿ), ವಾಣಿಜ್ಯ ಉದ್ದೇಶಗಳು,
- ಅತ್ಯಾಧುನಿಕ ಅಂತರ್ಜಾಲ ಸೇವೆಗಳು (ಕ್ಲೌಂಡ್ ಕಂಪ್ಯೂಟಿಂಗ್ ಇತ್ಯಾದಿ....)
- ಮೊಬೈಲ್, ಟ್ಯಾಬ್ಲೆಟ್ ಇತ್ಯಾದಿಗಳಲ್ಲಿ ಸುಲಭವಾಗಿ ಬಳಸಲು ಸಾಧ್ಯವಾಗುವಂತೆ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳು ಇಂದು ಅಭಿವೃದ್ಧಿಗೊಂಡಿವೆ. ಎಲ್ಲರ ಕೈಗಳಲ್ಲಿರುವ ಆಂಡ್ರಾಯ್ಡ್ ಫೋನುಗಳು ಇದಕ್ಕೆ ಒಂದು ಉತ್ತಮ ಉದಾಹರಣೆ. ಲಿಬ್ರೆ ಆಫೀಸ್, ವಿ.ಎಲ್.ಸಿ, ಸ್ಟೆಲ್ಲೇರಿಯಂ ನಿಮ್ಮ ದಿನ ನಿತ್ಯದ ಡಿ.ಟಿ.ಪಿ, ಮನರಂಜನೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಅವಶ್ಯಕತೆಗಳನ್ನು ಪೂರೈಸುತ್ತವೆ.
- ಲಿನಕ್ಸ್ ಬಳಕೆಯ ಬಗ್ಗೆ ಹೆಚ್ಚಿನದನ್ನು ಲಿನಕ್ಸಾಯಣ.ನೆಟ್ (http://linuxaayana.net) ನಲ್ಲಿ ವಿಡಿಯೋಗಳ ಮೂಲಕ ತೋರಿಸಲಾಗಿದೆ.

ತಂತ್ರಜ್ಞಾನ ಮತ್ತು ತಂತ್ರಾಂಶ ಅಭಿವೃದ್ಧಿಯಲ್ಲಿ ಸಮುದಾಯದ ಪಾತ್ರ

ಸಮುದಾಯಗಳು ತಂತ್ರಜ್ಞಾನ ಮತ್ತು ತಂತ್ರಾಂಶ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರವಹಿಸುವುದರ ಮೂಲಕ ಸಾಮಾಜಿಕ ಜವಾಬ್ದಾರಿ, ಜ್ಞಾನದ ಹಂಚಿಕೆ, ತಂತ್ರಜ್ಞಾನ ಹಾಗೂ ತಂತ್ರಾಂಶ ಸ್ವಾತಂತ್ರ್ಯಕಾಪಾಡಿಕೊಳ್ಳುವುದು, ತಂತ್ರಜ್ಞಾನ ಕಲಿಕೆ, ತಂತ್ರಜ್ಞಾನ ಅಳವಡಿಸುವಿಕೆಯಲ್ಲಿ ಉಳಿತಾಯ ಹಾಗೂ ಅದರ ಗುಣಮಟ್ಟ ಕಾಯ್ದುಕೊಳ್ಳುವುದರ ಮೂಲಕ ತಮ್ಮ ಕೊಡುಗೆ ನೀಡಬಹುದು. ಇದರಿಂದ ಕೋಟ್ಯಾಂತರ ರೂಪಾಯಿ ತೆರಿಗೆ ಹಣ ಪೋಲಾಗುವುದನ್ನು ತಪ್ಪಿಸಲು ಸಾಧ್ಯವಿದೆ.

FOSS ಅಭಿವೃದ್ಧಿವಿಧಾನ (Development Methodology)

FOSS ಅಭಿವೃದ್ಧಿವಿಧಾನ ವಿಶಿಷ್ಟವಾದದ್ದು, ಇಂಟರ್ನೆಟ್ ಮತ್ತು ಸಮೂಹ ಸಾಧನಗಳ ಆವಿಷ್ಕಾರಗಳಿಂದ ಸಾಧ್ಯವಾಯಿತು. ಕಾಥಡ್ರೆಲ್ ಮತ್ತು ಬಜಾರ್ (https://en.wikipedia.org/wiki/The_Cathedral_and_the_Bazaar) ಎನ್ನುವ ಪುಸ್ತಕದಲ್ಲಿ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳ ಅಭಿವೃದ್ಧಿಯ ವಿಧಾನವನ್ನು ಸಾಂಪ್ರದಾಯಿಕ ತಂತ್ರಾಂಶ ಅಭಿವೃದ್ಧಿ ವಿಧಾನಗಳೊಂದಿಗೆ ತಾಳೆ ಹಾಕಿ ನೋಡಲಾಗಿದೆ.

ಸಾಂಪ್ರದಾಯಿಕ ತಂತ್ರಾಂಶ ಅಭಿವೃದ್ಧಿ ಪ್ರಾಚೀನ ಕಾಲದಲ್ಲಿ ಕಟ್ಟಲಾಗಿದ್ದ ಚರ್ಚುಗಳಂತೆ; ಹೇಗೆಂದರೆ, ಚಿಕ್ಕ ಚಿಕ್ಕ ಗುಂಪುಗಳಲ್ಲಿರುತ್ತಿದ್ದ ಕುಶಲಕರ್ಮಿಗಳು ಬಾಹ್ಯ ಪ್ರಪಂಚದಿಂದ ಬೇರ್ಪಟ್ಟು, ಗುಪ್ತವಾಗಿ ಚರ್ಚಿನ ಮಾದರಿಗಳನ್ನು, ಕಲಾಕೃತಿಗಳನ್ನು ರಚಿಸುತ್ತಿದ್ದರು ಮತ್ತು ಒಂಟಿಯಾಗಿ ನಿರ್ಮಿಸುತ್ತಿದ್ದರು. ಒಮ್ಮೆ ಕಟ್ಟಿದ ನಂತರ ಚರ್ಚುಗಳ ನಿರ್ಮಾಣದ ಕೆಲಸ ಸಂಪೂರ್ಣವಾಗಿರುತ್ತಿತ್ತು ಮತ್ತು ಕೆಲವೇ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾತ್ರ ಮಾಡಲಾಗುತ್ತಿತ್ತು. ಸಾಂಪ್ರದಾಯಿಕವಾಗಿ ತಯಾರಾಗುತ್ತಿದ್ದ ತಂತ್ರಾಂಶಗಳೂ ಕೂಡ ಇದೇ ರೀತಿ ಅಭಿವೃದ್ಧಿಗೊಳ್ಳುತ್ತಿದ್ದವು. ತಂತ್ರಾಂಶ ಪರಿಣಿತರ ತಂಡ ಎಚ್ಚರಿಕೆಯಿಂದ ಪೂರ್ವಸಿದ್ಧತೆಗಳ ಜೊತೆ ಅಭಿವೃದ್ಧಿಯನ್ನು ನಿಯಂತ್ರಣದಲ್ಲಿ ಇರಿಸಿಕೊಂಡು, ತಂತ್ರಾಂಶ ತಯಾರಾಗಿ ಜಗತ್ತಿಗೆ ಪರಿಚಿತವಾಗಿಸುವವರೆಗೆ ಇತರರಿಂದ ಪ್ರತ್ಯೇಕಗೊಂಡು ಕೆಲಸ ನಿರ್ವಹಿಸುತ್ತಿದ್ದರು. ಒಮ್ಮೆ ತಂತ್ರಾಂಶದ ಅಭಿವೃದ್ಧಿ ಕಾರ್ಯ ಮುಗಿದಿದೆ ಎಂದು ಖಾತ್ರಿಯಾದ ಮೇಲೆ ಅತಿ ಕಡಿಮೆ ಅಭಿವೃದ್ಧಿ ಕಾರ್ಯಗಳನ್ನು ಮಾತ್ರ ತಜ್ಞರ ತಂಡ ಮಾಡುವಂತೆ ನೋಡಿಕೊಳ್ಳಲಾಗುತ್ತದೆ.

ಇದಕ್ಕೆ ತದ್ವಿರುದ್ದವಾಗಿ, FOSS ಅಭಿವೃದ್ಧಿವಿಧಾನ ಬಜಾರ್ ಅಥವಾ ಮಾರುಕಟ್ಟೆ ಇದ್ದಹಾಗೆ, ಇದು ನಿಧಾನವಾಗಿ ಬೆಳೆಯುತ್ತಾ ಬರುತ್ತದೆ. ವ್ಯಾಪಾರಿಗಳು ಬರುವುದು, ತಮ್ಮ ಅಂಗಡಿಗಳನ್ನು ಕಟ್ಟಿ ತಮ್ಮ ವ್ಯವಹಾರವನ್ನು ಪ್ರಾರಂಭಿಸುವುದರ ಜೊತೆಗೆ ಮಾರುಕಟ್ಟೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದು, ಇದೆಲ್ಲ ಮಾರುಕಟ್ಟೆಯ ಆ ಗಲಾಟೆ ಗೊಂದಲಗಳ ನಡುವೆಯೇ ನೆಡೆದು ಹೋಗುತ್ತದೆ. ವ್ಯಾಪಾರಿಗಳು ತಮ್ಮ ವ್ಯವಹಾರ ಪ್ರಾರಂಭಿಸಲು ಬೇಕಾದ ಕನಿಷ್ಠ ಸೌಲಭ್ಯಗಳಿರುವ ಅಂಗಡಿಗಳನ್ನು

ತೆರೆದು, ವ್ಯವಹಾರ ಬೆಳೆದಂತೆ ಅಂಗಡಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಹಾಗೆ, ಮುಕ್ತ ಮತ್ತು ಸ್ವತಂತ್ರ ತಂತ್ರಾಂಶ ಯಾವುದೇ ವ್ಯವಸ್ಥಿತ ಯೋಜನೆ ಇಲ್ಲದೆ ಬೆಳೆಯಲು ಪ್ರಾರಂಭಿಸುತ್ತದೆ. ತಂತ್ರಾಂಶ ಪರಿಣಿತರು ತಾವು ಅಭಿವೃದ್ಧಿಪಡಿಸಲು ಸಾಧ್ಯವಾದ ಸಣ್ಣ ಪ್ರಮಾಣದ ತಂತ್ರಾಂಶಗಳ ಕೆಲಸ ಮಾಡುವಂತಹ ಸೋರ್ಸ್ ಕೋಡ್ ಅನ್ನು ಜನ ಸಾಮಾನ್ಯರಿಗೆ ಬಿಡುಗಡೆ ಮಾಡುತ್ತಾರೆ ಮತ್ತು ತಮಗೆ ಲಭಿಸಿದ ಪ್ರತಿಕ್ರಿಯೆಗಳ ಮುಖೇನ ಅದನ್ನು ಮುಂದೆ ಬದಲಿಸುವ ಅಥವಾ ಅದಕ್ಕೆ ಹೆಚ್ಚಿನ ಸವಲತ್ತುಗಳನ್ನು ಸೇರಿಸುವ ಕೆಲಸ ಮಾಡುತ್ತಾರೆ. ಇತರೆ ತಂತ್ರಾಂಶ ಅಭಿವೃದ್ಧಿಕಾರರು ಕೂಡ ಮುಂದೆ ಇವರ ಕೈ ಜೋಡಿಸುವ ಸಾಧ್ಯತೆಗಳೂ ಇವೆ. ಅವರು ಮೂಲ ಸೋರ್ಸ್‌ಕೋಡ್ ಪಡೆದು ಅದನ್ನು ತಮಗೆ ಇಷ್ಟವಾಗುವಂತೆ ಬದಲಾಯಿಸಿಕೊಂಡು, ನಂತರ ಮೂಲ ತಂತ್ರಾಂಶಕ್ಕೆ ಅದನ್ನು ಜೋಡಿಸುವ ಅಥವಾ ತಮ್ಮ ಆವೃತ್ತಿಯನ್ನೇ ಇತರರಿಗೆ ಲಭ್ಯವಾಗಿಸುತ್ತಾ ಹೋಗುತ್ತಾರೆ. ಈ ವಿಧಾನದಲ್ಲಿ ಮಾರುಕಟ್ಟೆಯಂತೆ ತಂತ್ರಾಂಶಗಳು, ಆಪರೇಟಿಂಗ್ ಸಿಸ್ಟಂಗಳು ಇತ್ಯಾದಿ ಅಭಿವೃದ್ಧಿ ಹೊಂದುತ್ತವಲ್ಲದೇ, ಹೊಸ ಆವಿಷ್ಕಾರಗಳಿಗೂ ಇವು ಕಾರಣವಾಗಬಲ್ಲವು.

ಬಜಾರ್‌ನಲ್ಲಿ ಲಭ್ಯವಾಗುವ ವಸ್ತುಗಳು ಮತ್ತು ಸೇವೆಗಳಲ್ಲಿ ಕಾಲಕಳೆದಂತೆ ನಮಗೆ ಕಾಣುವ ಪಕ್ವತೆ, ತಂತ್ರಾಂಶ ಅಭಿವೃದ್ಧಿಯಲ್ಲೂ ಕಾಣುತ್ತದೆ. ಅದರ ಮುಖ್ಯ ಅನುಕೂಲತೆಗಳು ಇಂತಿವೆ:

- ಶ್ರಮದ ಪುನರಾವರ್ತನೆಯಾಗುವುದನ್ನು ಕಡಿಮೆ ಮಾಡುತ್ತದೆ.
- ಇತರರು ಮಾಡಿರುವ ಸಂಶೋಧನೆ ಮತ್ತು ಕೆಲಸದ ಫಲಿತಾಂಶವನ್ನು ಬಳಸಿಕೊಂಡು ಕೆಲಸ ಮಾಡಲು ಸಾಧ್ಯವಾಗುತ್ತದೆ.
- ಉತ್ತಮ ಗುಣಮಟ್ಟ ಕಾಯ್ದುಕೊಳ್ಳಲು ನೆರವಾಗುತ್ತದೆ.
- ನಿರ್ವಹಣೆಯ ವೆಚ್ಚವನ್ನು ಕಡಿಮೆ ಮಾಡುತ್ತದೆ.

ಮುಕ್ತ ಜ್ಞಾನ ಭಂಡಾರಗಳು

ವಿಕಿಪೀಡಿಯ, ಕಣಜದಂತಹ ಮುಕ್ತ ಜ್ಞಾನ ಭಂಡಾರಗಳು ಕೂಡ ಮುಕ್ತ ಸಂಸ್ಕೃತಿಯ ಒಂದು ಭಾಗವಾಗಿದ್ದು, ಜನರೇ ಜನರಿಂದ, ಜನರಿಗಾಗಿ ಲಭ್ಯವಾಗಿಸಿಕೊಂಡಿರುವ ಯೋಜನೆಗಳು ಇವಾಗಿವೆ. ವಿದ್ಯಾರ್ಥಿಗಳು ಜ್ಞಾನ ಭಂಡಾರಗಳ ಮೂಲಕ ಜ್ಞಾನಾರ್ಜನೆ ಮಾತ್ರವಲ್ಲದೇ, ಅವುಗಳ ಮೂಲಕ ಸಂಶೋಧನೆ ಇತ್ಯಾದಿಗಳಿಗೆ ತೊಡಗಿ, ಜ್ಞಾನ ಭಂಡಾರಗಳನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗುವುದರಲ್ಲೂ ಪ್ರಮುಖ ಪಾತ್ರವಹಿಸಬಹುದು.

ವಿಕಿಪೀಡಿಯ

ಸ್ವತಂತ್ರವಾಗಿ ತನ್ನ ಇಚ್ಛಾನುಸಾರ ಭೂಮಿಯ ಮೇಲೆ ಜೀವಿಸುತ್ತಿರುವ ಮಾನವ, ತನ್ನಲ್ಲಿನ ತಿಳಿವಳಿಕೆಯನ್ನೂ ಹಾಗೆಯೇ ತನ್ನ ಮುಂದಿನ ತಲೆಮಾರುಗಳಿಗೆ ಹಂಚುತ್ತಾ ಬಂದಿದ್ದಾನೆ. ವೇದೋಪನಿಷತ್ತುಗಳು, ರಾಮಾಯಣ, ಮಹಾಭಾರತದಂತಹ ಪುರಾಣ ಕಥೆಗಳಿಂದ ಹಿಡಿದು, ಅಂತರಜಾಲದ ಮೂಲಕ ನಮ್ಮ ಅಂಗೈ ಸೇರುತ್ತಿರುವ ಡಿಜಿಟಲ್ ಎನ್‌ಸೈಕ್ಲೋಪೀಡಿಯಗಳು, ತಂತ್ರಜ್ಞಾನದ ಸಹಾಯ ಹೆಚ್ಚುತ್ತಿದ್ದಂತೆ ವ್ಯಾಪಾರದ ಹಾದಿಯನ್ನೂ ಹಿಡಿದಿರುವುದು ನಮ್ಮ ಕಣ್ಣಮುಂದಿದೆ. ಇದೆಲ್ಲದರ ನಡುವೆ ಅಂತರಜಾಲದಲ್ಲೇ ವಿಕಿಪೀಡಿಯ ಎಂಬ ಸ್ವತಂತ್ರ ವಿಶ್ವಕೋಶ ಮಾನವ ಸಮುದಾಯವನ್ನು ಒಟ್ಟುಗೂಡಿಸಿ, ಜಗತ್ತಿನ ಎಲ್ಲರ ಬಳಿ ಲಭ್ಯವಿರುವ ಮಾಹಿತಿಯನ್ನು ಒಟ್ಟುಗೂಡಿಸಲು, ಎಲ್ಲಾ ರೀತಿಯಲ್ಲೂ ಬಳಸಿಕೊಳ್ಳಲು, ಮಾರ್ಪಡಿಸಲು, ಚರ್ಚಿಸಲು, ಇತರರೊಡನೆ ಹಂಚಿಕೊಳ್ಳಲು ಸಾಧ್ಯವಾಗುವಂತಹ ವೇದಿಕೆಯನ್ನು ಸೃಷ್ಟಿಸಿ ಈಗಾಗಲೇ ಹನ್ನೆರಡು ವರ್ಷ ಕಳೆದಿದೆ.

ವಿಕಿಪೀಡಿಯ (www.wikipedia.org)– ಅಂತರಜಾಲದ ಒಂದು ಸ್ವತಂತ್ರ ವಿಶ್ವಕೋಶವಾಗಿದ್ದು, ವಿಶ್ವದ ಲಕ್ಷಾಂತರ ಮಂದಿ ಸ್ವಯಂಸೇವಕರ ಸಮುದಾಯವೊಂದು ಒಟ್ಟಿಗೆ ಸೇರಿ ಸಹಕಾರ ಮನೋಭಾವದಿಂದ ಸಂಪಾದಿಸಿದ್ದಾಗಿದೆ. ವಿಕಿಮೀಡಿಯ ಫೌಂಡೇಷನ್ ಎಂಬ ಲಾಭರಹಿತ ಸಂಸ್ಥೆಯ ಬೆಂಬಲದಿಂದ ಕಾರ್ಯಾಚರಣೆಯಲ್ಲಿರುವ ವಿಕಿಪೀಡಿಯದಲ್ಲಿ ಜಗತ್ತಿನ 287 ಭಾಷೆಗಳ 30 ಮಿಲಿಯನ್ ಲೇಖನಗಳಿವೆ. ಅದರಲ್ಲಿ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳೂ ಸೇರಿವೆ. ಇಂಟರ್ನೆಟ್ ಸಂಪರ್ಕವಿರುವ ಯಾರು ಬೇಕಾದರೂ ವಿಶ್ವದ ಯಾವುದೇ ಮೂಲೆಯಿಂದ ಯಾವುದೇ ಭಾಷೆಯ ವಿಕಿಪೀಡಿಯದಲ್ಲಿ, ಯಾವುದೇ ವಿಷಯದ ಲೇಖನಗಳ ಸಂಪಾದನೆಗೆ ತೊಡಗಿಸಿಕೊಳ್ಳಲು ಇಲ್ಲಿ ಅವಕಾಶವಿದೆ. ವಿಶ್ವಕೋಶದ ಪ್ರತಿಯೊಂದೂ ವಿಷಯಕ್ಕೆ ಆಕರವನ್ನು (Reference) ಸೂಚಿಸುವ ಇಂಟರ್ನೆಟ್‌ನ ಅತಿ ದೊಡ್ಡ ಮತ್ತು ಪ್ರಸಿದ್ಧ ತಾಣವಾಗಿ ವಿಕಿಪೀಡಿಯ ಎಲ್ಲರಿಗೂ ಚಿರಪರಿಚಿತ ಹಾಗೂ ಅತಿ ಹೆಚ್ಚು ಓದುಗರನ್ನು ಪಡೆದಿರುವ ವಿಶ್ವದ 6ನೇ ಮುಖ್ಯ ಜಾಲತಾಣ.

ಜ್ಞಾನ, ವಿಜ್ಞಾನ, ತಂತ್ರಜ್ಞಾನ, ತಂತ್ರಾಂಶಗಳನ್ನು ಸ್ವತಂತ್ರವಾಗಿ ಮತ್ತು ಮುಕ್ತವಾಗಿ ಇರುವಂತೆ ನೋಡಿಕೊಳ್ಳಲು ಪ್ರಾರಂಭವಾಗಿ, ಸಫಲವಾಗುತ್ತಿರುವ ಯೋಜನೆಗಳಲ್ಲಿ ವಿಕಿಪೀಡಿಯ ಕೂಡ ಒಂದು. ವಾಸ್ತವ ಜಗತ್ತಿನಲ್ಲೂ ಸಮುದಾಯವೊಂದನ್ನು ಕಟ್ಟಿ, ಅದರಲ್ಲೂ ಸ್ವಾತಂತ್ರ್ಯದ ಅಂಶವನ್ನು ಎತ್ತಿ ಹಿಡಿದಿರುವ ವಿಕಿಪೀಡಿಯ, ವಿಶ್ವದ

ಭಾಷೆಗಳನ್ನು ತನ್ನ ಒಡಲಲ್ಲಿರಿಸಿಕೊಂಡು, ಅವುಗಳ ಇತಿಹಾಸ, ಸಂಸ್ಕೃತಿಯನ್ನು ಮುಂದಿನ ಜನಾಂಗಕ್ಕಾಗಿ ಉಳಿಸುತ್ತಿದೆ.

ಜನವರಿ 15, 2001 ರಲ್ಲಿ ಅಂತರಜಾಲದ ಉದ್ಯಮಿ ಜಿಮ್ಮಿ ವೇಲ್ಸ್ ಮತ್ತು ತಂತ್ರಾಂಶ ಪರಿಣಿತ ಲ್ಯಾರಿ ಸ್ಯಾಂಗರ್ ವಿಕಿಪೀಡಿಯವನ್ನು ಪ್ರಾರಂಭಿಸಿದರು. ಆದರೆ ಇದರ ಪರಿಕಲ್ಪನೆ ಮತ್ತು ತಾಂತ್ರಿಕತೆ ಬಹು ಹಿಂದಿನದ್ದು.

ಜಿಮ್ಮಿ ವೇಲ್ಸ್ ಮತ್ತು ಸ್ಯಾಂಗರ್ ಉಚಿತ ಆನ್‌ಲೈನ್ ವಿಶ್ವಕೋಶವನ್ನು ಹೊರತರುವ ಉದ್ದೇಶದಿಂದ 2000ದಲ್ಲಿ ಜೊತೆಯಾಗಿ 'ನುಪೀಡಿಯ' ಯೋಜನೆಯನ್ನು ಪ್ರಾರಂಭಿಸುತ್ತಾರೆ. ಆಯಾ ವಿಷಯಗಳಲ್ಲಿ ಪರಿಣಿತರಾದವರನ್ನು ಒಂದುಗೂಡಿಸಿ, ಲೇಖನಗಳನ್ನು ಬರೆಯಿಸಿ, ಪುನರ್ವಿಮರ್ಶೆಗೆ ಒಳಪಡಿಸಿದ ನಂತರ ಮೈಕ್ರೋಸಾಫ್ಟ್ ಎನ್ಕಾರ್ಟಾ ಮತ್ತು ಎನ್ಸೈಕ್ಲೋಪೀಡಿಯ ಬ್ರಿಟಾನಿಕಾಗಳಿಗಿಂತ ಭಿನ್ನವಾಗಿ ಜನರಿಗೆ ಒದಗಿಸುವ ಉದ್ದೇಶವನ್ನು ನುಪೀಡಿಯ ಒಳಗೊಂಡಿತ್ತು.

ಅಂತರಜಾಲದಲ್ಲಿ ಆನ್ಲೈನ್ ಎನ್‌ಸೈಕ್ಲೋಪೀಡಿಯ ತರಬೇಕು ಎಂದು ಯೋಚಿಸಿದವರಲ್ಲಿ ಮೊದಲಿಗರಾದ ರಿಕ್ ಗೇಟ್ಸ್ 1993ರಲ್ಲೇ ಯೋಜನೆಯೊಂದನ್ನು ಸಿದ್ಧಪಡಿಸಿದ್ದರು. ವಿಶ್ವಕೋಶದ ಸಂಪಾದನೆಯು ಯಾವುದೇ ಸಂಸ್ಥೆಯ ಹಿಡಿತದಲ್ಲಿರಬಾರದು ಎನ್ನುವ ಉದ್ದೇಶವಿದ್ದ ಆನ್‌ಲೈನ್ ಸ್ವತಂತ್ರ ವಿಶ್ವಕೋಶವನ್ನು ಡಿಸೆಂಬರ್ 2000ದಲ್ಲಿ ಸ್ವತಂತ್ರ ತಂತ್ರಾಂಶದ ಹರಿಕಾರ ರಿಚರ್ಡ್ ಸ್ಟಾಲ್‌ಮನ್ ಪ್ರತಿಪಾದಿಸಿದ್ದರು.

ವಾರ್ಡ್ ಕನ್ನಿಂಗಾಮ್ 1995ರಲ್ಲಿ ಅಭಿವೃದ್ಧಿಪಡಿಸಿದ್ದ ಪ್ರಖ್ಯಾತ 'ವಿಕಿ' ತಂತ್ರಜ್ಞಾನವನ್ನು ತಮ್ಮ ನುಪೀಡಿಯದಲ್ಲಿ ಬಳಸಿದ್ದ ಜಿಮ್ಮಿ ವೇಲ್ಸ್ ಮತ್ತು ಲ್ಯಾರಿ ಸ್ಯಾಂಗರ್, ಅಂತರಜಾಲದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸ್ಟಾಲ್‌ಮನ್‌ರ ಪರಿಕಲ್ಪನೆಗಳನ್ನು ಗಮನಿಸಿ, ತಮ್ಮ ನುಪೀಡಿದ ಲೇಖನಗಳ ಕೃತಿಸಾಮ್ಯವನ್ನು GFDL(GNU Free Documentation License) ಲೈಸೆನ್ಸ್‌ಗೆ 2001ರಲ್ಲಿ ಬದಲಿಸಿದರು. ಇದನ್ನು ಲ್ಯಾರಿ ಸ್ಯಾಂಗರ್ 'ವಿಕಿಪೀಡಿಯ' ಎಂದು ಹೆಸರಿಟ್ಟರು. ನುಪೀಡಿಯಗೆ ಸಹಾಯವಾಗುವಂತೆ ಸಂಪಾದಕರು ಲೇಖನಗಳ ಚರ್ಚೆಗೆ ಬಳಸಿಕೊಳ್ಳಲು ಇದನ್ನು ಮೊದಲು ಪ್ರಾರಂಭಿಸಿದರೂ, ಅಂತರಜಾಲದಲ್ಲಿ ಯಾವುದೇ ಸ್ಥಳದಿಂದ ಸಂಪಾದನೆಗೆ ತೊಡಗುವುದರ ಜೊತೆಗೆ ಇತರರೊಡನೆ ವಿಷಯಾದಾರಿತ ಚರ್ಚೆ ಇತ್ಯಾದಿಗಳಿಗೆ ಅತ್ಯಂತ ಸೂಕ್ತವಾಗಿದ್ದ ವಿಕಿಪೀಡಿಯ ಮುಂದಿನ ದಿನಗಳಲ್ಲಿ ನುಪೀಡಿಯವನ್ನು ಹಿಂದಿಕ್ಕಿತು. 2003ರಲ್ಲಿ ನುಪೀಡಿಯ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸಮಯದಲ್ಲಿ ಕೇವಲ 24 ಲೇಖನಗಳನ್ನು ಸೃಷ್ಟಿಸಲು ಶಕ್ತವಾಗಿದ್ದರೆ, ವಿಕಿಪೀಡಿಯ ಇದೇ ಸಮಯದಲ್ಲಿ 20,000 ಲೇಖನಗಳನ್ನು ಸಮುದಾಯ ಸಹಕಾರದಿಂದ ಸಂಪಾದಿಸಿತ್ತು.

ಲೇಖನಗಳನ್ನು ಯಾರು ಬೇಕಾದರೂ ಸಂಪಾದಿಸಬಹುದು ಎನ್ನುವ ಅಂಶವನ್ನು ಬೆಂಬಲಿಸಿದ ಸಮುದಾಯಕ್ಕೆ ಪ್ರತಿಕ್ರಿಯಿಸಿದ ಜಿಮ್ಮಿವೇಲ್ಸ್ ನುಪೀಡಿಯವನ್ನು

ಸಂಪೂರ್ಣವಾಗಿ ಮುಚ್ಚಿ ವಿಕಿಪೀಡಿಯಕ್ಕೆ ಹೆಚ್ಚಿನ ಬೆಂಬಲವನ್ನು ನೀಡಲು ನಿರ್ಧರಿಸಿದರು. ಇದನ್ನು ಒಪ್ಪದ ಲ್ಯಾರಿ ಸ್ಯಾಂಗರ್, ವಿಕಿಪೀಡಿಯ ಯೋಜನೆಯಿಂದ ಹೊರನಡೆದರು. ಅಂದಿನಿಂದ ಇಂದಿನವರೆಗೆ ಮಾಧ್ಯಮ ಇತ್ಯಾದಿಗಳ ಮೂಲಕ ಅನೇಕ ವಿಮರ್ಶಾತ್ಮಕ ಪ್ರಶ್ನೆಗಳನ್ನು ಎದುರಿಸುತ್ತಾ, ತನ್ನ ಕಾರ್ಯನೀತಿಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತಾ ಮುಕ್ತ, ಸ್ವತಂತ್ರ ಹಾಗೂ ಆನ್‌ಲೈನ್ ವಿಶ್ವಕೋಶವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮುದಾಯವೊಂದರ ಮೂಲಕ ಕಟ್ಟಲು ವಿಕಿಪೀಡಿಯ ಅನುವು ಮಾಡಿಕೊಟ್ಟಿತು. ಎರಡು ತಿಂಗಳಲ್ಲಿ ಜರ್ಮನ್ ನಂತರ ಫ್ರೆಂಚ್, ಚೀನಿ, ಡಚ್, ಹಿಬ್ರೂ, ಇಟಾಲಿಯನ್, ರಷಿಯನ್ ಭಾಷೆಗಳಲ್ಲೂ ವಿಕಿಪೀಡಿಯ ಪ್ರಾರಂಭವಾಯಿತು.

ಆರಂಭದಲ್ಲಿ ಭಾರತೀಯ ಭಾಷೆಗಳು ವಿಕಿಪೀಡಿಯದಲ್ಲಿ ಕಾಣದಿದ್ದರೂ, ಜೂನ್ 2002ರಲ್ಲಿ ಪಂಜಾಬಿ, ಅಸ್ಸಾಮಿ ಹಾಗೂ ಒರಿಯಾ ಭಾಷೆಗಳ ಮೂಲಕ ಭಾರತೀಯರಿಗೆ ದೊರೆಯುವಂತಾದವು. ಕನ್ನಡ ವಿಕಿಪೀಡಿಯಕ್ಕೆ (http://kn.wikipedia.org) ಜೂನ್ 12, 2003ರಲ್ಲಿ ಸೇರ್ಪಡೆಯಾಗಿದ್ದು, ಇದುವರೆಗೆ ಹದಿನಾಲ್ಕು ಸಾವಿರ ಲೇಖನಗಳನ್ನು ಒಳಗೊಂಡಿದೆ.

ಸಮುದಾಯ

ವಿಕಿಪೀಡಿಯ ಸಮುದಾಯ, ಅದರ ಸಾಮಾನ್ಯ ಓದುಗನಿಂದ ಹಿಡಿದು, ಬರಹಗಳನ್ನು ಸಂಪಾದನೆ ಮಾಡುವ, ವಿಕಿಮೀಡಿಯ ಫೌಂಡೇಶನ್‌ನ ಒಡಗೂಡಿ, ಅದನ್ನು ನಡೆಸಲು ಬೇಕಾಗುವ ತಂತ್ರಜ್ಞರು, ನಿರ್ವಾಹಕರು ಮುಂತಾದವರನ್ನು ಒಳಗೊಂಡಿದೆ. ಇವರೆಲ್ಲರನ್ನೂ ವಿಕಿಪೀಡಿಯನ್ನರು ಎಂದು ಕರೆಯಲಾಗುತ್ತದೆ.

ವಿಶ್ವದ ಅನೇಕ ಭಾಗಗಳಲ್ಲಿ ಜನರು ಸ್ಥಳೀಯ ವಿಕಿ ಸಮುದಾಯಗಳನ್ನು ಕಟ್ಟಿಕೊಂಡು ವಿಕಿಪೀಡಿಯದ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ತಮ್ಮ ಭಾಷೆಯ ವಿಕಿಪೀಡಿಯ ಕಟ್ಟಲು ಹೊಸಬರನ್ನು ಅಣಿಗೊಳಿಸುವ ಕೆಲಸದ ಜೊತೆಗೆ ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶದ ಅಭಿವೃದ್ಧಿಯ ಮೇಲೆ ಆಸಕ್ತಿ ತೋರಿಸುವವರಿಗೆ ಹ್ಯಾಕತಾನ್(Hackathon)ಗಳನ್ನೂ, ವಿಷಯ ಸಂಪಾದನೆಗೆ ಎಡಿಟಥಾನ್(Editathon) ಆಯೋಜಿಸುತ್ತಾರೆ. ಸಮುದಾಯಕ್ಕೆ ಕೊಡುಗೆ ನೀಡುವುದರ ಜೊತೆಗೆ, ತಂತ್ರಜ್ಞಾನ ಅಭಿವೃದ್ಧಿ ಮತ್ತು ಅಧ್ಯಯನಕ್ಕೂ ಇದು ಹೆಚ್ಚಿನ ಅವಕಾಶಗಳನ್ನು ಕಂಡುಕೊಂಡಿರುವ ಅನೇಕರು ವಿಕಿಪೀಡಿಯ ಸಮುದಾಯದಲ್ಲಿದ್ದಾರೆ. ಇದೇ ಕಾರಣಕ್ಕಾಗಿ ಇಂದು ಅನೇಕ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ವಿಕಿಪೀಡಿಯವನ್ನು ತಮ್ಮ ಶಿಕ್ಷಣ ವ್ಯವಸ್ಥೆಯಲ್ಲೂ ಬಳಸಲು ಮುಂದೆ ಬಂದಿದ್ದು, ತಮ್ಮ ವಿದ್ಯಾರ್ಥಿಗಳನ್ನು ವಿಕಿಪೀಡಿಯದ ಸಂಪಾದನೆಯಲ್ಲಿ ತೊಡಗಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ.

ವಿಕಿಮೀಡಿಯ ಫೌಂಡೇಷನ್

ವಿಕಿಮೀಡಿಯ ಫೌಂಡೇಶನ್ ಒಂದು ಲಾಭರಹಿತ ಸಂಸ್ಥೆಯಾಗಿದ್ದು ವಿಕಿಪೀಡಿಯ ನಡೆಸಲು ಬೇಕಿರುವ ತಂತ್ರಜ್ಞಾನ, ಸರ್ವರ್‌ಗಳು ಹಾಗೂ ಇತರೆ ಸಂಪನ್ಮೂಲಗಳನ್ನು ಒಂದುಗೂಡಿಸುವ ಕೆಲಸವನ್ನು ಮಾಡುತ್ತದೆ. ವಿಕಿಪೀಡಿಯದ ಸಾಮಾನ್ಯ ಬಳಕೆದಾರರಿಂದ ಸಂಗ್ರಹಿಸಲಾಗಿದ್ದ ದೇಣಿಗೆ ಅಲ್ಲದೆ, ಇದರ ಜನಪ್ರಿಯತೆಯಿಂದಾಗಿ ಇತ್ತೀಚೆಗೆ ಅನೇಕ ಸರ್ಕಾರಗಳು ಹಾಗೂ ಕಾರ್ಪೋರೇಟ್ ಸಂಸ್ಥೆಗಳು ವಿಕಿಮೀಡಿಯ ಫೌಂಡೇಷನ್‌ಗೆ ಸಹಾಯ ಮಾಡಲು ಮುಂದೆ ಬರುತ್ತಿವೆ. ವಿಕಿಪೀಡಿಯದ ಯೋಜನೆಯ ಬೆಳವಣಿಗೆಗೆ ಕಾರ್ಯತಂತ್ರಗಳನ್ನು ರೂಪಿಸುವುದು, ಅವುಗಳ ನಿರ್ವಹಣೆ, ತಂತ್ರಜ್ಞಾನದ ಅಭಿವೃದ್ಧಿ, ಕಾನೂನು ಇತ್ಯಾದಿಗಳತ್ತ ಕೂಡ ಫೌಂಡೇಷನ್ ಗಮನ ಹರಿಸುತ್ತದೆ.

ಭಾಗವಹಿಸುವಿಕೆ, ಲೇಖನಗಳ ಸಂಪಾದನೆ

ವಿಕಿಪೀಡಿಯದಲ್ಲಿ ತಮ್ಮದೊಂದು ಬಳಕೆದಾರನ ಹೆಸರನ್ನು ನೊಂದಾಯಿಸಿಕೊಳ್ಳುವುದರ ಮೂಲಕ ಯಾರು ಬೇಕಾದರೂ ಸಂಪಾದಕರಾಗಬಹುದು ಮತ್ತು ತಮಗೆ ಇಷ್ಟವಾದ ವಿಷಯಗಳ ಸಂಪಾದನೆಯಲ್ಲಿ ತೊಡಗಬಹುದು. ವಿಕಿಪೀಡಿಯದ ಎಲ್ಲಾ ಯೋಜನೆಗಳಿಗೆ (ಎಲ್ಲಾ ಭಾಷೆಗಳನ್ನೂ ಒಳಗೊಂಡಂತೆ) ಈ ಬಳಕೆದಾರನ ಹೆಸರೊಂದೇ ಸಾಕಾಗುವುದು.

ವಿದ್ಯಾರ್ಥಿಗಳು ಹಾಗೂ ತಂತ್ರಜ್ಞರಾಗಿದ್ದಲ್ಲಿ ವಿಕಿಪೀಡಿಯದ ತಂತ್ರಾಂಶ, ಸರ್ವರ್ ಇತ್ಯಾದಿಗಳನ್ನು ನೋಡಿಕೊಳ್ಳುತ್ತಿರುವ ಇತರೆ ವಿಕಿಪೀಡಿಯನ್ನರನ್ನು ಸೇರಬಹುದು. ವಿಕಿಪೀಡಿಯದ ಮೂಲ ಸ್ವತಂತ್ರ ತಂತ್ರಾಂಶ 'ಮೀಡಿಯ ವಿಕಿ' ಅಭಿವೃದ್ಧಿಗೆ ಕೂಡ ಸಹಾಯ ಮಾಡಬಹುದು. ಭಾಷಾಪರಿಣಿತರಾಗಿದ್ದಲ್ಲಿ, ಮಾತೃಭಾಷೆಗೆ ಸಂಬಂಧಿಸಿದ ಅನೇಕ ತಂತ್ರಜ್ಞಾನ ಹಾಗೂ ತಂತ್ರಾಂಶಗಳ ಅಭಿವೃದ್ಧಿಗೂ ಕೂಡ ವಿಕಿಪೀಡಿಯ ಒಂದು ಉತ್ತಮ ವೇದಿಕೆ.

ಲೇಖನಗಳ ಸಂಪಾದನೆಗೆ ತೊಡಗಲು, ನಿಮ್ಮ ಇಷ್ಟದ ವಿಷಯವೊಂದನ್ನು ಆರಿಸಿಕೊಳ್ಳಿ. ಅದನ್ನು ವಿಕಿಪೀಡಿಯದಲ್ಲಿ ಹುಡುಕಾಟ ನಡೆಸಿದಲ್ಲಿ ಸಂಬಂಧಿಸಿದ ವಿಷಯ ಈಗಾಗಲೇ ಲಭ್ಯವಿದ್ದಲ್ಲಿ ಅದರ ಪುಟ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಇಲ್ಲವಾದಲ್ಲಿ ಆ ಪುಟವನ್ನು ಪ್ರಾರಂಭಿಸಲು ನಮಗೆ ಸೂಚಿಸುವ ಕೊಂಡಿ ನಮ್ಮ ಪರದೆಯ ಮೇಲೆ ಮೂಡುತ್ತದೆ. ಈ ಕೊಂಡಿಯನ್ನು ಕ್ಲಿಕ್ಕಿಸುವುದರ ಮೂಲಕ ವಿಕಿಪೀಡಿಯಕ್ಕೆ ಹೊಸ ಲೇಖನವೊಂದನ್ನು ಸೇರಿಸುವ ನಮ್ಮ ಕಾರ್ಯ ಪ್ರಾರಂಭವಾಗುತ್ತದೆ. ಈಗಾಗಲೇ ಲೇಖನ ಲಭ್ಯವಿದ್ದರೆ, ಪುಟದ ಮೇಲ್ಭಾಗದಲ್ಲಿ ಕಾಣುವ ಸಂಪಾದಿಸಿ ಎಂಬ ಕೊಂಡಿಯನ್ನು ಕ್ಲಿಕ್ಕಿಸಿ ಲೇಖನವನ್ನು ಅಭಿವೃದ್ಧಿಪಡಿಸಲು ಅನುವಾಗಬಹುದು.

ವಿಕಿಪೀಡಿಯದ ಯಾವುದೇ ಲೇಖನಕ್ಕೆ ವಿಷಯಗಳನ್ನು ಸೇರಿಸುವಾಗ, ನಮ್ಮ ಮಾಹಿತಿಯನ್ನು ದೃಢೀಕರಿಸುವ ಸೂಕ್ತ ಉಲ್ಲೇಖಗಳನ್ನು ಸೇರಿಸುವುದು ಬಹುಮುಖ್ಯ.

ನಾವು ಸೇರಿಸುವ ಉಲ್ಲೇಖಗಳು ವಿಕಿಪೀಡಿಯದ ಕಾರ್ಯನೀತಿಯಾದ 'ನಿಷ್ಪಕ್ಷಪಾತ ದೃಷ್ಟಿಕೋನ'ವನ್ನು ಎತ್ತಿ ಹಿಡಿಯುವುದರ ಜೊತೆಗೆ, ಲೇಖನಗಳನ್ನು ವಿಶ್ವಾಸಾರ್ಹವೂ ಮತ್ತು ಸಂಪದ್ಭರಿತವೂ ಆಗುವಂತೆ ಮಾಡುತ್ತವೆ.

ವಿಕಿಪೀಡಿಯದಲ್ಲಿ ಇರುವ ಯಾವುದೇ ವಿಷಯಗಳ ಬಗ್ಗೆ ದ್ವಂದ್ವ, ಸಂಶಯ, ಪ್ರಶ್ನೆಗಳು ಇದ್ದಲ್ಲಿ ಯಾರುಬೇಕಾದರೂ ಆ ಲೇಖನದ ಚರ್ಚಾ ಪುಟದಲ್ಲಿ ಚರ್ಚೆಯೊಂದನ್ನು ಪ್ರಾರಂಭಿಸುವುದರ ಮೂಲಕ, ಸಮುದಾಯದ ಸಹಾಯದಿಂದ ಲೇಖನದ ತಪ್ಪುಒಪ್ಪುಗಳನ್ನು ಒಟ್ಟಿಗೆ ಸೇರಿ ತಿದ್ದಬಹುದಾಗಿದೆ.

ವಿಕಿಪೀಡಿಯ ಬಳಗದ ಇತರೆ ಯೋಜನೆಗೆಳು

ವಿಕಿಪೀಡಿಯ ಕೇವಲ ಮಾಹಿತಿಕೋಶವಾಗಿ ಉಳಿಯದೆ ಮೀಡಿಯ, ಉಕ್ತಿಗಳು (ವಿಕಿಮೀಡಿಯ ಕಾಮನ್ಸ್), ಸುದ್ದಿ (ವಿಕಿ ನ್ಯೂಸ್), ಮುಕ್ತ ಸಾಹಿತ್ಯ (ವಿಕಿ ಸೋರ್ಸ್), ಮುಕ್ತ ಪುಸ್ತಕಗಳು(ವಿಕಿ ಬುಕ್ಸ್), ಜೈವಿಕ ಮಾಹಿತಿ ಕಣಜ (ವಿಕಿ ಸ್ಪೀಷೀಸ್), ಸ್ವತಂತ್ರ ನಿಘಂಟು (ವಿಕ್ಷನರಿ) ಹೀಗೆ ಹತ್ತು ಹಲವಾರು ಯೋಜನೆಗಳಿಗೆ ಆಶ್ರಯ ನೀಡಿದೆ. ಈ ಎಲ್ಲ ಯೋಜನೆಗಳು, ಎಲ್ಲ ಭಾಷೆಯ ವಿಕಿಪೀಡಿಯಗಳಿಗೂ ಲಭ್ಯವಿರುವುದು ವಿಶೇಷ.

ವಿಕಿಮೀಡಿಯ ಕಾಮನ್ಸ್ ಮುಕ್ತವಾಗಿ ಬಳಸಿಕೊಳ್ಳಬಹುದಾದ ಮಿಲಿಯಾಂತರ ಚಿತ್ರಗಳು, ದೃಶ್ಯ, ಶ್ರಾವ್ಯ ಮಾಹಿತಿಗಳನ್ನು ಒಳಗೊಂಡಿದ್ದು, ವಿಕಿಪೀಡಿಯದ ಬಹು ಮುಖ್ಯ ಯೋಜನೆಯಾಗಿದೆ.

ವಿಕಿಪೀಡಿಯ ಮಾಹಿತಿಯ ಬಳಕೆ ಮತ್ತು ಕೃತಿ ಸ್ವಾಮ್ಯಗಳು

ವಿಕಿಪೀಡಿಯದ ಮಾಹಿತಿಯು ಕ್ರಿಯೇಟೀವ್ ಕಾಮನ್ಸ್ (Creative Commons Attribution-ShareAlike 3.0 Unported License) ಮತ್ತು ಜಿ.ಎಫ್.ಡಿ.ಎಲ್ ಲೈಸೆನ್ಸ್‌ಗಳನ್ನು ಬಳಸಿಕೊಳ್ಳುತ್ತದೆ. ಈ ಕೃತಿ ಸ್ವಾಮ್ಯಗಳು ಮಾಹಿತಿಯನ್ನು ವಿಕಿಪೀಡಿಯದಿಂದ ಪಡೆದದ್ದು ಎಂದು ಉಲ್ಲೇಖಿಸಿ, ಮೂಲಪುಟದ ಕೊಂಡಿಯೊಡನೆ ನಕಲು ಮಾಡಿ ಹಂಚಿಕೊಳ್ಳಬಹುದು ಮತ್ತು/ಅಥವಾ ಬದಲಿಸಿಕೊಳ್ಳಲು ಅನುಮತಿಯನ್ನು ನೀಡುತ್ತದೆ. ಜಿ.ಎಫ್.ಡಿ.ಎಲ್ ಲೈಸೆನ್ಸ್‌ನಡಿ ಬರುವ ಲೇಖನಗಳನ್ನು ಯಾವುದೇ ಬದಲಾವಣೆಗಳಿಲ್ಲದೆ, ಮುಖ ಪುಟ ಅಥವಾ ಕೊನೆಯ ಪುಟದ ಪಠ್ಯದ ಜೊತೆಗೆ ಬಳಸಿಕೊಳ್ಳಬಹುದು.

ತುಳು ಮತ್ತು ಕೊಂಕಣಿ ವಿಕಿಪೀಡಿಯಗಳೂ ಸೇರಲಿವೆ

ಕನ್ನಡದ ಜೊತೆಗೆ ಕರ್ನಾಟಕದ ಕಡಲತೀರ ಪ್ರದೇಶಗಳಲ್ಲಿ ಬಳಸುವ ತುಳು ಮತ್ತು ಕೊಂಕಣಿ ಭಾಷೆಗಳೂ ವಿಕಿಪೀಡಿಯಾದ ಇನ್‌ಕ್ಯುಬೇಟರ್‌ನಲ್ಲಿ ಬೆಳೆಯುತ್ತಿವೆ. ತುಳು ಮತ್ತು ಕೊಂಕಣಿ ಭಾಷಿಕರು ಕೈಜೋಡಿಸಿದ್ದೇ ಆದಲ್ಲಿ ಇವನ್ನೂ ಮುಂದೆ ಪರಿಪೂರ್ಣವಾಗಿ ನೋಡುವ ಕಾಲ ದೂರವಿಲ್ಲ.

ಮೊಬೈಲ್‌ನಲ್ಲೂ ವಿಕಿಪೀಡಿಯ

ಮೊಬೈಲ್‌ನಲ್ಲೂ ಕೂಡ ವಿಕಿಪೀಡಿಯ ಲೇಖನವನ್ನು ಓದಬಹುದು. ಅದಕ್ಕೆಂದೇ ಇರುವ ವಿಕಿಪೀಡಿಯ ಅಪ್ಲಿಕೇಷನ್ ಅನ್ನು ಗೂಗಲ್ ಆಂಡ್ರಾಯ್ಡ್‌ನಲ್ಲಿ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಐ.ಒಎಸ್ ನಲ್ಲೂ ಇದಕ್ಕೆ ಸಂಬಂಧಪಟ್ಟ ತಂತ್ರಾಂಶಗಳಿವೆ. ಅದೇನೂ ಇಲ್ಲದೆಯೂ ವಿಕಿಪೀಡಿಯ ಬ್ರೌಸ್ ಮಾಡಿದಲ್ಲಿ, ಅದರ ಮೊಬೈಲ್ ಆವೃತ್ತಿ ನಮ್ಮ ಫೋನ್ ಪರದೆಯ ಮೇಲೆ ತೆರೆದುಕೊಳ್ಳುವಂತಹ ವ್ಯವಸ್ಥೆ ಇದೆ. ಮೊಬೈಲ್ ಅಪ್ಲಿಕೇಷನ್ನುಗಳು ಈಗಾಗಲೇ ಅನೇಕ ಭಾಷೆಗಳ ವಿಕಿಪೀಡಿಯಗಳನ್ನು ಅದೇ ಭಾಷೆಯಲ್ಲಿ ಓದುವ ಅವಕಾಶ ಮಾಡಿಕೊಟ್ಟಿವೆ.

ಎಸ್.ಎಂ.ಎಸ್, ಜಿ.ಪಿ.ಆರ್.ಎಸ್ ಮೂಲಕವೂ

ಅನೇಕ ದೇಶಗಳಲ್ಲಿ ಮಾಹಿತಿಯನ್ನು ಸುಲಭವಾಗಿ ಹರಿದುಬಿಡುವ ಮೂಲಕ ಜನರ ಜ್ಞಾನಾರ್ಜನೆಗೆ ಕಾರಣವಾಗಬಹುದು ಎಂದು ವಿಕಿಪೀಡಿಯ ಜೀರೋ ಎಂಬ ಯೋಜನೆ ತೋರಿಸಿಕೊಟ್ಟಿದ್ದು, ಎಸ್.ಎಂ.ಎಸ್ ಮತ್ತು ಮೊಬೈಲ್ ಇಂಟರ್ನೆಟ್ ಮೂಲಕ ಮುಕ್ತವಾಗಿ ವಿಕಿಪೀಡಿಯ ಮಾಹಿತಿ ಒದಗಿಸಲು ಅನೇಕ ಮೊಬೈಲ್ ಸೇವಾ ಕಂಪೆನಿಗಳು ಮುಂದೆ ಬರುತ್ತಿವೆ.

ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶ ಹಾಗೂ ನಾವು

ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶಗಳು ನಾವು ಖರೀದಿಸಿದ ಕಂಪ್ಯೂಟರ್ ಇತ್ಯಾದಿ ಹಾರ್ಡ್‌ವೇರ್‌ಗಳನ್ನು ನಡೆಸಲು ಬಳಸುವ ತಂತ್ರಾಂಶಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದರ ಜೊತೆಗೆ, ಬಳಕೆದಾರನಿಗೆ ಆಯ್ಕೆ, ಅಭಿವೃದ್ಧಿ, ಹಂಚಿಕೆ ಹೀಗೆ ಅನೇಕ ಸ್ವಾತಂತ್ರ್ಯಗಳನ್ನು ಅವನಿಗೆ ನೀಡುತ್ತವೆ. ಖಾಸಗಿ ಕಂಪೆನಿಯೊಂದರ ತಂತ್ರಾಂಶದ ಜೊತೆ ತನ್ನಂತಾನೇ ಬಂದಿಯಾಗುವುದನ್ನು ತಪ್ಪಿಸುತ್ತದೆ. ಇದು ಖಾಸಗಿ ಕಂಪೆನಿ ಮುಚ್ಚುವುದರಿಂದ, ಅಥವಾ ತಂತ್ರಾಂಶ ಅಭಿವೃದ್ಧಿ ಹೊಂದಿದಂತೆಲ್ಲಾ, ಮತ್ತೆ ಹೊಸ ತಂತ್ರಾಂಶ ಕೊಳ್ಳುವ ನಷ್ಟದಿಂದ ಬಳಕೆದಾರರನ್ನು ಸಂರಕ್ಷಿಸುತ್ತದೆ. ಇತ್ತೀಚಿನ ಗ್ನು/ಲಿನಕ್ಸ್ ತಂತ್ರಾಂಶ ಕೂಡ ಹಳೆಯ ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್ ಅನ್ನು ಸುಲಭವಾಗಿ ಕಾರ್ಯಾಚರಣೆಗೆ ಒಳಪಡಿಸಬಲ್ಲದು. ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರವಾದ ಭಾರತಕ್ಕೆ ತನ್ನ ಸರ್ಕಾರೀ ಸೇವೆಗೆ ಬಳಸಿಕೊಳ್ಳುತ್ತಿರುವ ಕಂಪ್ಯೂಟರುಗಳ ನಿರ್ವಹಣೆಯನ್ನು ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶಗಳಲ್ಲಿ ಮಾಡಿದ್ದೇ ಆದಲ್ಲಿ, ಕೋಟಿಗಟ್ಟಲೆ ಹಣ ಹೊರ ದೇಶಗಳ ಖಾಸಗಿ ಕಂಪೆನಿಗಳ ಕಿಸೆ ತುಂಬುವುದು ತಪ್ಪುತ್ತದೆ. ನಮ್ಮ ತೆರಿಗೆ ಹಣ ದೇಶದ ಅಭಿವೃದ್ಧಿಗೆ ಲಭ್ಯವಿರುತ್ತದೆ. ಈ ನಿಟ್ಟಿನಲ್ಲಿ ರಷ್ಯಾ, ಚೀನಾ ಇತರೆ ದೇಶಗಳು ತಮ್ಮದೇ ಗ್ನು/ಲಿನಕ್ಸ್ ಆಪರೇಟಿಂಗ್ ಸಿಸ್ಟಂಗಳನ್ನು ದೇಶದ ಕಂಪ್ಯೂಟರೀಕರಣದಲ್ಲಿ ಬಳಸಿಕೊಂಡು ಮೊದಲ ಹೆಜ್ಜೆ ಇಟ್ಟಿವೆ. ನಮ್ಮಲ್ಲಿನ್ನೂ ಆ ಕಾರ್ಯ ನಿಧಾನವಾಗಿ ನಡೆದಿದೆ.

ಯಾವುದೇ ಒಂದು ತಂತ್ರಾಂಶಕ್ಕೆ ಒಗ್ಗಿಕೊಳ್ಳುವುದು, ನಾವದನ್ನು ಉಪಯೋಗಿಸುವುದರ ಮೇಲೆ ಅವಲಂಬಿತವಾಗಿದೆ. ನಮ್ಮ ಪಕ್ಕದಲ್ಲಿ ಅದನ್ನು ಅರಿತವರು ದೊರೆತರೆ ಯಾವುದನ್ನೂ ಕಲಿಯುವುದು ನಮಗೆ ಸುಲಭಸಾಧ್ಯ. ಜೊತೆಗೆ ಶಾಲಾಕಾಲೇಜುಗಳಲ್ಲಿ ಭೋದನೆಗೆ ಅಳವಡಿಸಿಕೊಂಡಲ್ಲಿ, ಮುಂದೆ ಯಾವುದೇ ಕೆಲಸಕ್ಕೆ ಬೇಕಾದ ನುರಿತ ಕೆಲಸಗಾರರು ಲಭ್ಯರಿರುತ್ತಾರೆ.

ಶಾಲಾಕಾಲೇಜುಗಳ ಹೊರನಿಂತು ನೋಡಿದರೂ ಇಂದಿನ ಯುವ ಪೀಳಿಗೆಗೆ ಪ್ರಾಯೋಗಿಕವಾಗಿ ಹೊಸತನ್ನು ಕಲಿಯುವ, ಹೊಸತನ್ನು ಅಭಿವೃದ್ಧಿಪಡಿಸುವ ವಿಪುಲ ಅವಕಾಶಗಳಿವೆ. ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶಗಳ ಬೆಳವಣಿಗೆಗಳನ್ನು ಗಮನಿಸಿದಾಗ ನಮ್ಮ ಸಮಾಜಕ್ಕೆ ಬೇಕಾದ ತಂತ್ರಾಂಶ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ನಮ್ಮ ಯುವಕ ಯುವತಿಯರು ಮುಂದಾಗಿ, ಈಗಾಗಲೇ ಲಭ್ಯವಿರುವ ಮಾಹಿತಿಗಳನ್ನು ಇಂಟರ್‌ನೆಟ್ ಮೂಲಕ ಪಡೆದು, ಮುಕ್ತ ತಂತ್ರಾಂಶ ಸಮುದಾಯಗಳತ್ತ ಮುಖಮಾಡಿ ಸಮಾನಮನಸ್ಕರ ಜೊತೆಗೂಡಿ ಕೆಲಸ ಮಾಡಬಹುದಾಗಿದೆ. ಇದರಿಂದ ಸ್ವಾವಲಂಬನೆ ದೊರೆಯುವುದಲ್ಲದೇ, ನಮ್ಮದೇ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿಕೊಂಡು ಸಮಾಜವನ್ನೂ ಬಲಪಡಿಸಿದ ಹೆಮ್ಮೆ ನಮ್ಮದಾಗುತ್ತದೆ. ಗೂಗಲ್ ಕಂಪೆನಿ ಪ್ರತಿವರ್ಷ 'ಗೂಗಲ್ ಸಮ್ಮರ್ ಆಫ್ ಕೋಡ್' ಎಂಬ ಯೋಜನೆಯ ಮೂಲಕ ತಾಂತ್ರಿಕ ಪರಿಣಿತಿ ಹೊಂದಿದ, ಹೊಂದಿಲಿಚ್ಚಿಸುವ ಅನೇಕರಿಗೆ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶಗಳ ಮೇಲೆ ಕೆಲಸಮಾಡಲು ಅವಕಾಶ ಮಾಡಿಕೊಡುತ್ತದೆ. ಮುಖ್ಯವಾಗಿ ವಿದ್ಯಾರ್ಥಿಗಳನ್ನು ಉದ್ದೇಶವಾಗಿಟ್ಟಿಕೊಂಡಿರುವ ಇಂತಹ ಯೋಜನೆಯ ಬಗ್ಗೆ ಕಾಲೇಜು ವಿದ್ಯಾರ್ಥಿಗಳು ತಿಳಿಯುವುದು ಒಳಿತು.

ಮುಕ್ತ ತಂತ್ರಾಂಶಗಳು ಕೆಲವೊಮ್ಮೆ ಹವ್ಯಾಸಕ್ಕೆಂದು ಬರೆದರೂ, ನಂತರ ಮಿಲಿಯನ್‌ಗಟ್ಟಲೆ ಹಣವನ್ನು ದುಡಿಯುವ ಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ನೆರವಾದವು. ಅನೇಕರಿಗೆ ಉದ್ಯೋಗಾವಕಾಶಗಳನ್ನೂ ಕಲ್ಪಿಸಿಕೊಟ್ಟವು.

ಜೊತೆಗೆ `Free Culture' ಅಥವಾ 'ಮುಕ್ತ ಸಂಸ್ಕೃತಿ'ಯನ್ನು ಪಸರಿಸಿದ ಈ ಆಂದೋಲನ ಇಂದು ಮತ್ತು ನಾಳೆಗೆ ಬೇಕಿರುವ ಜ್ಞಾನ ಬಂಡಾರವನ್ನು ನಮ್ಮ ಮುಂದೆ ಇಟ್ಟಿದೆ. Free Culture ಬಗ್ಗೆ ಹೆಚ್ಚು ತಿಳಿಯಲು ಲಾರೆನ್ಸ್ ಲೆಸ್ಸಿಗ್ ಬರೆದ ಈ ಪುಸ್ತಕ ಓದಿ. ಇದು ಮುಕ್ತವಾಗಿ ನಿಮಗೆ ಲಭ್ಯವಿದೆ.

http://en.wikipedia.org/wiki/Free_Culture_(book)

ಸರ್ಕಾರಿ ಕಾರ್ಯತಂತ್ರವನ್ನು ನಡೆಸಲು, ಸಾಮಾಜಿಕ ಚಟುವಟಿಕೆಗಳನ್ನು ನೆಡೆಸುವ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಪತ್ರಿಕೋದ್ಯಮ, ಖಾಸಗಿ ಹಾಗೂ ಸರ್ಕಾರೀ ಸಂಘಸಂಸ್ಥೆಗಳು, ಸಾರ್ವಜನಿಕರು ಇಂದು ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶಗಳ ಮೊರೆ ಹೋಗಿ ದೈನಂದಿನ ಕೆಲಸ ಕಾರ್ಯಗಳಿಗೆ ಬೇಕಿರುವ ತಂತ್ರಾಂಶಗಳನ್ನು ಪಡೆಯಬಹುದು. ಲಭ್ಯವಿಲ್ಲದಲ್ಲಿ ಸಮುದಾಯವನ್ನು ಸಂಪರ್ಕಿಸಲು ಪ್ರಯತ್ನಿಸಿದಲ್ಲಿ ಉತ್ತರ ಸಿಗುವುದು ಖಾತ್ರಿ. ಇದಕ್ಕೆ ಉದಾಹರಣೆಗಳು ನಮ್ಮ ಮುಂದಿವೆ.

ಕರ್ನಾಟಕದಲ್ಲಿ ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶದ ಅರಿವನ್ನು ಹೆಚ್ಚಿಸುವ, ಬಳಕೆ, ಅನುಸ್ಥಾಪನೆ, ಇತ್ಯಾದಿಗಳ ಬಗ್ಗೆ ಅರಿವನ್ನು ಹಂಚಿಕೊಳ್ಳುವ ಕೆಲಸ ಹೆಚ್ಚಬೇಕಿದೆ. ಸರಕಾರದ ಮಟ್ಟದಲ್ಲಿ ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶದ ಅವಲಂಬನೆಯ ಬಗ್ಗೆ ಕಾರ್ಯೋನ್ಮುಖವಾಗಬೇಕಿದೆ. ಕನ್ನಡ ಟೈಪಿಸುವುದು, ಓದುವುದು ಮಾತ್ರವಲ್ಲದೇ ಇತರೆ ತಂತ್ರಾಂಶಗಳನ್ನು ತನ್ನ ಸರ್ಕಾರೀ ಕೆಲಸಗಳಿಗೆ ತಾನೇ ಅಭಿವೃದ್ಧಿಪಡಿಸಿಕೊಳ್ಳುತ್ತಾ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸರ್ಕಾರೀ ಶಾಲೆ ಇತ್ಯಾದಿಗಳಲ್ಲಿ ಮುಕ್ತ ತಂತ್ರಾಂಶವನ್ನು ವಿತರಿಸುವುದಲ್ಲದೇ, ಅದನ್ನು ಬಳಸಲು ಬೇಕಿರುವ ಕುಶಲತೆ, ಮಾತೃಭಾಷೆಯಲ್ಲಿ ಅದಕ್ಕೆ ಬೇಕಿರುವ ಆಕರ ಪಠ್ಯ, ಇತ್ಯಾದಿಗಳನ್ನು ಮೊದಲು ಶಿಕ್ಷಕರಿಗೆ ಕರಗತ ಗೊಳಿಸಿ, ಅವರನ್ನು ಸಬಲರನ್ನಾಗಿಸಿ ನಂತರ ಮಕ್ಕಳಿಗೂ ಅದರ ಅರಿವು ಮೂಡುವಂತೆ ಮಾಡಬೇಕಿದೆ. ಕಾಲೇಜು ಪಠ್ಯದಲ್ಲಿ ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶಗಳ ಬೋಧನೆಯ ಜೊತೆ ಅದನ್ನು ಪ್ರಾಯೋಗಿಕ ಕಲಿಕೆಯಲ್ಲಿ ಬಳಸಿಕೊಳ್ಳುತ್ತಾ ವಿದ್ಯಾರ್ಥಿಗಳು ಸಮಾಜಕ್ಕೆ ಕೊಡುಗೆಗಳನ್ನು ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಹೇಗೆ ಪ್ರಾರಂಭಿಸಬಹುದು ಎಂಬುದನ್ನು ಒತ್ತಿ ಹೇಳಬೇಕಿದೆ. ಇದು ಅತ್ಯಂತ ಕಠಿಣ ಕೆಲಸವಾಗಿದ್ದು, ಯುವ ಜನಾಂಗ ಇದರಲ್ಲಿ ತಮ್ಮ ಕೊಡುಗೆಯನ್ನು ನೀಡಬಹುದು.

ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶದ ಅಭಿವೃದ್ಧಿಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಎಂದರೆ ಕನ್ನಡದಲ್ಲಿ ಎಲ್ಲ ತಂತ್ರಾಂಶಗಳು ಇರಬೇಕು ಎಂಬುದು ಮಾತ್ರವಲ್ಲ. ಕನ್ನಡಿಗರಿಗೆ ಬೇಕಿರುವ ಎಲ್ಲ ತರಹದ ತಂತ್ರಾಂಶಗಳು, ಅಂದರೆ ದೈನಂದಿನ ಚಟುವಟಿಕೆ, ಕಲಿಕೆ, ಅಭಿವೃದ್ಧಿ, ಅನ್ವೇಷಣೆ, ಆವಿಷ್ಕಾರ ಇತ್ಯಾದಿಗಳಿಗೆ ಬೇಕಾದ ಸವಲತ್ತುಗಳನ್ನು ಕನ್ನಡಿಗರು ಸುಲಭದಲ್ಲಿ ಗ್ರಹಿಸಿ, ತಾವಾಗೇ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಸ್ವಾವಲಂಬಿಗಳಾಗುವತ್ತ ಮುನ್ನೆಡೆಯುವುದು. ಕಂಪ್ಯೂಟರ್, ಮೊಬೈಲ್ ಇಷ್ಟೇ ಅಲ್ಲದೆ ಶಾಲೆ, ಕಾಲೇಜು, ಅಂಗಡಿ, ಆಸ್ಪತ್ರೆ, ಬ್ಯಾಂಕ್ ಹೀಗೆ ಹತ್ತು ಹಲವಾರು ಸ್ಥಳಗಳಲ್ಲಿ ದುಡಿಯುವ, ಕಲಿಯುವ ಕನ್ನಡಿಗನಿಗೆ ಕನ್ನಡ ತಂತ್ರಾಂಶಗಳ ಕೊರತೆ ಇರಬಾರದು, ಇದ್ದರೂ ಅದು ಹೊರೆಯಾಗದಂತೆ ಮುಕ್ತವಾಗಿ, ಸ್ವತಂತ್ರವಾಗಿ ದೊರೆಯುವಂತಾಗಬೇಕು.

ನಮಗೆ ತಿಳಿದ ಹಾಗು ತಿಳಿಯದ ವಿಷಯಗಳ ಬಗ್ಗೆ ವಿಚಾರವಿನಿಮಯ ಮಾಡುವ – ಹರಟೆ ಕಟ್ಟೆಯನ್ನು ಕಲಿಕೆಯ ಕಟ್ಟೆಯನ್ನಾಗಿಸುವ ಸಂಸ್ಕೃತಿ (ನಮ್ಮ ಹಿರಿಯ ಸಾಹಿತಿಗಳು ಕನ್ನಡ ಸಾಹಿತ್ಯವನ್ನು ಕಟ್ಟಲು ಈ ಕೆಲಸ ಮಾಡುತ್ತಿದ್ದುದನ್ನು ಕೇಳಿದ್ದೇನೆ)ಯನ್ನು ನಾವು ಬೆಳೆಸಬೇಕಿದೆ. ಇದರ ಮುಖೇನ ಹೊಸ ಜನಾಂಗಕ್ಕೆ ವೈಜ್ಞಾನಿಕ, ತಾಂತ್ರಿಕ ಕುಶಲತೆಯನ್ನು ಕೊಂಡೊಯ್ಯಲು ಸಾಧ್ಯ. ಮುಕ್ತ ತಂತ್ರಾಂಶದ ಸಮುದಾಯದ ಬೆಳವಣಿಗೆಗೆ ಇಂತಹ ವೇದಿಕೆಗಳು ಮುಖ್ಯ, ಕೊನೆಗೆ ಇದರ ಫಲವನ್ನು ಅನುಭವಿಸುವವರೂ ನಾವೇ ಅಲ್ಲವೇ?

ಚಿತ್ರ: ವಿಕಿಪೀಡಿಯದ ವಿಕಿಮೀಡಿಯ ಕಾಮನ್ಸ್‌ನಿಂದ
ಕ್ರಿಯೇಟೀವ್ ಕಾಮನ್ಸ್ ಲೈಸೆನ್ಸ್‌ನಡಿಯಲ್ಲಿ ಪಡೆದಿದೆ.

ಯುನಿಕೋಡ್ : ಏಕೆ? ಹೇಗೆ?

ಡಾ॥ ಯು.ಬಿ.ಪವನಜ

ಯುನಿಕೋಡ್ ಎಂಬುದು ಒಂದು ಸಂಕೇತೀಕರಣದ ಶಿಷ್ಟತೆ. ಗಣಕದಲ್ಲಿ ಯಾವುದೇ ಅಕ್ಷರವನ್ನೂ ಸಂಗ್ರಹಿಸಿಡುವುದು ಅಂಕೆಗಳ ಮೂಲಕ. ಪ್ರಪಂಚದ ಎಲ್ಲ ಭಾಷೆಗಳ ಎಲ್ಲ ಅಕ್ಷರಕ್ಕೂ ತನ್ನದೇ ಆದ ಒಂದು ವಿಶಿಷ್ಟ ಮತ್ತು ಏಕಮಾತ್ರ ಸಂಖ್ಯೆಯ ಮೂಲಕ ಸಂಕೇತೀಕರಣ ಮಾಡುವ ವಿಧಾನವೇ ಯುನಿಕೋಡ್.

ಆಸ್ಕಿ ಮತ್ತು ಇಸ್ಕಿ

ಗಣಕದಲ್ಲಿ ಮಾಹಿತಿಯನ್ನು ವ್ಯಕ್ತಪಡಿಸುವುದು ವಿದ್ಯುತ್ತಿನ ಸ್ಥಿತಿಯ ಮೂಲಕ. ವಿದ್ಯುತ್ತಿಗೆ ಎರಡೇ ಸಾಧ್ಯತೆಗಳಿರುವುದು –ಇದೆ ಅಥವಾ ಇಲ್ಲ. ವಿದ್ಯುತ್ ಇದೆ ಎಂದರೆ 'ಒಂದು', ಇಲ್ಲ ಎಂದರೆ 'ಸೊನ್ನೆ' ಎಂದು ತೆಗೆದುಕೊಂಡರೆ ಒಂದು ಬಿಟ್‌ನಲ್ಲಿ 0 ಅಥವಾ 1 ಅನ್ನು ಸೂಚಿಸಬಹುದು. ಅಂದರೆ ಗಣಕದಲ್ಲಿ ಮೂಲತಃ ಎರಡೇ ಅಂಕೆಗಳನ್ನು ಬಿಂಬಿಸುವ ಸಾಧ್ಯತೆಗಳಿರುವುದು. ಗಣಕದಲ್ಲಿ ಮಾಹಿತಿ ಸಂಗ್ರಹಣೆಯ ಸಂಕೇತೀಕರಣಕ್ಕೆ ಬಳಸುವ ಹಳೆಯ ಶಿಷ್ಟತೆ ಆಸ್ಕಿ (ASCII = American Standards Code for Information Interchange). ಆಸ್ಕಿ 8 ಬಿಟ್‌ಗಳನ್ನು ಹೊಂದಿದೆ. ಗಣಕದಲ್ಲಿ ಮಾಹಿತಿಯ ಒಂದು ತುಣಕೇ ಬಿಟ್ (bit = binary digit). ಒಂದು ಅಕ್ಷರವನ್ನು ಶೇಖರಿಸಲು ಎರಡು ಬಿಟ್‌ಗಳನ್ನು ತೆಗೆದುಕೊಂಡರೆ ಒಟ್ಟು ನಾಲ್ಕು ಸಾಧ್ಯತೆಗಳಿವೆ –00, 01, 10 ಮತ್ತು 11 (ದ್ವಿಮಾನ). ಇವು ದಶಮಾನ ಪದ್ಧತಿಯಲ್ಲಿ 0, 1, 2, 3 ಆಗುತ್ತವೆ. ಆಸ್ಕಿ ಮತ್ತು ಇಸ್ಕಿಗಳು 8 ಬಿಟ್‌ಗಳನ್ನು ಬಳಸುತ್ತವೆ. 8 ಬಿಟ್‌ಗಳನ್ನು ಬಳಸುವ ಯಾವುದೇ ಸಂಕೇತೀಕರಣ ವಿಧಾನವು 256 (2^8 = 256) ಅಕ್ಷರಗಳನ್ನು ಮಾತ್ರವೇ ಹೊಂದಿರಬಲ್ಲುದು. ಇಷ್ಟು ಸ್ಥಾನ ಇಂಗ್ಲಿಷ್ ಮತ್ತು ಯುರೋಪಿಯನ್ ಭಾಷೆಗಳಿಗೆ ಸಾಕು. ಇಂಗ್ಲಿಷ್ ಭಾಷೆಯಲ್ಲಿ ಮೂಲಾಕ್ಷರಗಳನ್ನು ಒಂದರ ಪಕ್ಕ ಒಂದು ಒಂದು ಬರೆದರೆ ಸಾಕು, ಪದಗಳು, ವಾಕ್ಯಗಳು ತಯಾರಾಗುತ್ತವೆ.

ಕನ್ನಡ ಭಾಷೆಯಲ್ಲಿ ಮೂಲಾಕ್ಷರಗಳಿಂದ ಗುಣಿತಾಕ್ಷರಗಳನ್ನು ಮಾಡುವಾಗ ಅವುಗಳ ರೂಪ ಬದಲಾವಣೆ ಆಗುತ್ತದೆ. ಉದಾಹರಣೆಗೆ ಇಂಗ್ಲಿಷಿನಲಿ s,h,r,i, ಸೇರಿ shri ಆಗುತ್ತದೆ. ಅಂದರೆ ಅಕ್ಷರಗಳನ್ನು ಪಕ್ಕಪಕ್ಕ ಜೋಡಿಸಿ ಬರೆದರೆ ಮುಗಿಯಿತು. ಆದರೆ ಕನ್ನಡದಲ್ಲಿ ಶ್, ರ್, ಈ ಸೇರಿ ಶ್ರೀ ಆದಾಗ ಅದರ ರೂಪ ಬದಲಾವಣೆ ಆಗುತ್ತದೆ.

ಗಣಕದ ಮೂಲ ಭಾಷೆ ಕನ್ನಡವೂ ಅಲ್ಲ, ಇಂಗ್ಲೀಷ್ ಅಂತು ಅಲ್ಲವೇ ಅಲ್ಲ. ಗಣಕವು ಆಂತರಿಕವಾಗಿ ಬಳಸುವ ಭಾಷೆ ಒಂದು ಮತ್ತು ಸೊನ್ನೆ. ಆದುದರಿಂದಲೇ

ಗಣಕಕ್ಕೆ ಡಿಜಿಟಲ್ ಕಂಪ್ಯೂಟರ್ ಎಂಬ ಹೆಸರಿರುವುದು. ಇಂಗ್ಲೀಷ್ ಭಾಷೆಯ **'k'** ಆಗಲಿ, ಕನ್ನಡದ 'ಕ' ಆಗಲಿ, ಕೊನೆಗೆ ಅಂಕೆಗಳಾಗಿ ಮಾರ್ಪಟ್ಟು ಗಣಕದಲ್ಲಿ ಶೇಖರಣೆಗೊಳ್ಳುತ್ತವೆ. ಇಂಗ್ಲೀಷ್ ಭಾಷೆ ಮತ್ತು ಭಾರತೀಯ ಭಾಷೆಗಳನ್ನು ಗಣಕದಲ್ಲಿ ಬಳಸುವಲ್ಲಿ ಒಂದು ಮುಖ್ಯ ವ್ಯತ್ಯಾಸವಿದೆ. ಇಂಗ್ಲೀಷಿನ ಯಾವುದೇ ಅಕ್ಷರವನ್ನು ತೆಗೆದುಕೊಳ್ಳಿ. ಅದನ್ನು ಗಣಕದಲ್ಲಿ ಸಂಗ್ರಹಿಸಿಡಲು ಮತ್ತು ತೋರಿಸಲು ಒಂದೇ ಸಂಕೇತ ಸಾಕಾಗುತ್ತದೆ. ಭಾರತೀಯ ಭಾಷೆಗಳ ಪರಿಸ್ಥಿತಿ ಬೇರೆ. 'ಕ' ಎನ್ನುವ ಅಕ್ಷರವನ್ನು ಸಂಗ್ರಹಿಸಿಡಲು ಒಂದು ಸಂಕೇತ ಸಾಕು. ಆದರೆ **'ಕ'** ಎಂಬ (ಅಕ್ಷರದ) ಚಿತ್ರ ಮೂಡಿಬರಲು **'ಕ'** ಮತ್ತು **'ʼ'** ಎಂಬ ಎರಡು ಅಕ್ಷರಭಾಗಗಳ (glyph) ಜೋಡಣೆಯಾಗಬೇಕು. ಈ ಅಕ್ಷರಭಾಗಗಳು ಒಟ್ಟು ಸೇರಿ ಅಕ್ಷರಶೈಲಿ (font) ಆಗುತ್ತದೆ. ಇಂಗ್ಲೀಷ್ ಭಾಷೆಗೆ ಈ ಸಮಸ್ಯೆ ಇಲ್ಲ. **'k'** ಎನ್ನುವ ಅಕ್ಷರವನ್ನು ಸಂಗ್ರಹಿಸಿಡಲು ಒಂದು ಸಂಕೇತಾಕ್ಷರ ಸಾಕು. ಇದನ್ನು ತೋರಿಸಲು ಒಂದು ಅಕ್ಷರಭಾಗ ಸಾಕು. ಆದುದರಿಂದ ಇಂಗ್ಲೀಷ್ ಭಾಷೆಯಲ್ಲಿ ಸಂಗ್ರಹಣೆಯ ಸಂಕೇತ ಮತ್ತು ಅಕ್ಷರಶೈಲಿಯ ಅಕ್ಷರಭಾಗಗಳ ಸಂಕೇತ ಒಂದೇ ಆಗಿರುತ್ತದೆ. ಇವೆಲ್ಲ ಟ್ರೂಟೈಪ್ ಫಾಂಟ್‌ಗಳಿಗೆ ಅನ್ವಯವಾಗುವಂತಹವು. ಅದರ ಬಗ್ಗೆ ಮುಂದೆ ವಿವರಿಸಲಾಗಿದೆ.

ಕನ್ನಡ ಮತ್ತು ಇತರೆ ಭಾರತೀಯ ಭಾಷೆಗಳಿಗೆ ಎರಡು ರೀತಿಯ ಸಂಕೇತಗಳು ಬೇಕು. ಸಂಗ್ರಹಣೆಗೆ ಒಂದು, ತೋರಿಕೆಗೆ ಇನ್ನೊಂದು. ಮಾಹಿತಿ ಸಂಗ್ರಹಣೆಗೆ ಭಾರತೀಯ ಭಾಷೆಗಳಿಗೆ ಒಂದು ಶಿಷ್ಟತೆ ಇದೆ. ಇದನ್ನು ಸಿದ್ಧಪಡಿಸಿ ಕಾನೂನುಬದ್ಧಗೊಳಿಸಿದವರು ಕೇಂದ್ರ ಸರಕಾರದವರು. ಇದನ್ನು ಇಸ್ಕಿ (ISCII = Indian Script Code for Information Interchange) ಎಂದು ಕರೆಯುತ್ತಾರೆ.

ಕನ್ನಡ ಭಾಷೆಯಲ್ಲಿ 49 ಅಕ್ಷರಗಳಿವೆ. ಜೊತೆಗೆ ಸ್ವರ ಚಿಹ್ನೆಗಳಿವೆ. ಇಂಗ್ಲೀಷ್ ಭಾಷೆಯಲ್ಲಿ 26 (ಮತ್ತು 26) ಅಕ್ಷರಗಳಿವೆ. ಬರೆವಣಿಗೆಯ ಚಿಹ್ನೆ, ಅಂಕೆ, ಇತ್ಯಾದಿಗಳೆಲ್ಲ ಒಟ್ಟು ಸೇರಿದರೂ 256ಕ್ಕಿಂತ ಕಡಿಮೆಯೇ. ಹಾಗಿದ್ದಲ್ಲಿ 256 ಸಂಕೇತಗಳು ಸಾಕಲ್ಲವೇ? ಇಸ್ಕಿಯಲ್ಲಿ ಮಾಹಿತಿಯನ್ನು ಸಂಗ್ರಹಿಸುವಾಗ ಇಂಗ್ಲೀಷ್ ಮತ್ತು ಒಂದು ಭಾರತೀಯ ಭಾಷೆಯನ್ನು ಬಳಸಬಹುದು. ಅಂದರೆ ಕನ್ನಡ, ಹಿಂದಿ, ತಮಿಳು, ತೆಲುಗು, ಹೀಗೆ ಹಲವು ಭಾಷೆಗಳನ್ನು ಒಂದೇ ಕಡತದಲ್ಲಿ ಸಂಗ್ರಹಿಸುವುದು ಅಸಾಧ್ಯ.

ಇಸ್ಕಿಯಲ್ಲಿ ಭಾರತದ ಎಲ್ಲ ಭಾಷೆಗಳಿಗೆ ಒಂದೇ ಸಂಕೇತ ನೀಡಲಾಗಿದೆ. ಅಂದರೆ ಕನ್ನಡದ 'ಕ' ಮತ್ತು ಹಿಂದಿಯ 'ಕ' ಎರಡಕ್ಕೂ ಒಂದೇ ಸಂಕೇತ ಇದೆ. ಇದರಿಂದ ಕೆಲವೊಮ್ಮೆ ಲಾಭವೂ ಇದೆ. ಒಂದು ಟೆಲಿಫೋನ್ ಡೈರೆಕ್ಟರಿಯನ್ನು ಕನ್ನಡ ಮತ್ತು ಹಿಂದಿ ಭಾಷೆಯಲ್ಲಿ ತಯಾರಿಸಬೇಕಾದರೆ, ಕನ್ನಡದಲ್ಲಿ ಬೆರಳಚ್ಚು ಮಾಡಿ, ಇಸ್ಕಿಯಲ್ಲಿ ಶೇಖರಿಸಿ, ಅದನ್ನು ಹಿಂದಿಯ ಫಾಂಟ್‌ನ ಸಂಕೇತಗಳಿಗೆ ಪರಿವರ್ತಿಸಿದರೆ ಸಾಕು. ಆದರೆ ಸಮಸ್ಯೆ ಇರುವುದು ಅಕಾರಾದಿ ವಿಂಗಡಣೆಯಲ್ಲಿ. ಕನ್ನಡ, ತೆಲುಗು, ಮರಾಠಿ, ಹಿಂದಿ, ಹೀಗೆ ಎಲ್ಲ ಭಾಷೆಗಳಿಗೂ ಒಂದೆ ಅಕಾರಾದಿ ವಿಂಗಡಣೆಯ

Letter	ಕ					
ISCII Char	ಕ					
ISCII code	179					
Glyphs	ಕ	್				
Glyph code	80	192				
Letter	ತ್ರ್ಯೋ					
ISCII Char	ತ	್	ರ	್	ಯ	ೋ
ISCII code	194	232	207	232	205	229
Glyphs	ತ	್	್ರ	◡	್ಯ	ೕ
Glyph code	118	201	198	230	229	195

ಇಸ್ಕಿ ಬಳಸಿದಾಗ ಸಂಗ್ರಹಕ್ಕೆ ಒಂದು ಸಂಕೇತ, ತೋರಿಕೆಗೆ ಇನ್ನೊಂದು ಸಂಕೇತ ಬಳಸಬೇಕಾಗುತ್ತದೆ.

ಸೂತ್ರ ಕಲ್ಪಿಸಲಾಗಿದೆ. ಕನ್ನಡ ಮತ್ತು ಹಿಂದಿಯ ಸೂತ್ರ ಒಂದೇ ಆಗಿರಬೇಕಾಗಿಲ್ಲ. ಉದಾಹರಣೆಗೆ ಇಸ್ಕಿಯಲ್ಲಿರುವ ಅಕಾರಾದಿ ವಿಂಗಡಣೆ –'ಯ, ರ ಲ, ಳ, ವ, ಶ, ಷ, ಸ, ಹ'. ಕನ್ನಡದಲ್ಲಿ ಇದು 'ಯ, ರ, ಲ, ವ, ಶ, ಷ, ಸ, ಹ, ಳ' ಆಗಬೇಕು.


ಯುನಿಕೋಡ್


ಪ್ರಪಂಚದ ಮಟ್ಟಿಗೆ ಹೇಳುವುದಾದರೆ ಭಾರತೀಯ ಭಾಷೆಗಳ ಜೊತೆ, ಚೀನಾ, ಜಪಾನ್, ಅರೇಬಿ, ಯುರೋಪಿನ ಭಾಷೆಗಳು, ಹೀಗೆ ನೂರಾರು ಭಾಷೆಗಳಿಗೆ ಸ್ಥಾನ ಕಲ್ಪಿಸಿ ಕೊಡಬೇಕಾಗುತ್ತದೆ. ಇದಕ್ಕೆಲ್ಲ ಮದ್ದೆಂದರೆ 8 ಬಿಟ್‌ಗಳ ಸಂಕೇತೀಕರಣದ ಬದಲಿಗೆ 16 ಬಿಟ್‌ಗಳನ್ನು ಬಳಸುವುದು. 16 ಬಿಟ್‌ಗಳನ್ನು ಬಳಸುವುದರಿಂದ ಸುಮಾರು 65,000 ಮೂಲಾಕ್ಷರಗಳಿಗೆ ಜಾಗ ಮಾಡಿಕೊಟ್ಟಂತಾಗುತ್ತದೆ. ಇದು ಪ್ರಪಂಚದ ಬಹುತೇಕ ಭಾಷೆಗಳಿಗೆ ಸಾಕು. ಇದುವೇ ಯುನಿಕೋಡ್ (unicode). ಯುನಿಕೋಡ್ ಎಂಬುದು universal, uniform, uinique ಮತ್ತು code (ಸಂಕೇತ) ಎಂಬ ಪದಗಳನ್ನು ಸೂಚಿಸುತ್ತದೆ. ಪ್ರಪಂಚಕ್ಕೆಲ್ಲಾ ಒಂದೇ ಸಂಕೇತ ವಿಧಾನ ಇರತಕ್ಕದ್ದು. ಪ್ರಪಂಚದ ಪ್ರತಿ ಭಾಷೆಯ ಪ್ರತಿಯೊಂದು ಅಕ್ಷರಕ್ಕೂ ತನ್ನದೇ ಆದ ಪ್ರತ್ಯೇಕ ಸಂಕೇತ ಇರಬೇಕು. ಈ ಎಲ್ಲ ಬೇಕುಗಳಿಗೆ ಉತ್ತರವೇ ಯುನಿಕೋಡ್. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇದೆ. ಇದು ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಯುನಿಕೋಡ್ ವಿಧಾನದಲ್ಲಿ ಮಾಹಿತಿ ಸಂಗ್ರಹಣೆ ಮಾಡಿದರೆ ಒಂದೇ ಕಡತದಲ್ಲಿ ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮಾಹಿತಿಯನ್ನು ಶೇಖರಣೆ ಮಾಡಲು ಸಾಧ್ಯ. ಗ್ರಂಥಾಲಯವೊಂದರಲ್ಲಿ ಭಾರತದ

ಎಲ್ಲ ಭಾಷೆಯ ಪುಸ್ತಕಗಳಿದ್ದಲ್ಲಿ ಅವುಗಳ ವಿವರಗಳ ದತ್ತಸಂಚಯ (database) ತಯಾರಿಸಬೇಕಾದರೆ ಯುನಿಕೋಡ್ ವಿಧಾನದಿಂದ ಮಾತ್ರ ಸಾಧ್ಯ.

ಯುನಿಕೋಡ್‌ನಲ್ಲಿ ಭಾರತದ ಎಲ್ಲ ಭಾಷೆಯ ಎಲ್ಲ ಮೂಲಾಕ್ಷರಗಳಿಗೂ ತನ್ನದೇ ಆದ ಏಕಮಾತ್ರ (unique) ಸಂಕೇತ ಇದೆ. ಉದಾಹರಣೆಗೆ ಕನ್ನಡದ 'ಅ' ಅಕ್ಷರದ ಯುನಿಕೋಡ್ ಸಂಕೇತ C85 (hexadecimal) ಅಥವಾ ಅದನ್ನೇ ದಶಮಾನ ಪದ್ಧತಿಯಲ್ಲಿ ಬರೆದರೆ 3205 ಆಗುತ್ತದೆ. ಕನ್ನಡದ ಯುನಿಕೋಡ್ ಕೋಷ್ಟಕವನ್ನು ಅನುಬಂಧದಲ್ಲಿ ನೀಡಲಾಗಿದೆ. ಭಾರತದ ಎಲ್ಲ ಭಾಷೆಗಳನ್ನೂ ಯುನಿಕೋಡ್‌ನಲ್ಲಿ 128 ರಷ್ಟು ಅಂತರದಲ್ಲಿ ಇಡಲಾಗಿದೆ. ಅಂದರೆ ಕನ್ನಡದ 'ಅ' ಅಕ್ಷರದ ಯುನಿಕೋಡ್ ಸಂಕೇತ 3205 ಕ್ಕೆ 128 ಸೇರಿಸಿದರೆ ಮುಂದಿನ ಭಾಷೆ ಮಲಯಾಳಂನ 'ಅ' ದೊರೆಯುತ್ತದೆ. ಅದರ ಯುನಿಕೋಡ್ ಸಂಕೇತ 3333. ಈ ಸೂತ್ರವನ್ನು ಬಳಸಿ ಭಾರತದ ಎಲ್ಲ ಭಾಷೆಗಳ ನಡುವೆ ಸುಲಭವಾಗಿ ಲಿಪ್ಯಂತರಣ ಮಾಡಬಹುದು. ಭಾರತೀಯ ರೈಲ್ವೆಯವರು ತಮ್ಮ ಜಾಲತಾಣದಲ್ಲಿ ರೈಲು ಮತ್ತು ನಿಲ್ದಾಣಗಳ ಹೆಸರುಗಳನ್ನು ಎಲ್ಲ ಭಾಷೆಗಳಲ್ಲಿ ಯುನಿಕೋಡ್ ಬಳಸಿ ಭಾಷೆಗಳ ನಡುವೆ ಲಿಪ್ಯಂತರಣದ ಮೂಲಕ ಮೂಡಿಸಬಹುದು.

ಯುನಿಕೋಡ್‌ನಲ್ಲಿ ಅಕ್ಷರಗಳ ಕೋಷ್ಟಕ ಮತ್ತು ಅಕಾರಾದಿ ವಿಂಗಡಣೆಯ ಕೋಷ್ಟಕ ಬೇರೆ ಬೇರೆ ಇವೆ. ಅಂದರೆ ಮೂಲಾಕ್ಷರಗಳ ಕೋಷ್ಟಕದಲ್ಲಿ ಇರುವ ವಿಧಾನದಲ್ಲಿ ಅಕಾರಾದಿ ವಿಂಗಡಣೆ ಆಗಬೇಕಾಗಿಲ್ಲ. ಕನ್ನಡದ ಯುನಿಕೋಡ್ ಕೋಷ್ಟಕದಲ್ಲಿ ಲ,ಳ,ವ,ಶ,ಷ, ಎಂದೇ ಅಕ್ಷರಗಳನ್ನು ಜೋಡಿಸಲಾಗಿದೆ. ಆದರೆ ಕನ್ನಡ ಅಕಾರಾದಿ ವಿಂಗಡಣೆಯ ಕೋಷ್ಟಕದಲ್ಲಿ ವಿಂಗಡಣೆಯ ಸೂತ್ರ ಸರಿಯಾಗಿದೆ.





ಇಸ್ಕಿಯಲ್ಲಿ ಇಂಗ್ಲಿಷ್ ಜೊತೆ ಯಾವುದಾದರೂ ಒಂದು ಭಾರತೀಯ ಭಾಷೆಯನ್ನು ಮಾತ್ರ ಸೇರಿಸಿಕೊಳ್ಳಬಹುದು. ಯುನಿಕೋಡ್‌ನಲ್ಲಿ ಪ್ರಪಂಚದ ಎಲ್ಲ ಭಾಷೆಗಳನ್ನೂ ಒಟ್ಟಿಗೆ ಬಳಸಬಹುದು

ಯುನಿಕೋಡ್ ಅಲ್ಲದ ಹಳೆಯ ವಿಧಾನದಲ್ಲಿ ಕನ್ನಡದ ಮಾಹಿತಿಯನ್ನು ಅಕ್ಷರಭಾಗಗಳಾಗಿ, ಅಂದರೆ ಅಕ್ಷರಭಾಗಗಳ ಆಸ್ಕಿ ಸಂಕೇತಗಳಾಗಿ ಸಂಗ್ರಹಿಸಿಡುವುದರಿಂದ ಗಣಕಕ್ಕೆ ಅವು ಕನ್ನಡದ ಮಾಹಿತಿ ಎಂದು ತಿಳಿಯುವುದಿಲ್ಲ. 'ಕ' ಎನ್ನುವ ಅಕ್ಷರವನ್ನೂ 'ಕ' ಮತ್ತು '' ಆಗಿ ಸಂಗ್ರಹಿಸಿಡಲಾಗುತ್ತದೆ. ಇದರಿಂದಾಗಿ ಅದು ಗಣಕಕ್ಕೆ 'ಕ' ಎಂದು ತಿಳಿಯುವುದಿಲ್ಲ. ಆದುದರಿಂದ ಇಂತಹ ಮಾಹಿತಿಯನ್ನು ಅಕಾರಾದಿಯಾಗಿ ವಿಂಗಡಿಸಲು ಆಗುವುದಿಲ್ಲ. ಯುನಿಕೋಡ್‌ನಲ್ಲಿ ಈ ಸಮಸ್ಯೆ ಇಲ್ಲ. ಅಕ್ಷರಗಳನ್ನು ಅವುಗಳ ಯುನಿಕೋಡ್ ಸಂಕೇತವಾಗಿ ಸಂಗ್ರಹಿಸಿಡಲಾಗುತ್ತದೆ. ಅವುಗಳನ್ನು ಕನ್ನಡದ ಅಕಾರಾದಿ ವಿಂಗಡಣೆಯ ಸೂತ್ರದನ್ವಯ ವಿಂಗಡಣೆ ಮಾಡಬಹುದು.

ಅಂತರಜಾಲದಲ್ಲಿ, ಗೂಗಲ್‌ನಲ್ಲಿ, ಫೇಸ್‌ಬುಕ್, ಟ್ವಿಟ್ಟರ್, ಬ್ಲಾಗಿಂಗ್‌ಗಳಲ್ಲಿ ಬಳಕೆಯಾಗುವುದು ಕನ್ನಡದ ಯುನಿಕೋಡ್ ವಿಧಾನ. ಕನ್ನಡದ ಜಾಲತಾಣವೊಂದನ್ನು ಕನ್ನಡ ಯುನಿಕೋಡ್‌ನಲ್ಲಿ ನಿರ್ಮಿಸಿದರೆ ಅದು ಗೂಗಲ್‌ನ ಹುಡುಕುವಿಕೆಯ ಫಲಿತಾಂಶದಲ್ಲಿ ಕಂಡುಬರುತ್ತದೆ. ಹಳೆಯ ಯುನಿಕೋಡ್ ಅಲ್ಲದ ವಿಧಾನದಲ್ಲಿ ಜಾಲತಾಣ ನಿರ್ಮಿಸಿದರೆ ಗೂಗಲ್ ಅಥವಾ ಇನ್ನ್ಯಾವುದೇ ಜಾಲಶೋಧಕದಲ್ಲಿ ಅದು ಕಂಡುಬರುವುದಿಲ್ಲ. ಕನ್ನಡದಲ್ಲಿ 6 ಸಾವಿರದಷ್ಟು ಜನ ಬ್ಲಾಗಿಗರು ಇದ್ದಾರೆ. ಅವರು ಬ್ಲಾಗ್ ಮಾಡಲು ಬಳಸುವುದು ಕನ್ನಡ ಯುನಿಕೋಡನ್ನೇ. ಫೇಸ್‌ಬುಕ್‌ನಲ್ಲಿ ವ್ಯವಹರಿಸಲೂ ಕನ್ನಡ ಯುನಿಕೋಡ್‌ನಿಂದಾಗಿ ಮಾತ್ರ ಸಾಧ್ಯ. ಜಗತ್ತಿನ ಸುಪ್ರಸಿದ್ಧ ಸ್ವತಂತ್ರ ಮತ್ತು ಮುಕ್ತ ವಿಶ್ವಕೋಶ ವಿಕಿಪೀಡಿಯದ ಕನ್ನಡ ಆವೃತ್ತಿ ಸಾಧ್ಯವಾಗಿರುವುದು ಯುನಿಕೋಡ್‌ನಿಂದ. ದತ್ತಸಂಚಯಾಧಾರಿತ ತಂತ್ರಾಂಶ ತಯಾರಿಯಲ್ಲೂ ಬಳಕೆಯಾಗುವುದು ಯುನಿಕೋಡ್. ಉದಾಹರಣೆಗೆ ಕರ್ನಾಟಕ ಸರಕಾರದ ಪಡಿತರ ಚೀಟಿ ತಂತ್ರಾಂಶ. ಇದರಲ್ಲಿ ಎಲ್ಲ ನಾಗರಿಕರ ಹೆಸರು ಮತ್ತು ಇತರೆ ವಿವರಗಳು ಕನ್ನಡ ಯುನಿಕೋಡ್ ಸಂಕೇತೀಕರಣದ ಮೂಲಕ ಗಣಕದಲ್ಲಿ ಶೇಖರಣೆಯಾಗಿರುತ್ತವೆ. ಇದರಿಂದಾಗಿ ಹೆಸರು ನಮೂದಿಸಿದರೆ ವ್ಯಕ್ತಿಯ ಸಮಗ್ರ ವಿವರ ಹುಡುಕುವುದು ಸಾಧ್ಯವಾಗುತ್ತದೆ.

ಯುನಿಕೋಡ್ ಬಳಕೆಯಿಂದ ಇನ್ನೂ ಒಂದು ಪ್ರಮುಖ ಸಾಧಕವಿದೆ. ಕನ್ನಡದ ಮಾಹಿತಿಯನ್ನು (ಪಠ್ಯ, ದತ್ತಸಂಚಯ, ಇತ್ಯಾದಿ) ಯುನಿಕೋಡ್ ವಿಧಾನದಲ್ಲಿ ಒಂದು ಗಣಕದಲ್ಲಿ ತಯಾರಿಸಿದರೆ ಅದನ್ನು ಪ್ರಪಂಚದ ಇತರೆ ಯಾವ ಗಣಕದಲ್ಲೂ ಬಳಸಬಹುದು. ಯುನಿಕೋಡ್ ಅಲ್ಲದ ವಿಧಾನದಲ್ಲಿ (ನುಡಿ, ಬರಹ, ಆಕೃತಿ, ಶ್ರೀಲಿಪಿ, ಇತ್ಯಾದಿ) ಮಾಹಿತಿ ತಯಾರಿಸಿದರೆ ಅದನ್ನು ಇನ್ನೊಂದು ಗಣಕದಲ್ಲಿ ತೆರೆಯಬೇಕಾದರೆ ಅದೇ ತಂತ್ರಾಂಶ ಆ ಗಣಕದಲ್ಲಿ ಇರುವ ಅಗತ್ಯವಿದೆ. ಯುನಿಕೋಡ್‌ನಲ್ಲಿ ಮಾಹಿತಿ ತಯಾರಿಸಿದರೆ ಒಂದು ಕಾರ್ಯಾಚರಣ ವ್ಯವಸ್ಥೆಯನ್ನು ಬಳಸುವ ಗಣಕದಿಂದ ಇನ್ನೊಂದು ಕಾರ್ಯಾಚರಣ ವ್ಯವಸ್ಥೆಯನ್ನು ಬಳಸುವ ಗಣಕಕ್ಕೆ ವರ್ಗಾಯಿಸಬಹುದು. ಅಂದರೆ ವಿಂಡೋಸ್ ಗಣಕದಲ್ಲಿ ತಯಾರಿಸಿದ ಮಾಹಿತಿಯನ್ನು ಲಿನಕ್ಸ್ ಅಥವಾ ಮ್ಯಾಕ್ ಗಣಕದಲ್ಲಿ ಹಾಗೂ

ಸ್ಮಾರ್ಟ್‌ಫೋನ್‌ಗಳಲ್ಲಿ ತೆರೆಯಬಹುದು. ಯುನಿಕೋಡ್ ಅಲ್ಲದ ವಿಧಾನದಲ್ಲಿ ಇದು ಸಾಧ್ಯವಿಲ್ಲ.

ಗಮನಿಸಿ: ಯುನಿಕೋಡ್ ಎನ್ನುವುದು ಗಣಕಗಳಲ್ಲಿ ಮಾಹಿತಿ ಸಂಗ್ರಹಣೆಯ ಒಂದು ಶಿಷ್ಟತೆಯೇ ವಿನಾ ಅದು ಒಂದು ತಂತ್ರಾಂಶವಲ್ಲ.

ಓಪನ್‌ಟೈಪ್ ಫಾಂಟ್

ಆಸ್ಕಿ ಮತ್ತು ಇಸ್ಕಿ ಸಂಕೇತೀಕರಣದ ಜೊತೆ ಬಳಕೆಯಾಗುವುದು ಟ್ರೂಟೈಪ್ ಫಾಂಟ್‌ಗಳು. ಟ್ರೂಟೈಪ್ ಫಾಂಟ್‌ಗಳಲ್ಲಿ ಒಟ್ಟು ಬಳಸಬಹುದಾದ ಅಕ್ಷರಭಾಗಗಳಿಗೆ ಮಿತಿ ಇದೆ. ಇದಕ್ಕೆ ಕಾರಣ ಅವು ಆಸ್ಕಿ ಆಧಾರಿತವಾಗಿದ್ದು ಸುಮಾರು 190ರಷ್ಟು ಅಕ್ಷರಭಾಗಗಳನ್ನು ಮಾತ್ರ ಬಳಸಬಲ್ಲವು. ಕನ್ನಡದಲ್ಲಿ 51 ಮೂಲಾಕ್ಷರಗಳಿದ್ದರೂ (ಹಳೆಗನ್ನಡದ ಅಕ್ಷರಗಳೂ ಸೇರಿ) ಅವುಗಳ ಒಟ್ಟು ಗುಣಿತಾಕ್ಷರಗಳ ಸಾಧ್ಯತೆ 15000ದಷ್ಟಿದೆ. ಈ ಎಲ್ಲ ಗುಣಿತಾಕ್ಷರಗಳನ್ನು ಟ್ರೂಟೈಪ್ ಫಾಂಟ್‌ಗಳಲ್ಲಿ ಹಲವು ರಾಜಿ ಸೂತ್ರಗಳ ಮೂಲಕ ಮೂಡಿಸಬೇಕಾಗುತ್ತದೆ. ಎರಡು ಮತ್ತು ಹೆಚ್ಚಿನ ಒತ್ತುಗಳ ಸಂದರ್ಭದಲ್ಲಿ ಈ ರಾಜಿ ಹೆಚ್ಚು ವೇದ್ಯವಾಗುತ್ತದೆ.


ಯೂನಿಕೋಡ್‌ವಿಧಾನದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪರದೆಯಲ್ಲಿ ಪ್ರದರ್ಶಿಸಲು ಬಳಸುವುದು ಓಪನ್‌ಟೈಪ್ ಫಾಂಟ್‌ಗಳನ್ನು. ಈ ಓಪನ್‌ಟೈಪ್ ಫಾಂಟ್‌ಗಳಲ್ಲಿ ಅಕ್ಷರಭಾಗಗಳು (ಗ್ಲಿಫ್) ಮತ್ತು ರೆಂಡರಿಂಗ್ ಸೂತ್ರ ಇರುತ್ತದೆ. ಬೇರೆ ಬೇರೆ ಫಾಂಟ್‌ಗಳಲ್ಲಿ ಒಂದೇ ಮಾಹಿತಿಯನ್ನು ಬೇರೆ ಬೇರೆ ರೂಪದಲ್ಲಿ ಪ್ರದರ್ಶಿಸುವ ಸೌಲಭ್ಯವನ್ನು ಈ ರೀತಿಯಲ್ಲಿ ಪಡೆದುಕೊಳ್ಳಬಹುದು. ಕನ್ನಡದಲ್ಲಿ ಈ ರೀತಿಯ ಉದಾಹರಣೆಗಳು ತುಂಬ ಕಡಿಮೆ. ಒಂದು ಉದಾಹರಣೆಯೆಂದರೆ 'ಎನ್'. ಇದನ್ನು ಉತ್ತರ ಕರ್ನಾಟಕದಲ್ಲಿ 'ಟ' ರೂಪದಲ್ಲಿ ಬರೆಯುತ್ತಾರೆ. ಸಂಗ್ರಹದಲ್ಲಿ ಎರಡೂ ಒಂದೇ ಆಗಿರುತ್ತವೆ. ಬೇರೆ ಬೇರೆ ಓಪನ್‌ಟೈಪ್ ಫಾಂಟ್‌ಗಳು ಇದನ್ನು ಎರಡು ರೀತಿಯಲ್ಲಿ ಪ್ರದರ್ಶಿಸಬಹುದು. ಫಾಂಟ್‌ನ್ನು ಬದಲಾಯಿಸುವ ಮೂಲಕ ತಮಗೆ ಬೇಕಾದ ಪ್ರದರ್ಶನರೂಪವನ್ನು ಪಡೆದುಕೊಳ್ಳಬಹುದು. ಸಂಗ್ರಹದಲ್ಲಿ ಅವೆರಡೂ ಒಂದೇ ಆಗಿರುವುದರಿಂದ ಮಾಹಿತಿಯನ್ನು ಹುಡುಕುವಾಗ, ವಿಂಗಡಿಸುವಾಗ, ದತ್ತ ಸಂಸ್ಕರಣೆಯಲ್ಲಿ ಎಲ್ಲ ಕಡೆ ಎರಡೂ ಒಂದೇ ಆಗಿ ಪರಿಗಣಿಸಲ್ಪಡುತ್ತವೆ.

ಓಪನ್‌ಟೈಪ್ ಫಾಂಟ್‌ಗಳಲ್ಲಿ ಬಳಸಬಹುದಾದ ಒಟ್ಟು ಅಕ್ಷರಭಾಗಗಳಿಗೆ ಮಿತಿಯಿಲ್ಲ. ಎಷ್ಟು ಬೇಕಾದರೂ ಬಳಸಬಹುದು. ಅಂದರೆ ಎಲ್ಲ ನಮೂನೆಯ ಒತ್ತುಗಳ ವಿಶೇಷ ಸಂದರ್ಭಗಳಿಗೆಂದೇ ವಿಶೇಷ ಅಕ್ಷರಭಾಗಗಳನ್ನು ತಯಾರಿಸಬಹುದು. ಆದುದರಿಂದ ಕನ್ನಡ ಮತ್ತು ಇತರೆ ಭಾರತೀಯ ಭಾಷೆಗಳಿಗೆ ಯೂನಿಕೋಡ್ ಮತ್ತು ಓಪನ್‌ಟೈಪ್ ಫಾಂಟ್ ಸೂಕ್ತವಾಗಿದೆ.

ದತ್ತಸಂಚಯಗಳಲ್ಲಿ ಯುನಿಕೋಡ್

ಪ್ರಪಂಚದ ಎಲ್ಲ ಪ್ರಮುಖ ದತ್ತಸಂಚಯ ತಂತ್ರಾಂಶಗಳಲ್ಲಿ ಯುನಿಕೋಡ್ ಬೆಂಬಲ

ಇದೆ. ಅಂದರೆ ಈ ದತ್ತಸಂಚಯ ತಂತ್ರಾಂಶ ಬಳಸಿ ಕನ್ನಡದ ಯುನಿಕೋಡ್ ದತ್ತಸಂಚಯ ತಯಾರಿಸಬಹುದು ಮತ್ತು ಅದನ್ನು ಪ್ರೋಗ್ರಾಮ್ಮಿಂಗ್‌ನಲ್ಲಿ ಬಳಕೆ ಮಾಡಬಹುದು. ಕನ್ನಡ ಯುನಿಕೋಡ್ ಬೆಂಬಲ ಇರುವ ಕೆಲವು ಪ್ರಮುಖ ದತ್ತಸಂಚಯ ತಂತ್ರಾಂಶಗಳು –ಮೈಕ್ರೋಸಾಫ್ಟ್ ಎಸ್‌ಕ್ಯೂಎಲ್ ಸರ್ವರ್, ಒರಾಕಲ್, ಮೈಎಸ್‌ಕ್ಯೂಎಲ್, ಪೋಸ್ಟ್‌ಗ್ರೆಸ್, ಐಬಿಎಂ ಡಿಬಿ2, ಇತ್ಯಾದಿ. ದತ್ತಸಂಚಯದ ಜೊತೆ ವ್ಯವಹರಿಸಬೇಕಾದರೆ ಆದೇಶ ನೀಡಲು ಬಳಸುವ ಪ್ರೋಗ್ರಾಮ್ಮಿಂಗ್ ಭಾಷೆಗೆ ಎಸ್‌ಕ್ಯೂಎಲ್ ಎನ್ನುತ್ತಾರೆ. ಈ ಭಾಷೆಯಲ್ಲೂ ಯುನಿಕೋಡ್‌ಗೆ ಬೆಂಬಲ ಇದೆ. ಕರ್ನಾಟಕದ ಎಲ್ಲ ದೂರವಾಣಿ ಬಳಕೆದಾರರ ಹೆಸರುಗಳನ್ನು ದತ್ತಸಂಚಯದಲ್ಲಿ ಶೇಖರಿಸಿ ಅವುಗಳನ್ನು ಕನ್ನಡದ ಅಕರಾದಿಯಾಗಿ ವಿಂಗಡಿಸಿ ನೀಡು ಎಂದು ಎಸ್‌ಕ್ಯೂಎಲ್ ಭಾಷೆಯಲ್ಲಿ ಆದೇಶ ನೀಡಿದರೆ ಅದು ಹಾಗೆಯೇ ಮಾಡಿ ಮಾಹಿತಿ ನೀಡುತ್ತದೆ. ಇದರಿಂದಾಗಿ ಕನ್ನಡದ ಮಾಹಿತಿಯನ್ನು ಕನ್ನಡ ಲಿಪಿಯಲ್ಲೇ ಹುಡುಕಲು ಸಾಧ್ಯವಾಗುತ್ತದೆ. ಕನ್ನಡದ ಸಹಜಭಾಷಾಸಂಸ್ಕರಣೆ ಮಾಡುವುದಿದ್ದರೂ ಕನ್ನಡದ ಪದಗಳನ್ನು ಯುನಿಕೋಡ್ ಬೆಂಬಲಿತ ದತ್ತಸಂಚಯದಲ್ಲಿ ಶೇಖರಿಸಿಯೇ ಮುಂದುವರೆಯಬೇಕು. ಪದವಿಂಗಡಣೆ ಮಾಡಿ ಕ್ರಮಬದ್ಧವಾಗಿ ಸಂಗ್ರಹಿದ ಪದಗಳ ಸಂಚಯಕ್ಕೆ ಪಠ್ಯಕಣಜ ಎನ್ನಲಾಗುತ್ತದೆ. ಸಹಜಭಾಷಾಸಂಸ್ಕರಣೆಯಲ್ಲಿ ಇದು ಆರಂಭದ ಹಂತ. ಇದರಲ್ಲಿ ಕನ್ನಡದ ಪದಗಳನ್ನು ಮತ್ತು ಅವುಗಳ ಪದವಿಂಗಡಣೆಯನ್ನು ಸಂಗ್ರಹಿಸಿಡಲಾಗುತ್ತದೆ. ಉದಾಹರಣೆಗೆ ವಿಶ್ವವಿದ್ಯಾಲಯ–




ಓಪನ್‌ಟೈಪ್ ಫಾಂಟ್‌ಗಳಲ್ಲಿ ಯುನಿಕೋಡ್‌ನ ಮೂಲಾಕ್ಷರಗಳನ್ನು ಸಂಯುಕ್ತಾಕ್ಷರವಾಗಿಸಿದಾಗ ಯಾವ ರೀತಿ ಪರದೆಯಲ್ಲಿ ತೋರಿಸಬೇಕು ಎಂಬ ಸೂತ್ರ ಅಡಕವಾಗಿರುತ್ತದೆ. ಫಾಂಟ್ ಬದಲಿಸುವ ಮೂಲಕ ಅದೇ ಮಾಹಿತಿಯನ್ನು ಇನ್ನೊಂದು ರೀತಿಯಲ್ಲಿ ತೋರಿಸಬಹುದು.

ನಾಮಪದ, ರಾಮ–ಅಂಕಿತನಾಮ, ಓಡಿದನು–ಕ್ರಿಯಾಪದ, ಇತ್ಯಾದಿ. ಹೀಗೆ ಸಂಗ್ರಹಿದ ಪಠ್ಯಕಣಜದಿಂದ ನಮಗೆ ಬೇಕಾದ ರೀತಿಯಲ್ಲಿ ಮಾಹಿತಿಯನ್ನು ಜಾಲರಿ ಹಿಡಿದು ತೆಗೆಯಬಹುದು. ಉದಾಹರಣೆಗೆ 'ಸು' ಮತ್ತು 'ಡು' ಅಕ್ಷರಗಳಿಂದ ಕೊನೆಗೊಳ್ಳದ ಎಲ್ಲ ಕ್ರಿಯಾಪದಗಳನ್ನು ಹುಡುಕಿ ತೆಗೆಯುವುದು.

ಪ್ರೋಗ್ರಾಮ್ಮಿಂಗ್‌ನಲ್ಲಿ ಯುನಿಕೋಡ್

ಈಗ ಬಳಕೆಯಲ್ಲಿರುವ ಎಲ್ಲ ಪ್ರಮುಖ ಪ್ರೋಗ್ರಾಮ್ಮಿಂಗ್ ಭಾಷೆಗಳಲ್ಲಿ ಯುನಿಕೋಡ್ ಮತ್ತು ಕನ್ನಡ ಯುನಿಕೋಡ್ ಬೆಂಬಲ ಇದೆ. ಅಂದರೆ ಕನ್ನಡದ ಮಾಹಿತಿಯನ್ನು ಪ್ರೋಗ್ರಾಮ್ ಮೂಲಕ ಸಂಸ್ಕರಣೆ ಮಾಡಬಹುದು. ಒಂದು ಗ್ರಂಥಾಲಯದಲ್ಲಿರುವ ಎಲ್ಲ ಪುಸ್ತಕಗಳ ಯಾದಿಯನ್ನು ಯುನಿಕೋಡ್ ಬೆಂಬಲಿತ ದತ್ತಸಂಚಯದಲ್ಲಿ ಕನ್ನಡ ಯುನಿಕೋಡ್ ವಿಧಾನದಲ್ಲಿ ಸಂಗ್ರಹಿಸಿಟ್ಟು ನಂತರ ಅದನ್ನು ಯಾವುದಾದರೊಂದು ಪ್ರೋಗ್ರಾಮ್ಮಿಂಗ್ ಭಾಷೆಯ ಮೂಲಕ ನಮಗೆ ಬೇಕಾದ ರೀತಿಯಲ್ಲಿ ಪಡೆಯಬಹುದು ಮತ್ತು ಸಂಸ್ಕರಿಸಬಹುದು. ಉದಾಹರಣೆಗೆ ಶಿವರಾಮ ಕಾರಂತರು ಬರೆದ ಎಲ್ಲ ಕಾದಂಬರಿಗಳ ಯಾದಿ ಪಡೆಯುವುದು. ಪಡಿತರ ಚೀಟಿ ತಂತ್ರಾಂಶ ಕನ್ನಡ ಯುನಿಕೋಡ್ ಪ್ರೋಗ್ರಾಮಿಂಗ್‌ಗೆ ಇನ್ನೊಂದು ಪ್ರಮುಖ ಉದಾಹರಣೆ.

ಭಾಮಿನಿ ಷಟ್ಪದಿಯಲ್ಲಿ ಬರೆದ ಒಂದು ಕಾವ್ಯವನ್ನು ಪುಸ್ತಕ ರೂಪದಲ್ಲಿ ಮುದ್ರಿಸಬೇಕಾಗಿದೆ. ಭಾಮಿನಿ ಷಟ್ಪದಿಗೆ ಕೆಲವು ಸೂತ್ರಗಳಿವೆ. ಪ್ರತಿ ಸಾಲುಗಳಲ್ಲಿ ಇಂತಿಷ್ಟು ಮಾತ್ರೆಗಳು, ಎರಡನೆ ಅಕ್ಷರ ಪ್ರಾಸ ಇತ್ಯಾದಿ. ಇವುಗಳನ್ನು ಗಣಿತ



ಪಡಿತರ ಚೀಟಿ ತಂತ್ರಾಂಶದ ಒಂದು ನೋಟ

ಸೂತ್ರಗಳಲ್ಲಿ ಬಿಂಬಿಸಬಹುದು. ಪದ್ಯವನ್ನು ಕನ್ನಡ ಯುನಿಕೋಡ್‌ನಲ್ಲಿ ಊಡಿಸಿ ಅದು ಭಾಮಿನಿ ಛಂದಸ್ಸಿನಲ್ಲಿ ಇದೆಯೇ ಇಲ್ಲವೇ ಎಂದು ತಿಳಿಯಲು ಪ್ರೋಗ್ರಾಮ್ ಬರೆಯಬಹುದು. ಇವು ಒಂದೆರಡು ಉದಾಹರಣೆಗಳು ಮಾತ್ರ. ಸಾಧ್ಯವಿರುವ ಕೆಲಸಗಳು ನೂರಾರಿವೆ.

ಕನ್ನಡ ಯುನಿಕೋಡ್ ಬೆಂಬಲಿತ ಕೆಲವು ಪ್ರೋಗ್ರಾಮ್ಮಿಂಗ್ ಭಾಷೆಗಳು – ಮೈಕ್ರೋಸಾಫ್ಟ್ VB.NET, C#.NET, ಜಾವಾ, ಸಿ, ಸಿ++, ಪೈಥಾನ್, ಪರ್ಲ್, ಪಿಎಚ್‌ಪಿ, ಇತ್ಯಾದಿ.

ಅನುಬಂಧ

ಇಸ್ಕಿ ಕೋಷ್ಟಕ

	Hex		01	2	3	4	5	6	7	8	9	A	B	C	D	E	F
Hex	Dec		16	32	48	64	80	96	112	128	144	160	176	192	208	224	240
0	0	NUL	DLE	SP	0	@	P	`	p				ओ	ढ	ऱ	◌ॆ	EXT
1	1	SOH	DC1	!	1	A	Q	a	q			◌ँ	औ	ण	ल	◌े	०
2	2	STX	DC2	"	2	B	R	b	r			◌ं	ऑ	त	ळ	◌ै	१
3	3	ETX	DC3	#	3	C	S	c	s			◌ः	क	थ	ऴ	◌ॅ	२
4	4	EOT	DC4	$	4	D	T	d	t			अ	ख	द	व	◌ॊ	३
5	5	ENQ	NAK	%	5	E	U	e	u			आ	ग	ध	श	◌ो	४
6	6	ACK	SYN	&	6	F	V	f	v			इ	घ	न	ष	◌ौ	५
7	7	BEL	ETB	'	7	G	W	g	w			ई	ङ	ऩ	स	◌ॉ	६
8	8	BS	CAN	(	8	H	X	h	x			उ	च	प	ह	◌्	७
9	9	HT	EM	)	9	I	Y	i	y			ऊ	छ	फ	INV	◌़	८
A	10	LF	SUB	*	:	J	Z	j	z			ऋ	ज	ब	◌ा	।	९
B	11	VT	ESC	+	;	K	[	k	{			ऎ	झ	भ	◌ि		
C	12	FF	FS	,	<	L	\	l	|			ए	ञ	म	◌ी		
D	13	CR	GS	-	=	M	]	m	}			ऐ	ट	य	◌ु		
E	14	SO	RS	.	>	N	^	n	~			ऍ	ठ	य़	◌ू		
F	15	SI	US	/	?	O	_	o	DEL			ऒ	ड	र	◌ृ	ATR	

ಕನ್ನಡ ಯುನಿಕೋಡ್ 7.0 ಕೋಷ್ಟಕ

	0C8	0C9	0CA	0CB	0CC	0CD	0CE	0CF
0		ಐ	ಠ	ರ	◌ೀ		ೠ	
1	◌ಁ		ಡ	ಱ	◌ು		ೡ	ೱ
2	◌ಂ	ಒ	ಢ	ಲ	◌ೂ		◌ೢ	ೲ
3	◌ಃ	ಓ	ಣ	ಳ	◌ೃ		◌ೣ	
4		ಔ	ತ		◌ೄ			
5	ಅ	ಕ	ಥ	ವ		◌ೕ		
6	ಆ	ಖ	ದ	ಶ	◌ೆ	◌ೖ	೦	
7	ಇ	ಗ	ಧ	ಷ	◌ೇ		೧	
8	ಈ	ಘ	ನ	ಸ	◌ೈ		೨	
9	ಉ	ಙ		ಹ			೩	
A	ಊ	ಚ	ಪ		◌ೊ		೪	
B	ಋ	ಛ	ಫ		◌ೋ		೫	
C	ಌ	ಜ	ಬ	◌಼	◌ೌ		೬	
D		ಝ	ಭ	ಽ	◌್		೭	
E	ಎ	ಞ	ಮ	◌ಾ		ೞ	೮	
F	ಏ	ಟ	ಯ	◌ಿ			೯	

ಪಾರಿಭಾಷಿಕ ಪದಕೋಶ

ಅಂತರಜಾಲ	Internet
ಅಕ್ಷರಭಾಗ	Glyph
ಅಕ್ಷರಶೈಲಿ	Font
ಕಾರ್ಯಾಚರಣ ವ್ಯವಸ್ಥೆ	Operating System
ಜಾಲಶೋಧಕ	Search engine
ತಂತ್ರಾಂಶ	Software
ದತ್ತಸಂಚಯ	Database
ದತ್ತ ಸಂಸ್ಕರಣೆ	Dataprocessing
ಪಠ್ಯಕಣಜ	Text corpus
ಪದವಿಂಗಡಣೆ	Part-of-speech tagging
ಬಿಟ್	Bit
ಬ್ಲಾಗಿಗರು	Bloggers
ಲಿಪ್ಯಂತರಣ	Transliteration
ವಿಂಗಡಣೆ	Sorting
ಸಂಕೇತೀಕರಣ	Encoding
ಸಹಜ ಭಾಷಾ ಸಂಸ್ಕರಣೆ	Natural Language Processing

ಉಪಯುಕ್ತ ಜಾಲತಾಣಗಳು

- www.unicode.org
- www.wikipedia.org/wiki/Unicode
- http://kn.wikipedia.org/wiki/ಯುನಿಕೋಡ್
- http://bit.ly/KannadaTyping
- http://www.microsoft.com/typography/WhatIsOpenType.mspx

1. ಕಂಪ್ಯೂಟರ್ ಮತ್ತು ಕನ್ನಡ

(ಡಾ॥ ಎ ಸತ್ಯನಾರಾಯಣ, ಸದಸ್ಯರು, ಬೋರ್ಡ್‌ಆಫ್ ಸ್ಟಡೀಸ್, ದೂರಶಿಕ್ಷಣ ಮಾಹಿತಿ ತಂತ್ರಜ್ಞಾನ ಡಿಪ್ಲೋಮಾ, ಕನ್ನಡ ವಿವಿ, ಹಂಪಿ; ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಶಾಖಾಧಿಕಾರಿ; ಮಾಹಿತಿ ತಂತ್ರಜ್ಞಾನ ಕುರಿತ ಪಠ್ಯಪುಸ್ತಕಗಳ ಲೇಖಕರು)

- ಕಂಪ್ಯೂಟರ್ ಮತ್ತು ಭಾಷೆ
- ಯಂತ್ರಭಾಷೆ, ಉನ್ನತ ಸ್ತರದ ಭಾಷೆ ಮತ್ತು ಪ್ರೋಗ್ರಾಮಿಂಗ್ ಭಾಷೆ
- ಕಂಪ್ಯೂಟರ್‌ನ ಸಂವಹನ ಭಾಷೆ
- ಕ್ಯಾರಕ್ಟರ್ ಯೂಸರ್ ಇಂಟರ್ಫೇಸ್ (ಸಿಯುಐ)
- ಗ್ರಾಫಿಕಲ್ ಯೂಸರ್ ಇಂಟರ್ಫೇಸ್ (ಜಿಯುಐ)
- ಕಂಪ್ಯೂಟರ್‌ನ ಬಳಕೆಯ ಭಾಷೆ
- ಕಾರ್ಯಾಚರಣೆ ವ್ಯವಸ್ಥೆ ಮತ್ತು ಕನ್ನಡ ಲಿಪಿ ಬೆಂಬಲ
- ಆನ್ವಯಿಕ ತಂತ್ರಾಂಶಗಳು ಮತ್ತು ಕನ್ನಡ ಲಿಪಿ ಬೆಂಬಲ
- ಉಚಿತ ಕನ್ನಡ ಲಿಪಿ ತಂತ್ರಾಂಶಗಳು
- ಬರಹ, ನುಡಿ, ಕುವೆಂಪು ತಂತ್ರಾಂಶ
- ಫಾಂಟು, ಕೀಲಿಮಣೆ, ಭಾಷಾ ಸ್ಥಿತ್ಯಂತರ ಕೀಲಿ
- ಆಸ್ಕಿ ಎನ್ಕೋಡಿಂಗ್ ಉಳ್ಳ ಫಾಂಟುಗಳು: ಅನುಕೂಲಗಳು ಮತ್ತು ಅನಾನುಕೂಲಗಳು
- ಯುನಿಕೋಡ್ ಎನ್ಕೋಡಿಂಗ್ ಉಳ್ಳ ಫಾಂಟುಗಳು: ಅನುಕೂಲಗಳು ಮತ್ತು ಅನಾನುಕೂಲಗಳು
- ಕನ್ನಡ ಪಠ್ಯ ಬೆರಳಚ್ಚು ಕಲಿಕೆ
- ಸರಕಾರದಿಂದ ಶಿಫಾರಸ್ಸುಗೊಂಡಿರುವ ಕನ್ನಡದ ಶಿಷ್ಟ ಕೀಲಿಮಣೆ ವಿನ್ಯಾಸ ಬಳಸಲು ಕೀಲಿಯೊತ್ತುಗಳ ಪರಿಚಯ
- ವೇಗದ ಬೆರಳಚ್ಚು ಕ್ರಮಗಳು ಮತ್ತು ಅಭ್ಯಾಸ

2. ಡಿಟಿಪಿ ಮತ್ತು ಕನ್ನಡ

(ಶ್ರೀ ಬೇಳೂರು ಸುದರ್ಶನ, ಮಾಧ್ಯಮ ಸಲಹೆಗಾರರು, ಅಭ್ಯುದಯ ಪತ್ರಕರ್ತರು ಮತ್ತು ಮಾಹಿತಿ ತಂತ್ರಜ್ಞಾನ ಕುರಿತ ಮೂರು ಪಠ್ಯಪುಸ್ತಕಗಳ ಲೇಖಕರು)

- ವಿವಿಧ ಡಿಟಿಪಿ ತಂತ್ರಾಂಶಗಳ ಸ್ಥೂಲ ಪರಿಚಯ (ಖರೀದಿಗೆ ಮತ್ತು ಮುಕ್ತ ತಂತ್ರಾಂಶಗಳು): ಯಾವುದಕ್ಕೆ ಯಾವ ತಂತ್ರಾಂಶ?
- ಇನ್‌ಡಿಸೈನ್‌ನಲ್ಲಿ ಕನ್ನಡದ ಕೆಲಸ ಮತ್ತು ಇನ್‌ಡಿಸೈನ್‌ನ ಕಿರು ಪರಿಚಯ
- ಕನ್ನಡ ಡಿಟಿಪಿಯ ಸಮಸ್ಯೆಗಳು (ಯ ಒತ್ತು, ಯುನಿಕೋಡ್, ಫಾಂಟ್ ಪರಿವರ್ತನೆ ಮತ್ತು ಡ್ರಾಪ್‌ಕ್ಯಾಪ್ ಇತ್ಯಾದಿ)
- ಸೇವ್ ಎಸ್, ಎಕ್ಸ್‌ಪೋರ್ಟ್‌ಮತ್ತು ಇಂಪೋರ್ಟ್ ಸಂಗತಿಗಳು (ಇಮೇಜ್, ಪಠ್ಯಗಳ ಇಂಪೋರ್ಟ್)
- ಕನ್ನಡದಲ್ಲಿ ಪ್ರೂಫ್ ರೀಡಿಂಗ್
- ಕನ್ನಡ ಸರ್ಚ್ ಮತ್ತು ರಿಪ್ಲೇಸ್
- ವಿವಿಧ ಕನ್ನಡ ಫಾಂಟ್‌ಗಳ ಅನುಕೂಲಕರ ಮತ್ತು ಅನಾನುಕೂಲಕರ ಅಂಶಗಳು (ಎಂಬೆಡಿಂಗ್, ಜಾಗ ಕಬಳಿಸುವಿಕೆ ಇತ್ಯಾದಿ)
- ಕನ್ನಡ ಡಿಟಿಪಿಯ ಅನುಕೂಲಗಳು (ಪೋಸ್ಟರ್, ಬ್ಯಾಕ್‌ಡ್ರಾಪ್ ಇತ್ಯಾದಿ)

3. ಇಂಟರ್ನೆಟ್ ಮತ್ತು ಕನ್ನಡ

(ಶ್ರೀ ಟಿ.ಜಿ. ಶ್ರೀನಿಧಿ, ಸಾಫ್ಟ್‌ವೇರ್ ತಂತ್ರಜ್ಞ ಮತ್ತು ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಪತ್ರಕರ್ತ; ಮಾಹಿತಿ ತಂತ್ರಜ್ಞಾನ ಕುರಿತು ಪಠ್ಯಪುಸ್ತಕಗಳ ಲೇಖಕರು; ಈ ಹಿಂದೆ ಉದಯವಾಣಿಯಲ್ಲಿ 'ವಿಜ್ಞಾಪನೆ' ಅಂಕಣಕಾರರು)

- ಅಂತರಜಾಲ ಹಾಗೂ ಇಮೇಲ್‌ನಲ್ಲಿ ಕನ್ನಡ: ನಡೆದು ಬಂದ ದಾರಿ
- ಬ್ರೌಸರ್ ಹಾಗೂ ಜಾಲತಾಣದಲ್ಲಿ ಕನ್ನಡ [ಉದಾ: ಕನ್ನಡ ಫೈರ್‌ಫಾಕ್ಸ್, ಗೂಗಲ್/ಫೇಸ್‌ಬುಕ್ ಕನ್ನಡ ಇಂಟರ್‌ಫೇಸ್ ಇತ್ಯಾದಿ]
- ಕನ್ನಡ ಜಾಲತಾಣಗಳ ಪರಿಚಯ
- ಬ್ಲಾಗಿಂಗ್
- ಆನ್‌ಲೈನ್ ಸೌಲಭ್ಯಗಳು: ನಿಘಂಟುಗಳು, ಟ್ರಾನ್ಸ್‌ಲಿಟರೇಟ್, ಟ್ರಾನ್ಸ್‌ಲೇಟ್, ಯೂನಿಕೋಡ್ ಪರಿವರ್ತನೆ ಇತ್ಯಾದಿ ಮೊಬೈಲ್ ಹಾಗೂ ಟ್ಯಾಬ್ಲೆಟ್‌ಗಳಲ್ಲಿ ಕನ್ನಡ

4. ಕಂಪ್ಯೂಟರ್ ಮತ್ತು ಸಮಾಜ

(ಶ್ರೀ ಎನ್. ಎ.ಎಂ. ಇಸ್ಮಾಯಿಲ್, ಹಿರಿಯ ಪತ್ರಕರ್ತರು, ಪ್ರಜಾವಾಣಿ)

- ಕಂಪ್ಯೂಟರ್ ತಂತ್ರಜ್ಞಾನದ ಐತಿಹಾಸಿಕ ಹಿನ್ನೆಲೆ. ಅಂದರೆ ವಿಶ್ವದ ಬೇರೆ ಬೇರೆ ಕಡೆ 'ಚಿಂತನಾ ಯಂತ್ರ'ವೊಂದನ್ನು ತಯಾರಿಸುವುದಕ್ಕಾಗಿ ನಡೆದ ಪ್ರಯತ್ನಗಳ ಒಂದು ಸ್ಥೂಲ ನೋಟ. ಎರಡನೇ ಮಹಾಯುದ್ಧದ ಮತ್ತು ನಂತರದ ಅವಧಿಯಲ್ಲಿ ನಡೆದ ಬೆಳವಣಿಗೆಗಳು, ಐಬಿಎಂನ ಯಂತ್ರ ಹಾಲೋಕಸ್ಟ್‌ಗೆ ಬಳಕೆಯಾದದ್ದು, ಇತ್ಯಾದಿಗಳನ್ನು ವಿವರಿಸಿ ಪಿ.ಸಿ.ಯ ಹುಟ್ಟಿನೊಂದಿಗೆ ಇದು ಕೊನೆಗೊಳ್ಳುತ್ತದೆ.
- ಇಂಟರ್ನೆಟ್ ಪರಿಕಲ್ಪನೆಯ ಆರಂಭ ಮತ್ತು ಮಾಹಿತಿ ತಂತ್ರಜ್ಞಾನವಾಗಿ ಬೆಳೆದ ಬಗೆಯ ಕುರಿತು ಒಂದು ಸ್ಥೂಲ ನೋಟ.
- ಒಂದು ಮತ್ತು ಎರಡನೇ ಅಂಶಗಳ ವಿವರಗಳು ಒಂದು ಬಗೆಯಲ್ಲಿ ಮುಕ್ತ ಮತ್ತು ಸ್ವತಂತ್ರ ತಂತ್ರಾಂಶ ಆಂದೋಲನಕ್ಕೂ ಹಿನ್ನೆಲೆಯಾಗುತ್ತವೆ. ಅದನ್ನು ಬಳಸಿಕೊಂಡಿ ಈ ಅಂದೋಲನಗಳ 'ಸೈದ್ಧಾಂತಿಕತೆ'ಯ ಸ್ಥೂಲ ನೋಟ.
- ವೆಬ್ 2.0 ಮೂಲಕ ಅಭಿವ್ಯಕ್ತಿಯ ಹೊಸ ಅವಕಾಶಗಳು ಸೃಷ್ಟಿಯಾದದ್ದು. ಬ್ಲಾಗ್ ಸೇರಿದಂತೆ ಇಲ್ಲಾ ಬಗೆಯ ಸೋಷಿಯಲ್ ನೆಟ್‌ವರ್ಕಿಂಗ್ ವಿಧಾನಗಳು ಕನ್ನಡದ ಸಂದರ್ಭದಲ್ಲಿ / ಭಾರತದ ಸಂದರ್ಭದಲ್ಲಿ ಏನು ಮಾಡಿದವು ಎಂಬುದರ ಸ್ಥೂಲ ನೋಟ. ಇದಕ್ಕೆ ಅರಬ್ ವಸಂತ, ಆಕ್ಯುಪೈ ವಾಲ್ ಸ್ಟ್ರೀಟ್‌ನಂಥ ಆಂದೋಲನಗಳು ಹಿನ್ನೆಲೆಯಾಗಿರುತ್ತವೆ.
- ಜ್ಞಾನ ಸಮಾಜ/ಮಾಹಿತಿ ಸಮಾಜ/ಮಾಹಿತಿ ಮಾರುಕಟ್ಟೆ/ಡಿಜಿಟಲ್ ದಿವೈಡ್/ಇ–ಗವರ್ನೆನ್ಸ್/ಗವರ್ನಮೆಂಟಾಲಿಟಿಗಳ ಕುರಿತು ಒಂದು ಪರಿಚಯ.

5. ಯುನಿಕೋಡ್: ಏಕೆ, ಹೇಗೆ?

(ಡಾ॥ ಯು.ಬಿ. ಪವನಜ, ಹಿರಿಯ ಸಾಫ್ಟ್‌ವೇರ್ ತಂತ್ರಜ್ಞರು ಮತ್ತು ಪ್ರಜಾವಾಣಿಯಲ್ಲಿ 'ಗ್ಯಾಜೆಟ್ ಲೋಕ' ಅಂಕಣಕಾರರು)

- ಓಪನ್ ಟೈಪ್ ಫಾಂಟ್ – ಏನು, ಏಕೆ, ಹೇಗೆ?
- ಯುನಿಕೋಡ್ ಬಳಕೆ –ಆಫೀಸ್, ಎಕ್ಸೆಲ್ ಮತ್ತು ಆಕ್ಸೆಸ್‌ಗಳಲ್ಲಿ
- ಕನ್ನಡದ ದತ್ತಸಂಗ್ರಹಗಳು – ಎಕ್ಸೆಲ್, ಆಕ್ಸೆಸ್ ಮತ್ತು ಎಸ್‌ಕ್ಯೂಎಲ್ ಸರ್ವ್‌ಗಳಲ್ಲಿ –ಸಂಗ್ರಹಣೆ, ಸೂಚೀಕರಣ ಮತ್ತು ವಿಂಗಡಣೆ

- ಪ್ರೋಗ್ರಾಮ್ಮಿಂಗ್‌ನಲ್ಲಿ ಕನ್ನಡದ (ಯುನಿಕೋಡ್) ಬಳಕೆ, ಮೈಕ್ರೋಸಾಫ್ಟ್ ಡಾಟ್‌ನೆಟ್‌ನಲ್ಲಿ ಭಾರತೀಯ ಭಾಷೆ ಮತ್ತು ಕನ್ನಡದ ಮಾಹಿತಿಯ ಬಳಕೆ, ಊಡಿಕೆ, ಸಂಗ್ರಹಣೆ, ವಿಂಗಡಣೆ, ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು, ಬಹುಭಾಷಾ, ಪ್ರೋಗ್ರಾಮ್ಮಿಂಗ್, ವಿಂಡೋಸ್ (ಡೆಸ್ಕ್‌ಟಾಪ್) ಮತ್ತು ವೆಬ್ ಪ್ರೋಗ್ರಾಮ್ಮಿಂಗ್

6. ಲಿನಕ್ಸ್, ಫಾಸ್, ಸಮುದಾಯ ಮತ್ತು ಕನ್ನಡ

(ಶ್ರೀ ಓಂ ಶಿವಪ್ರಕಾಶ್, ಯುವ ಸಾಫ್ಟ್‌ವೇರ್ ತಂತ್ರಜ್ಞರು; ಪ್ರಮುಖವಾಗಿ ಮುಕ್ತ ತಂತ್ರಾಂಶ, ಲಿನಿಕ್ಸ್, ಕನ್ನಡ ವಿಕಿಪೀಡಿಯಾಗಳಲ್ಲಿ ಸಕ್ರಿಯರು, 'ಹೆಜ್ಜೆ' ಕನ್ನಡ ಯುವ ಸಮುದಾಯದ ಸಂಚಾಲಕರು)

- ಫಾಸ್ (FOSS) (ಮುಕ್ತ ಹಾಗೂ ಸ್ವತಂತ್ರ ತಂತ್ರಾಂಶ)
- ಮುಕ್ತ ತಂತ್ರಾಂಶದ ಅವಶ್ಯಕತೆ ಹಾಗೂ ಇತಿಹಾಸ
- ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಕ್ತ ತಂತ್ರಾಂಶ
- ವಿದ್ಯಾರ್ಥಿಗಳಿಗೊಂದಿಷ್ಟು ತಂತ್ರಾಂಶ
- ಲಿನಕ್ಸ್ – ನೀವೂ ಬಳಸಬಹುದು
- ಐದು ನಿಮಿಷಗಳಲ್ಲಿ ಲಿನಕ್ಸ್ ಬಳಕೆದಾರನಾಗುವುದು
- ದಿನನಿತ್ಯದ ಕಾಲೇಜಿನ ಕೆಲಸಗಳಿಗೆ ಲಿನಕ್ಸ್ ಬಳಕೆ
- ಫಾಸ್ ಅಭಿವೃದ್ಧಿ – ನಿಮ್ಮ ಕೊಡುಗೆ
- ಕನ್ನಡದಲ್ಲೂ ವ್ಯವಹರಿಸಬಹುದು
- ಸಮುದಾಯ ಮತ್ತು ಕನ್ನಡ
- ಫಾಸ್ ತಂತ್ರಜ್ಞಾನ ಮತ್ತು ತಂತ್ರಾಂಶದಲ್ಲಿ ಸಮುದಾಯದ ಪಾತ್ರ
- ಸಮುದಾಯಗಳ ಅವಶ್ಯಕತೆ ಮತ್ತು ಭಾಗವಹಿಸುವಿಕೆ
- ಮುಕ್ತವಾಗಿ ಲಭ್ಯವಿರುವ ಜ್ಞಾನ ಭಂಡಾರಗಳು (ವಿಕಿಪೀಡಿಯ, ಕಣಜ)
- ಕನ್ನಡದ ವಿಶ್ವಕೋಶ ಮತ್ತು ಇತರೆ ಸಮುದಾಯ ಯೋಜನೆಗಳಲ್ಲಿ ವಿದ್ಯಾರ್ಥಿಗಳು

www.freebookculture.com

FREE BOOK CULTURE

you sponsor. we publish. they read.

A SOCIAL RESPONSIBILITY INITIATIVE BY MITRAMAADHYAMA

Sponsor a book for educational purposes

Be the part of FIRST ever SPONSORED FREE BOOK CULTURE PROJECT in INDIA

It gives us immense pleasure to announce that MITRAMAADHYAMA has planned a unique **“Free Book Culture”**. This novel and pioneering concept would usher in a new beginning and define a responsible publishing, distribution and marketing process. The publishing industry in the background of the depleting forest wealth would have to make way for a change which would see only responsible publishing and selling as per the demand and would eliminate the unnecessary stockings of huge inventories. Free Book Culture would be fostering a demand based publishing and also encourage target oriented responsible readership audience. It also encourages the concept of free-flow of information to all the needy ones.

What is a Free Book?

- Free book is a print / online book, which will be available for free of cost to the students who are specifically in need of the same book. The book carries a tag: FREE BOOK in the place of a price tag.

Who will bear the cost of Free Book?

- Sponsors like you will be bearing the cost of production. This cost will be at actuals, and based on a transparent quotation process.

Why give a Free Book?

- Well, MITRAMAADHYAMA strongly feels that in this information era, when many information and data are provided freely, there is a need to provide specific knowledge based books written by experienced writers, in a Freely Distributable Format.
- Free Book Culture is not just a matter of costs and affordability, but a matter of philosophy. This will naturally open up a new movement of Free Book Culture in localised formats.

Can the Free Books be purchased also?

- Yes. Those who can afford to purchase it can definitely purchase a copy / multiple copies. The money thus collected will again go to the production of more and more such Free copies. The money will just revolve around this movement.

What is the benefit for institutions sponsoring the culture?

- Sponsoring institutions can always take pride in being a contemporary Open Culture movement. This will greatly enhance their social brand value.
- The sponsoring institutions can always put an advertisement conveying a social message. This will popularise the institution's brand.

Why MITRAMAADHYAMA is into this?

- Well, MITRAMAADHYAMA being a non-profit organisation has always thought of participating in the societal activities with an aggressive attitude towards free information outflow without any resistances or barriers to one and all around us, in this changing world. With social activism, media-content creation, pre-production, free information inflow as its core competence, it has decided to launch the Free Book Culture Project in order to push the idea forward. Any other

institutions wishing to join us are also welcome to foster the movement.

Are Free Books given away to whomsoever?

- The books would be distributed to target audience only, with every beneficiary willing to provide his primary personal details in a prescribed format which is given along with the Free Book.

What is the content of the First Free Book?

- The content of the First Free Book Culture Series is: Kannada & IT (The book in your hand now). This is targeted to the Graduate Students of Bangalore University, who have particular curriculum, which of course was obsolete. This content was first generated at the instance of Surana First Grade College, South End, Jayanagar, Bangalore, and six experts in Kannada – IT issues delivered daylong classes in theory as well as practical's. More than 350 students attended these classes. The same lessons are now written as a textbook content.

Okay. What next?

- With your continued support, we will bring more and more such creative, educational Titles, targeting both young and adult, based on societal needs. We will take advice from the experts and plan for a time bound publication and distribution of Free Books.

Books are a cost to the ecology. How will you fight it?

- We at MITRAMAADHYAMA fully understand the need to preserve the Ecological Balance. All the books will be printed on eco-friendly paper, and there will be a clear list of target audience before printing hundreds of books. Each book will be accounted for. Print on Demand will be the approach. If we print it on normal paper, we will ensure that two trees are grown with the printing of a set of 1000 copies of a title.

Are these books available online?

- Yes. All these books will be freely available online @ www.**mitramaadhyama.co.in** and **www.freebookculture.com**

How will you distribute the books?

- For the first Title (Kannada & IT) we will approach the colleges. Then we will reach out to all NGOs, public fora, like minded bookshops and other sources, based on our Titles.

This novel concept requires a healthy patronage in the form of good demand based sponsorship from the leading Corporate bodies and also other brand conscious and societal conscious entities.

We hope you are keen to participate in this project. Please contact

- Shri Beluru Sudarshana on 9741976789
  email: beluru@beluru.com

for more details.

HOW TO SPONSOR
Please draw cheque / DD in favour of Mitramaadhyama, Bangalore.
visit **mitramaadhyama.co.in** to know more about us

MITRAMAADHYAMA

email: beluru@beluru.com
mobile: 9741976789

Please note: We are in the process of applying for tax exemption under section 80G.